# ಹೋರಾಟದ ಹೆಜ್ಜೆಗಳು ಮತ್ತು........

(ಎಂಟು ನೃತ್ಯ ರೂಪಕಗಳು)

ಡಾ. ಸಾ.ಶಿ. ಮರುಳಯ್ಯ

**ರಾಗಿಣಿ ಶಿಕ್ಷಣ ಪ್ರತಿಷ್ಠಾನ**
ಸರ್ವಿಸ್ ರಸ್ತೆ, ವಿಜಯನಗರ 2ನೇ ಹಂತ,
ಬೆಂಗಳೂರು – 560 040

# ಮುನ್ನುಡಿ

'ಸಾಶಿಮ ನೃತ್ಯ ರೂಪಕಗಳು' (ಇಪ್ಪತ್ತೈದು) ಸ್ನೋವೈಟ್ ಮತ್ತು ಇತರ ನೃತ್ಯ ರೂಪಕಗಳು (ಹತ್ತು) ಹೊರಬಂದ ಮೇಲೆ' ಹೋರಾಟದ ಹೆಜ್ಜೆಗಳು ಮತ್ತು.... (ಎಂಟು) ನನ್ನ ಮೂರನೆಯ ನೃತ್ಯ ರೂಪಕ ಸಂಕಲನ. ಇವುಗಳಲ್ಲಿ ವಸ್ತುವೈವಿಧ್ಯತೆ ಇದ್ದಂತೆ ಪ್ರಯೋಗ ವೈವಿಧ್ಯತೆಗೂ ಅವಕಾಶವುಂಟು. ಏಕೆಂದರೆ ನಾನಿವಾವನ್ನೂ ಅಪೆರಾ ಎಂದಾಗಲಿ ಬ್ಯಾಲೆ ಎಂದಾಗಲಿ, ಶಾಸ್ತ್ರೀಯ ಸಂಗೀತ ನೃತ್ಯ ಸಂಯೋಜಿತ ಕೃತಿಗಳೆಂದಾಗಲಿ ತಿಳಿದುಕೊಂಡಿಲ್ಲ. ಅಂತಹ ಯಾವುದೇ ಶುದ್ಧ ಶಾಸ್ತ್ರಾಧಾರದಿಂದಲೂ ನಾನು ರಚಿಸಿಲ್ಲ. ಇವು ಒಂದರ್ಥದಲ್ಲಿ ಪ್ರಯೋಗದ ಸ್ತರದಲ್ಲಿಯೇ ಇವೆ ಎಂದರೆ ತಪ್ಪಾಗದು. ಆದರೆ ಈ ಪ್ರಯೋಗ ಮುಂದೆ ಪೂರ್ಣಫಲಕ್ಕೆ ಸಹಕಾರಿಯಾಗಬಹುದು. ನಮ್ಮಲ್ಲಿ ನೃತ್ಯ ರೂಪಕಗಳ ಅಭಾವವಿರುವುದರಿಂದ ಆ ಕೊರತೆ ತುಂಬಲು ನಡೆಸಿದ ಯತ್ನದ ಫಲ ಇವು.

ಪಾಶ್ಚಾತ್ಯ ರಾಷ್ಟ್ರಗಳಲ್ಲಿನ ಅಪೆರಾಗಳನ್ನು ನೋಡಿ ಬಂದ ಮೇಲೆ ಕನ್ನಡದಲ್ಲಿ ಸಂಗೀತ–ಸಾಹಿತ್ಯ–ನೃತ್ಯ ಸಂಯೋಜಿತ ರಂಗರೂಪಗಳನ್ನು ತರುವ ಪ್ರಾಮಾಣಿಕ ಪ್ರಯತ್ನ ಇದು. ಸಹೃದಯ ಚೇತನಗಳು ಸ್ವಾಗತಿಸಬೇಕಾಗಿ ಪ್ರಾರ್ಥನೆ.

ಕೃತಿರಚನೆಗೆ ಹಲವು ನೃತ್ಯ ಕಲಾ ಸಂಸ್ಥೆಗಳೇ ಮೂಲಪ್ರೇರಣೆ. ಬೇಡಿಕೆ ಬಂದಂತೆ ಬರೆದುಕೊಟ್ಟಿದ್ದೇನೆ. ಆವರೆಲ್ಲರ ಪ್ರೋತ್ಸಾಹಕ್ಕೆ ಕೃತಜ್ಞತೆಗಳು. ಇದೇ ಸಂದರ್ಭದಲ್ಲಿ ಆಣಿಮುತ್ತಿನ ವಿಮರ್ಶಾತ್ಮಕ ನುಡಿಗಳನ್ನಾಡಿರುವ ಡಾ ॥ ಆರ್. ಸತ್ಯನಾರಾಯಣರವರಿಗೆ ನನ್ನ ಪ್ರೀತಿಪೂರ್ವಕ ಪ್ರಣಾಮಗಳು. ಅಚ್ಚುಕಟ್ಟಾದ ಅಚ್ಚಿಗೆ ಕಾರಣರಾದ ಪ್ರಗತಿ ಗ್ರಾಫಿಕ್ಸ್‌ನ ಚಿರಂಜೀವಿ ಪ್ರಮೋದನಿಗೂ, ನನ್ನ ನೆಚ್ಚಿನ ಗೆಳೆಯರಾದ ಡಾ. ಎಸ್. ವಿದ್ಯಾಶಂಕರರವರಿಗೂ, ಸ್ನೇಹಾ ಪ್ರಿಂಟರ್ಸ್ ಮಾಲೀಕರಾದ ವಿ. ಮಹೇಶ್‌ರವರಿಗೂ ಧನ್ಯವಾದಗಳು.

'ರಾಗಿಣಿ'
2 ಅಕ್ಟೋಬರ್ 2000

ಸಾ.ಶಿ. ಮರುಳಯ್ಯ
ಬೆಂಗಳೂರು

# ಪರಿವಿಡಿ


| | | |
|---|---|---|
| 1. | ಹೋರಾಟದ ಹೆಜ್ಜೆಗಳು | 1 |
| 2. | ಸಂಸಾರಯೋಗ | 13 |
| 3. | ಸಂಕ್ರಾಂತಿ | 29 |
| 4. | ಗಣೇಶ ಮಹಿಮೆ | 35 |
| 5. | ಸಿಂಧುರಾಸುರ | 57 |
| 6. | ಬಲಿದಾನ | 72 |
| 7. | ರೇಣುಕ ಪರಂಜ್ಯೋತಿ | 82 |
| 8. | ಯೇಸು ಬಂದ ಧರೆಗೆ | 125 |

# ಹೋರಾಟದ ಹೆಜ್ಜೆಗಳು

## ಪಾತ್ರಗಳು :

ನಾಯಕ
ರಾಮರಾವ್
ಚೆಲ್ವಿ
ಇನ್ಸ್‌ಪೆಕ್ಟರ್
ಬೆಸ್ತರು
ಯುವಜನ
ನರ್ತಕ
ನರ್ತಕಿಯರು

ಪ್ರದರ್ಶನ

ಬೆಂಗಳೂರು ದೂರದರ್ಶನ ಕೇಂದ್ರ,

**ದೃಶ್ಯ 1 :**

ತೆರೆ ಸರಿದಾಗ ರಂಗದ ಮೇಲೆ ಸಜ್ಜಾಗಿ ನಿಂತಿರುವ ನರ್ತಕ ನರ್ತಕಿಯರ ಗೆಜ್ಜೆಯ ಹೆಜ್ಜೆ ಮೇಲೆ ಮಾತ್ರ ಬೆಳಕು ಹರಡಿರಬೇಕು. ಬೆಳಕಿನ ವಿನ್ಯಾಸಕ್ಕನುಗುಣವಾಗಿ ನೃತ್ಯಗಾರರ ಲಯಬದ್ಧ ಚಲನೆ.

**ಹಾಡು :** ಹೆಜ್ಜೆಗಳು ಇವು ಹೆಜ್ಜೆಗಳು
ಗೆಜ್ಜೆಯ ಕಾಲಿನ ಮಜ್ಜೆಗಳು ॥
ಹಚ್ಚನೆ ಹಸುರಿನ ಪಚ್ಚೆಯ ಮೇಲೆ
ಮಕಮಲ್ಲಿನ ಮೃದು ತಲ್ಪದ ಮೇಲೆ
ನೂಪುರ ಗೋಪುರ ಕಿಂಕಿಣಿ ಕಲರವ
ಝುಂಝುಣ ಝುಣ ಝುಣ ಝುಣರುಲಿಯೀಯುವ ॥
ಹೆಜ್ಜೆಗಳು ಇವು ಹೆಜ್ಜೆಗಳು
ಗೆಜ್ಜೆಯ ಕಾಲಿನ ಮಜ್ಜೆಗಳು ॥
ಹೆಜ್ಜೆಯು ಹೆಜ್ಜೆಯು ನಾಡಿನ ಪ್ರಗತಿಯು
ಸಾಧನೆ ಸಿದ್ಧಿಯ ಗುರುತುಗಳು
ಸ್ವಾತಂತ್ರ್ಯೋದಯ ಸ್ವರ್ಣ ಪ್ರಭಾತದಿ
ಸುಗ್ಗಿಯ ಹಿಗ್ಗಿನ ಬುಗ್ಗೆಗಳು ॥
ಹೆಜ್ಜೆಗಳು ಇವು ಹೆಜ್ಜೆಗಳು
ಗೆಜ್ಜೆಯ ಕಾಲಿನ ಮಜ್ಜೆಗಳು ॥

ನರ್ತನ ನಡೆಯುತ್ತಿರುವಂತೆಯೇ ಹಿನ್ನೆಲೆಯಲ್ಲಿ ವಾಣಿಯೊಂದು ಗಂಭೀರ ಧ್ವನಿಯಲ್ಲಿ ಮೊಳಗಬೇಕು.

**ವಾಣಿ :** ಬೆಳಗುತಿರು ಭಾರತದ ಬಿಡುಗಡೆಯ ಬೆಳಕೆ
ಬೆಳಗುತಿರು ಸ್ವಾತಂತ್ರ್ಯ ಸ್ವರ್ಣ ಹಣತೆಯ ಬೆಳಕೆ ॥
ತೈಲತೀರಿದರುಂಟು ದುಡಿದವರ ಬೆಮರು
ಬತ್ತಿಯದು ಬರಡಾಗೆ ಮಡಿವವರ ಉಸಿರು
ನಿನ್ನೊಡಲ ಬಟ್ಟಲಿಗೆ ಕೋಟಿ ಮಕ್ಕಳ ಬಸಿರು
ಮೀಸಲಿದೆ ಓ ಬೆಳಕೆ ಆ ಹುತಾತ್ಮರ ಮಡಿಲು ॥
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೇ
ಶ್ರಾವಣದ ಶುಭದಿನದಿ ಎಮೆದೆರೆದ ಬೆಳಕೇ ॥
ಬೆಳಗುತಿರು ಜಗದೊಡಲ ಚೆಲುವಿಕೆಯ ಚೇತನವೆ
ಬೆಳಗುತಿರು ಜನ ಮನದ ಸುಸ್ಮೃತಿಯ ಸೌರಭವೆ
ಬೆಳಗುತಿರು ರಾಷ್ಟ್ರಕನ ನಡೆಸುತಿಹ ಹೊಂಬೆಳಕೆ
ಬೆಳಗುತಿರು ಅಭಿಜಾತ ಸ್ವಾತಂತ್ರ್ಯದಾ ಹಣತೆ ॥
ಬೆಳಗುತಿರು ಬೆಳಗುತಿರು ಬೆಳಗುತಿರು ಬೆಳಕೆ
ಶ್ರಾವಣದ ಶುಭ ದಿನದಿ ಎಮೆದೆರೆದ ಬೆಳಕೆ ॥

**ವಾಣಿ :** ಭಾರತಾಂಬೆಯ ಮನದ ಸುಮಧುರ ಸುಸ್ವಪ್ನವೇ,
ಓ ಭಾರತೀಯ,
ಭಾರತದ ಸ್ವಾತಂತ್ರ್ಯ ಬ್ರಿಟಿಷರಿತ್ತ ದಾನವಲ್ಲ ಭಾರತಮಾತೆಯ
ಮಕ್ಕಳ ಬಲಿದಾನದ ಫಲ !
ರಕ್ತ ರಹಿತ ಕ್ರಾಂತಿಯೆಂದು ಕರೆಸಿಕೊಂಡರೂ, ಇದರ
ತೆರೆಯ ಮರೆಯಲ್ಲಿ ಶತ ಸಹಸ್ರ ದೇಶ ಪ್ರೇಮಿಗಳ ಹತ್ಯೆ
ನಡೆದಿದೆ. ಅವರೆ ರಕ್ತಕೋಡಿ ಹರಿದಿದೆ ಭರತ ಖಂಡದ ಬೀದಿ
ಬೀದಿಗಳಲ್ಲಿ ಮುರಿಬಿದ್ದ ಮೂಳೆಗಳು ಬೆಟ್ಟದಷ್ಟಾಗಿವೆ ರಾಶಿ ರಾಶಿ !

ಅವರ ಅಸ್ಥಿಪಂಜರದ ಮೇಲೆ ಭವ್ಯ ಭಾರತದ ನಿರ್ಮಾಣವಾಗಿದೆ
ಎಂಬುದನ್ನು ಮರೆಯಬೇಡ ಸೋದರನೆ, ಸಂಪುಟದ ಪುಟವೆಲ್ಲಾ
ಸಂಕಟದ ಶಿಬಿರ ! ನೋಡಲ್ಲಿ :
ಲಾಹೋರಿನ ನಡುಬೀದಿಯಲ್ಲಿ ಲಾಲಾ ಲಜಪತರಾಯರು ಪಾತಕಿಗಳ
ಲಾಠಿ ಪ್ರಹಾರಕ್ಕೆ ಸಿಕ್ಕು ನೆತ್ತರು ಕಾರಿ ಸತ್ತರು, ಅತ್ತ ಪಂಜಾಬಿನ
ಅಮೃತಸರದ ಜಾಲಿಯನ್‌ವಾಲಾಬಾಗ್‌ನಲ್ಲಿ ಪಾಪಿ ಡಯರನ
ಗುಂಡಿನೇಟಿಗೆ ಕೇವಲ ಹತ್ತು ನಿಮಿಷಗಳಲ್ಲಿ 1600 ಗುಂಡುಗಳು
ಹಾರಿ ನೂರಾರು ಜನ ಸ್ವಾತಂತ್ರ್ಯ ಪ್ರೇಮಿಗಳನ್ನು ಬಲಿತೆಗೆದುಕೊಂಡವು.
ಇತ್ತ ಭಗತ್‌ಸಿಂಗ್, ಸುಖದೇವ್,

ಕಾರಾಗೃಹದ ನೇಣಿಗೆ ಬಲಿಯಾದರು. ಅವರ ಅರೆಬೆಂದ ದೇಹಗಳು ಸಟ್ಲೇಜ್ ನದಿಯ ಮೀನುಗಳಿಗೆ ಅಹಾರವಾದವು ಇಂಥವೆನಿತೋ ಹತ್ಯೆಗಳು! ಲೆಕ್ಕಕ್ಕೆ ಸಂಖ್ಯೆ ಇಲ್ಲ! ಅಂತೆಯೇ ಯಾರ ಗಮನಕ್ಕೂ ಬಾರದ ಅಮಾಯಕ ಜನರೂ ಬಲಿಯಾದರು. ಬಾ, ಸೋದರನೆ, ನನ್ನೊಡನೆ ಬಾ. ಶಿವಮೊಗ್ಗೆಯ ಬಳಿಯ ಈಸೂರ ತೋರುವೆನು. ಕೇಳು ಆ ಜಯ ಘೋಷ!

(ಈಸೂರಿನ ವೀರಭದ್ರ ದೇವಾಲಯದ ಮುಂದೆ ಯುವಜನರ ಸಂದಣಿ, ಘೋಷಣೆ, ಜಯಕಾರ)

ಯುವಜನ : ಏಸೂರ ಕೊಟ್ಟರೂ ಈಸೂರ ಕೊಡೆವು
ಏಸೂರ ಕೊಟ್ಟರೂ ಈಸೂರ ಬಿಡೆವು
ಎಂಬ ಘೋಷಣೆ ನಮ್ಮ ತಾರಕದ ಮಂತ್ರ
ಇದೆ ನಿತ್ಯ ಗಾಯತ್ರಿ ಭಾರತ ಸ್ವತಂತ್ರ !
ಹೆತ್ತ ತಾಯ್ ಹೊತ್ತ ನೆಲ ಇಬ್ಬರೂ ಒಂದೆ
ಅವರ ಋಣ ತೀರಿಸಲು ಪಣತೊಡುವೆವಿಂದೆ
ಸತ್ಯಕ್ಕೆ ಶರಣಾಗಿ ಹೋರಾಟ ನಡೆಸುವೆವು
ಜಯಘೋಷ ಜಯಘೋಷ ಘೋಷಿಪೆವು ನಾವು ॥
ರಕ್ತ ಧುನಿ ಧಮನಿಯಲಿ ತುಡಿಯುತಿದೆ ಹೃತ್ಕುಕ್ಷಿ
ನಮ್ಮೂರ ದೈವವೀ ವೀರಭದ್ರನೆ ಸಾಕ್ಷಿ
ಪಾಪಿ ಬ್ರಿಟಿಷರ ದೈತ್ಯ ದ್ರೋಹ ದಬ್ಬಾಳಿಕೆಗೆ
ಕೊಡಲಿ ಎತ್ತುವೆವಿಂದೇ ಹೋರಟೆಗೆ ನಾಂದಿ !
ಈಸೂರಿನೈಸಿರಿಗೆ ಜಯವಾಗಲಿ !
ಈಸೂರ ಹೋರಟೆಗೆ ಜಯವಾಗಲಿ !!

(ಬಾವುಟ ಹಿಡಿದ ಯುವಕರು ನರ್ತಿಸುತ್ತಿರುವಾಗ ನೈಪಥ್ಯದಲ್ಲಿ :
ಅಯ್ಯೋ ಅಯ್ಯೋ ಈಸೂರೇ
ಸೂರೆಯಾದೆಯಾ ಈಸೂರೇ ॥
ಎಂಬ ಗೋಳ್ಕರೆ ಕೇಳಿಬರುತ್ತದೆ. ಯುವಕರು ರಂಗಭೂಮಿಯ ಹಿಂಭಾಗದ ಪರದೆ ಬಳಿಗೆ ಸರಿಯುತ್ತಾರೆ. ಅವರ ಮುಂಭಾಗದಲ್ಲಿ ಲಾವಣಿ ಹರಿದಂತೆ ಕ್ರಿಯೆ ನಡೆಯುತ್ತಾ ಹೋಗುತ್ತದೆ.)

**ಲಾವಣಿ :**

ಭಾರತ ಪುತ್ರರೆ ಬಂಧ ವಿಮುಕ್ತರೆ
ಕೇಳಿರಿ ಮುಂದಿನ ಕಥೆಯನ್ನ
ಎದೆನಡುಗಿಸುವಾ ವ್ಯಥೆಯನ್ನ ॥
ತರುಣ ತೇಜಸ್ವೀ ಈಸೂರ ಯುವಕರು
ಘೋಷಿಸಿಕೊಂಡರು ತಮ್ಮಲ್ಲೆ
ತಮ್ಮೂರು ಯಾರ ಅಧೀನವೆ ಅಲ್ಲವು
ಗ್ರಾಮರಾಜ್ಯವದು ತಮದೆಂದು
ಆಂಗ್ಲರಾಡಳಿತ ಮಾನ್ಯವಲ್ಲವೆಂದು
ಯಾವ ಅಧಿಕಾರಿಗೂ ಊರೊಳು ಪ್ರವೇಶವಿಲ್ಲವೆಂದು

(ವಚನ ಧಾಟಿಯಲ್ಲಿ)
ಬೋರ್ಡು ಬರೆಸಿದರು ನೇತು ಹಾಕಿದರು
ಊರಿನ ಅಗಸೆಯ ಬಾಗಿಲಲಿ ॥

ಪಕ್ಕದ ಊರಿನ ಪಟೇಲ ಬಂದನು ಕಂದಾಯ ವಸೂಲಿ ಕಾರ್ಯಕ್ಕೆ. ಈಸೂರಿನ ಯುವಕರ ದಫ್ತರ್ ಕಸಿದು ಗಾಂಧಿ ಟೋಪಿಯನ್ನು ಹಾಕಿದರು. ಬ್ರಿಟಿಷರೆ ಭಾರತ ಬಿಟ್ಟು ತೊಲಗಿರಿ ಎಂಬ ಘೋಷಣೆಯ ಕೂಗಿದರು. ಸಿಟ್ಟಿಗೆದ್ದ ಆ ಪಟೇಲ ಚೆಂಬಸ್ಯ ಪೊಲೀಸರಿಗೆ ದೂರಿತ್ತ. ಸಾವಿರದೊಂಭೈನೂರ ನಲವತ್ತೆರಡರ ಸೆಪ್ಟೆಂಬರ್ ಇಪ್ಪತ್ತೆಂಟರಲ್ಲಿ ತಾಲೂಕ್ ಅಮಲ್ದಾರ ಚನ್ನಕೃಷ್ಣಯ್ಯ. ಇನ್ಸ್‌ಪೆಕ್ಟರ್ ಕೆಂಚೇಗೌಡ ಕೆಲವರು ಪೋಲೀಸ್ ಪೇದೆಗಳೊಂದಿಗೆ ಬಂದರು ಈಸೂರ್ ಬಳಿ ಸಾರಿ.

**ಲಾವಣಿ :** ಯಾವನೆ ಬ್ರಿಟಿಷರ ಗುಲಾಮನಿಗಿಲ್ಲಿ ಪ್ರವೇಶವಿಲ್ಲೆಂಬ ಬೋರ್ಡನು ಕಿತ್ತು ಬೂಟಲಿ ತುಳಿದು ಇಟ್ಟರು ಊರಿಗೆ ಧಾಳಿಯನು ! ಯುವಕರು ತಡೆಯಲು ಲಾಠಿಯ ಬೀಸಿ ಬಾಯ್ನೆಟ್ಟುಗಳಲಿ ತಿವಿ ತಿವಿದು ಇರಿದರು ಕೊರೆದರು ಕಂಗಳ ಕಳೆದರು ನುರಿನುರಿಗೊಂಡವು ಮೂಳೆಗಳು ! ಮಕ್ಕಳ ಮುಖಗಳು ಕೆತ್ತಿಹೋದವೊ ನೆತ್ತರಿನೋಕುಳಿ ಎಲ್ಲೆಡೆಯು ! ಮುರಿದವು ಕಾಲು ಹರಿದವು ಬೆನ್ನು, ರಕ್ತಕಾರಿದವು ಬಾಯಿಗಳು ! ಮಕ್ಕಳ ಗೋಳು ಗಗನವ ಮುಟ್ಟಲು ತಡೆಯದೆ ನಡೆದನು ಅಲ್ಲೊಬ್ಬ ಗುಡಿಯ ಜಾಗಟೆಯ ಬಾಜಿಸಿದಾಗಲೆ ನುಗ್ಗಿತು ಜನ ಊರೊಳಗಿಂದ ಸಾವಿರ ಸಾವಿರ ಜನರು ಕುಡುಗೋಲ್ ಕೊಡಲಿ ದೊಣ್ಣೆಯ ಹಿಡಿದು ಕಡಿಯಿರಿ ಬಡಿಯಿರಿ ಕೊಚ್ಚಿ ಹಾಕಿರೀ ಚಿಂದಿಯಾಗಲೀ ಪಾಪಿಗಳು ! ಎಂದಾಕ್ರೋಶದಿ ಮುಗಿಸೇ ಬಿಟ್ಟರು ಅಮಲ್ದಾರ ಇನ್ಸ್‌ಪೆಕ್ಟರನು !
ಇಬ್ಬರ ಹೆಣಗಳು ಬೀದಿಯ ಮೇಲೆ ಬಿದ್ದಾಗ
ಉಳಿದ ಪೇದೆಗಳು ಕಾಲಿಗೆ ಬುದ್ಧಿ ಹೇಳಿದರಾಗ ॥

**ಲಾವಣಿ:** ಮಾರನೆ ದಿನ ಈಸೂರಿಗೆ ಬಂದಿತು ಮಿಲಿಟರಿ ಪೋಲೀಸ್ ದೊಡ್ಡ ಪಡೆ ಗಂಡಸರೆಲ್ಲರು ಅಡವಿಯ ಬಿದ್ದರು ಕವಲೇ ದುರ್ಗದ ಕಾಡಿನಲಿ. ಮಿಲಿಟರಿ ಮೂರ್ಖರು ಪೋಲೀಸ್ ಕಟುಕರು ಮನೆಗಳಿಗೆಲ್ಲಾ ನುಗ್ಗಿದರು. ಕುಡಿಯುವ ಹಸುಳೆಯ ಬಾಯ್ಗಳ ಹರಿದು ತೊಟ್ಟಿಲ ಬೀದಿಗೆ ತೂರಿದರು. ಹರೆಯದ ಹೆಂಗಳ ಬತ್ತಲೆ ನಿಲಿಸಿ ಅತ್ಯಾಚಾರವನೆಸಗಿದರು. ಅಯ್ಯೋ ಅಮ್ಮಾ ಅಪ್ಪಾ ಎನ್ನುವ ಮುದುಕರ ತುಳಿದರು ಬೂಟಿನಲಿ. ಸಿಕ್ಕಿದ ಒಡವೇ ವಸ್ತುವ ದೋಚಿ ಅಟ್ಟ ಹಾಸದಲಿ ಬೀಗಿದರು.
ಮಾರನೆ ದಿನವೆ ಆರಂಭವಾಯಿತು ಕಾಡಿನ ಕಲಿಗಳ ಮೃಗಬೇಟೆ ಸಿಕ್ಕಿದರೆಲ್ಲರ ಜೈಲಿಗೆ ಕಳಿಸಿ ಮರಣದಂಡನೆಗೆ ಗುರಿಮಾಡೆ.
ಗುರಪ್ಪ ಶಂಕ್ರಪ್ಪ ಮಲ್ಲಪ್ಪ ಹಾಲಪ್ಪ ಸೂರ್ಯನಾರಾಯಣಾಚಾರ್ಯರಿಗೆ
ಆಯಿತು ದಾರುಣ ಗಲ್ಲಿನ ಶಿಕ್ಷೆ ಉಳಿದವರಿಗೆ ಜೀವಾವಧಿ ಶಿಕ್ಷೆ !

– ವಚನ ಧಾಟಿಯಲ್ಲಿ –

ಈಸೂರಿನ ಈ ಮಾರಣ ಹೋಮಕೆ
ಬಲಿಪಶುವಾದದು ಮುಗ್ಧ ಜನ

**ಲಾವಣಿ:** ಭಾರತ ಪುತ್ರರೆ ಬಂಧ ವಿಮುಕ್ತರೆ ಕೇಳಿರಿ ಕೇಳಿರಿ ಈ ಕಥೆಯ
ಭಾರತ ಸ್ವಾತಂತ್ರ್ಯೇತಿಹಾಸದಾ ರಕ್ತ ಸಂಪುಟದ ಈ ವ್ಯಥೆಯ ॥

**ದೃಶ್ಯ ಬದಲಾವಣೆ :**

(ರಂಗಭೂಮಿ ಚಣಕಾಲ ಕಣ್ಣು ಮುಚ್ಚಿ ಕಣ್ಣು ತೆರೆಯುತ್ತದೆ. ಆ ಕತ್ತಲ ಗರ್ಭದಿಂದಲೇ ಜಾನಪದ ಹಾಡು ಆರಂಭವಾಗುತ್ತದೆ.)

**ವಾಣಿ :** ಕೂರ್ವೆ ಎಂಬ ಪುಟ್ಟ ದ್ವೀಪವೊಂದರ ಬೆಸ್ತರು ಬಲೆ, ಕೋಲು ಹುಟ್ಟುಗಳನ್ನು ಹಿಡಿದು ಹಬ್ಬದ ಸುಗ್ಗಿ ಕುಣಿತ ಕುಣಿಯುತ್ತಿರುತ್ತಾರೆ ಹಾಡಿಕೊಂಡು

**ಬೆಸ್ತರು:**

ಮೂಡು ಮಲೆಯಾ ಮ್ಯಾಲೆ
ಬಡಗ ಬಾರೆಯ ಮ್ಯಾಲೆ
ಕಣಿವೆಯ ಕಿಬ್ಬಿ ಕೆನ್ನೆ ಮ್ಯಾಲೆ
ಕಣಿವೆಯ ಕಿಬ್ಬಿ ಕೆನ್ನೇಯ ಮ್ಯಾಲೆ
ದಿಬ್ಬಣ ಹೊರಟೈತೆ ಹೊಸಹಬ್ಬ !
ಅಲಲೋ ಹೊಯ್ ಹೊಯ್

ಲಾಲಿ ಲೋ ಸೈ ಸೈ ॥

**ವಾಣಿ :** ಇದು ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಬಳಿ ಇರುವ ಕೂರ್ವೆ ಎಂಬ ಸಣ್ಣ ದ್ವೀಪದಿಂದ ಕೇಳಿಬರುತ್ತಿರುವ ಹಬ್ಬದ ಸುಗ್ಗಿ ಹಾಡು. ಗಂಗಾವಳಿ ನದಿ ಸುತ್ತುವರೆದು ನಿರ್ಮಿಸಿರುವ ಒಂದು ದ್ವೀಪ ಕೂರ್ವೆ. ಅಲ್ಲೊಂದು ಅಂಬಿಗರ ಬೂಡು. ಅದು 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಕರಪತ್ರಗಳು, ಕಲ್ಲಚ್ಚಿನ ಸುದ್ದಿ ಪತ್ರಿಕೆಗಳನ್ನು ಗುಟ್ಟಾಗಿ ಮುದ್ರಿಸಿ ಮುಟ್ಟಿಸುತ್ತಿದ್ದ ಪಿ. ಎಸ್. ನಾರಾಯಣರಾಯರು ಗುಪ್ತವಾಗಿ ಆಶ್ರಯ ಪಡೆದತಾಣ. ಅಲ್ಲಿನ ವ್ಯಥೆಯ ಕಥೆ ಕೇಳಿ.

(ಲಯಗತಿಯಲ್ಲಿ ಹಾಡು ಮತ್ತು ನರ್ತನ)

**ಬೆಸ್ತರು :**

ಹಸೆಯಾನೇರೀ ನಿಂತ ಹೊಸ ಹೆಣ್ಣ ತೆರದಲ್ಲಿ
ಹಸುರುಟ್ಟು ನಿಂತೌಳೆ ಬನದವ್ವ ॥
ಟೊಂಗೆ ಟೊಂಗೆಗು ಪ್ರಾಯ
ತುಂಬಿದೆ ಹೊಸ ಹರೆಯ
ಹಕ್ಕಿ ಸೋಬಾನೆ ಬನವೆಲ್ಲ
ಹಕ್ಕಿ ಸೋಬಾನೆ ಬನವೆಲ್ಲ ತುಂಬಿರಲು
ಗಿಣಿರಾಮ ಕಣಿಯಾ ಹೇಳ್ಯಾನೆ ॥
ಮಾವು ಬೇವುಗಳೆಲ್ಲ ಮಲ್ಲಿಗೆ ಮುಡಿದವ್ವೆ
ಮನೆ ಮುಂದೆ ಒಳಗೇ ಸಿಂಗಾರ.
ಮನೆ ಮುಂದೆ ಒಳಗೇ ಸಿಂಗಾರ ಮಾಡ್ಯಾಳೆ
ಮಳೆ ಬಂದು ಚಳೆಯಾ ಕೊಟ್ಟೈತೇ ॥
ಬಾಳೆಲ್ಲ ಗೋಳಲ್ಲ ಜೋನು ಜೋನೀ ಬೆಲ್ಲ
ಮುಳ್ಳು ಮಾಣಿಕವೊ ಬಂಗಾರ !
ಮುಳ್ಳು ಮಾಣಿಕ್ಯ ಬಂಗಾರ ಬೆಲೆ ಒಂದೆ
ಒಳ್ಳೆ ಬಾಳೇವು ಬಾಳೆಂದು ॥

**ನಾಯಕ :** ಚೆಲ್ವಿ, ಓ ಚೆಲ್ವಿ
ಕುಣಿದದ್ದು ಸಾಕು. ಕುಡಿಯಾಕೇನಾರ ತರ್ರೇ !

**ರಾಮ**

**ರಾವ್ :** ಕುಡಿಯಾಕೆ ! ನಾಯ್ಕ ನಿಮ್ಮಲ್ಲಿನ್ನೂ ಕುಡಿಯೋ ಚಟ ಇದೆಯೇನು ?

**ನಾಯಕ :** ಅಯ್ನೋರೆ, ಕುಡಿಯಾಕೆ ಅಂದ್ರೆ ಕಷಾಯ; ಕಳ್ಳಲ್ಲ !
ಗಾಂಧಿ ಮಾತ್ಮ ಹೇಳ್ದಾಗ್ನಿಂದ ನಮ್ಮ ಬೂಡ್ನಾಗೆ ಯಾರೂ
ಕುಡಿಯಾಕಿಲ್ಲ. ಈ ಸೀತದ ನೆಲಕ್ಕೆ ಸುಂಟಿ ಕಸಾಯ ಒಳ್ಳೆ ಸಿದ್ದೌಸ್ತ !

**ರಾಮ :** ನಾಯಕ ನಿಮ್ಮ ಉಪಕಾರ ಮರೆಯಲಾರೆ

**ನಾಯಕ :** ಏನು ಉಪ್ಪು ಕಾರ ಬುಡಿ ನನ್ನೊಡೆಯ. ದೇಸ ಎಕ್ಕುಟ್ಟಿ ಹೋಗೋ ಹೊತ್ನಾಗೆ ಗಾಂಧ್ಯಪ್ಪ ಹೇಳಿದಂಗೆ ಮಾಡಿಕೊಂಡು, ಹೆಂಡರು ಮಕ್ಕಳು ಬುಟ್ಟು ಬಂದು ದೇಸಕ್ಕಾಗಿ ದುಡೀತಿರೊ ನಿಮಗೆ ಈಸು ಸಾಯಮಾಡೊ ಅವಕಾಸಕೊಟ್ರಿ. ಹೂವಿನ ಜತೆಯಾಗೆ ನಾರೂ ಸ್ವರ್ಗ ಸೇರಿದಾಂಗೆ ನಮ್ಗೂ ವಸಿ ಪುಣ್ಯ ಬಂತು !

**ರಾಮ :** ಏನೋ ಅಪ್ಪಾ ಹತ್ತು ದಿನಗಳ ಕಾಲ ಬಂಧುವಿಗು ಮುಗಿಲಾಗಿ ನೋಡಿಕೊಂಡಿ ನನ್ನ.

**(ಅಷ್ಟರಲ್ಲಿ ಚೆಲ್ವಿ ಕಷಾಯ ತಂದು ಕೊಡುತ್ತಾಳೆ ಮಣ್ಣಿನಲೋಟಗಳಲ್ಲಿ ಇಬ್ಬರೂ ಗುಟುಕಿದರು)**

ಕರಪತ್ರಗಳ ಕೊಂಡು ಅಂಕೋಲ ಭಟ್ಕಳ, ಕುಮಟ, ಹೊನ್ನಾವರ ಮತ್ತೆ ಧಾರವಾಡ ಎಲ್ಲೆಡೆಗು ಮುಟ್ಟಿಸಿರೀ ನೀವು ಗುಪ್ತವಾಗಿ. ನಾಯಕ, ಸ್ವಾತಂತ್ರ್ಯ ಸಮರದಲಿ ಹೋರಾಟ ನಡೆಸುತಿಹ ರಾಷ್ಟ್ರ ನಾಯಕರ ಸೇವೆಗಿಂ ಮುಗಿಲಹುದು ನಿಮ್ಮ ಬೂಡಿನ ಸೇವೆ. ಬೆಸ್ತರಾದರೆ ಏನು ರಾಷ್ಟ್ರಕ್ಕೆ ದುಡಿದವರು.

(ಅಷ್ಟರಲ್ಲಿ ಬೆಸ್ತನೊಬ್ಬನ ದೂರದ ಶಿಳ್ಳೆ ಕೇಳಿಬರುತ್ತದೆ)

ಯಾವುದೋ ಶಿಳ್ಳೆ ದನಿ !

**ನಾಯಕ :** ಅಹುದು ಸಾಮೇರೇ ಬೇಗೇಳಿ ! ಅದು ಅಪಾಯದ ಗಂಟೆ.

ಹೂಂ.......
(ಓರ್ವ ಬೆಸ್ತ ಓಡಿಬಂದು)
**ಬೆಸ್ತ** : ಒಡೆಯಾ ಪೋಲೀಸರ ದಂಡೇ ಬರ್ತಾ ಐತೆ. ನಮ್ಮ ನಡುಗಡ್ಡೆ ಸುತ್ತಾಮುತ್ತಾ ಬೇಲಿಕಟ್ಕೊಂಡು ನಿಂತ್ಯೆತೆ.
**ನಾಯಕ :** ರಾಯರೆ, ಬೇಗ ಹೊರಡಿ, ತಡಮಾಡಿದರೆ ನಾವಾರೂ ಉಳಿಯಾಕಿಲ್ಲ. ಇಲ್ಲೇ ಕಾಡಿನಾಗೆ ನುಸುಳ್ಕೊಂಡು ಗಂಗೊಳ್ಳಿ ಹೊಳೇ ಬಿದ್ದು ಆಚೆ ದಡ ಸೇರಾನ, ಅಲ್ಲ್ಯೆತೆ ಗರುಡಮಲೆ ಬೆಟ್ಟ, ಅಲ್ಲಿಗೆ ಬರಾಕೆ ಯಾರಿಗೂ ಆಗಲ್ಲ....ನಮ್ಮ ಹೈಕಳು ಹೊಳೆ ದಂಡ್ಯಾಗೆ ಹರಿಗೋಲು ಸಿದ್ಧಾ ಮಾಡ್ಕೊಂಡು ಕಾಯ್ತಾ ಔರೆ !
**ಬೆಸ್ತ** : ಇಲ್ಲ ಒಡೆಯ, ಅಲ್ಲೆಲ್ಲಾ ಸಾಲಾಗಿ ಬಂದೂಕಗಳು ಬಾಯಿ ತೆರಕೊಂಡು ನಿಂತವ್ವೆ !
**ನಾಯಕ :** ಆಗಾದ್ರೇ.......
**ಚೆಲ್ವಿ** : ಚಿಂತೆಯಾಕ ದೊಡ್ಡಪ್ಪ. ನೀವೆಲ್ಲ ಈ ಸರುವಿನಾಗೋಗಿ ಆಳು ಬಾವಿಯಾಗೆ ಅಡಕ್ಕಳ್ಳಿ, ಬಂದೋನ ನಾನು ನೋಡ್ಕಂತೀನಿ.
**ಎಲ್ಲರೂ :** ಆಗಲಿ......ಆಗಲಿ......ಹಾಗೆ ಮಾಡು
(ಅತ್ತ ಇತ್ತ ಅಡ್ಡಾಡಿ ಓಡುವರು)
**ಚೆಲ್ವಿ** : (ಯಾವುದೂ ಗೊತ್ತಿಲ್ಲದವಳಂತೆ ನಟಿಸುತ್ತಾ ಹಾಡುತ್ತಾ ಕುಣ್ಯುತ್ತಿರುತ್ತಾಳೆ)
ಸುವ್ವಿ ಸುವ್ವೀ ಸುವ್ವಿ ಸುವ್ವಲಾಲಿ
ಸುವ್ವೀ ಸುವ್ವರೆ ಸುವಿವಸುವ್ವಲಾಲಿ......
ಮಾಗಿ ಮುಗಿದು ರಾಗಿ ತುಂಬಿ ಸುವ್ವಲಾಲಿ
ನವಣೆ ಕವಣೆ ಆಡುವಾಗ ಸುವ್ವಲಾಲಿ
ತೆಂಗು ಬೀಗಿ ನಕ್ಕಾಗ ಸುವ್ವಲಾಲಿ
ಬಾಳೆ ತೋಳ ಬೀಸಿದಾಗ ಸುವ್ವಲಾಲಿ ॥
ಅಡಕೆ ಜಡೆಯ ಚೆಲ್ಲಿದಾಗ ಸುವ್ವಲಾಲಿ
ಮಡಕೆ ಕಾಳು ಮುಡಿ ಓಳ್ಗೆ ಸುವ್ವಲಾಲಿ ॥
ಬತ್ತ ಮುತ್ತು ಚೆಲ್ಲುತಾವೆ ಸುವ್ವಲಾಲಿ
ಸಾಸ್ವೆ ಪಿಸ್ ಪಿಸ್ ಅನ್ನುತಾವೆ ಸುವ್ವಲಾಲಿ ॥
ಹಸುರಿನ ಮೇಲೆ ಹೆಸರು ಬರೆಯೊ ಸುವ್ವಲಾಲಿ
ಬನಶಂಕರಮ್ಮ ಬರುತಾಳೆ ಸುವ್ವಲಾಲಿ ॥
**ಇನ್ಸ್‌ಪೆಕ್ಟರ್** : (ಪ್ರವೇಶಿಸಿ)
ಏ ಹುಡ್ಗೀ....ಎಲೇ ಹುಡ್ಗೀ.....
(ಚೆಲ್ವಿ ಕೇಳದವಳಂತೆ ಹಾಡನ್ನು ಗುನುಗುತ್ತಾ ಕುಣ್ಯುತ್ತಿರುತ್ತಾಳೆ. ಸಿಟ್ಟಿಗೆದ್ದ ಇನ್ಸ್‌ಪೆಕ್ಟರ್ ಹಿಡಿದು ನಿಲ್ಲಿಸಿ)
ಏ ಮೈಕೆಟ್ಟೋಳೆ, ಕೂಗೋದು ಕೇಳಿಸಲಿಲ್ವ?
**ಚೆಲ್ವಿ** : ಅಯ್ಯಯ್ಯಯ್ಯೋ ! ಸಾಮೇರು, ಸರದಾರ್ರು ! ಏನ್ ಏನ್ ಬುದ್ಧಿ ಕೂಕಂತೀರಾ ? (ಬಿಂಕದ ಭಂಗಿಯಲ್ಲಿ ನಿಲ್ಲುವಳು)
**ಇನ್ಸ್** : ಎಲ್ಲಾ ನನ್ನ ಕೇದಿಗೆ ನವಿಲೆ ! ಏನು ಚೆಂದೌಳೆ ! ಇರಲಿ.
ಏ ಹುಡ್ಗೀ ಇಲ್ಲಿಗೆ ಯಾರಾದ್ರೂ ಬಂದಿದ್ರಾ ? ಈ ಕಾಗದ ಚೂರು ಎಲ್ಲೀದು? ಹ್ಯಾಗೆ ಬಂತು ಇಲ್ಲಿಗೆ? ನೀವೇನು ಕರಾಮತ್ತು ನಡೆಸಿದ್ದೀರಿ ಇಲ್ಲಿ ?
**ಚೆಲ್ವಿ** : ಏನೂ ಇಲ್ಲ ನನ್ನೊಡೆಯ...ಈ ಕಾಜಗ ನಮ್ಮೂರ ಅಮ್ಮನ ಪರ್ಸೇಲಿ ಪಕಾಡ ಕಟ್ಟಿದ್ದು! ಪಕಾಡ!!
**ಇನ್ಸ್** : ಹಂಗಾರೆ, ಈ ಗೂಡ್ನಾಗೆ ಮತ್ತಾರೌರೆ? ಅಪ್ಪ, ಅಮ್ಮ, ಅಣ್ಣ, ತಮ್ಮ.
**ಚೆಲ್ವಿ** : ಎಲ್ಲಾ ನೆಗದು ಬಿದ್ರು....ಮೀನು ಇಡಿಯಾಕೆ ಬಲೆಕೊಂಡೋದ್ರು ! ಈ ಬೂಡ್ಗೆಲ್ಲ ನಾನೊಬ್ಬಳೇಯ ಯಜಮಾನಿ !
**ಇನ್ಸ್** : ಲೆಯ್ ಯಜಮಾನಿ, ನಾನು ಪೊಲೀಸ್ ಇನ್‌ಪೆಕ್ಟರ್ ! ನಿಮ್ಮ ಬೂಡ್ನಾಗೆ ಗಾಂಧಿ ಭಕ್ತರು ಔರೆ, ಅಡಗೌರೆ ಅಂತಾ ತಿಳೀತು ನಿಜ ಹೇಳು
**ಚೆಲ್ವಿ** : ಬುಡು ಬುಡು ಪೊಲೀಸಪ್ಪಾ ಸೋಜಿಗದ ಮಾತು ಆಡಬ್ಯಾಡ.
**ಇನ್ಸ್** : ಲೇಯ್ ಹುಡುಗಿ ನನ್ನ ಮುಂದೆ ಬುರುಡೇ ಬಿಡಬೇಡ ನಾನು ಇನ್ಸ್‌ಪೆಕ್ಷನ್ ಮಾಡಲೇ ಬೇಕು.

**ಚೆಲ್ವಿ** : ಅಂದ್ರೆ !
**ಇನ್ಸ್** : ಅಂದ್ರೆ, ನಿಮ್ಮ ಮನೇನ ಜಪ್ತಿ ಮಾಡಬೇಕು.
**ಚೆಲ್ವಿ** : ಯಪ್ಪ ಯಪ್ಪ ಯಪ್ಪಾ, ಆ ಕಡೇಗೆ ಮಾತ್ರ ಹೋಗ್ ಬ್ಯಾಡ, ಅದು ಬಾಣ್ತೇರ ಗೂಡು, ಮೈಲಿಗೆ ಮಾಡಬ್ಯಾಡ !
**ಇನ್ಸ್** : ಏಯ್ ಸರಿಯೇ ಅತ್ತ... ಮಡಿಯಂತೆ ಮಡಿ ! ನೀನೇನಾದ್ರೂ ತಡೆದೆಯೋ ಇಗಾ ಈ ಪಿಸ್ತೂಲ್‌ನಿಂದ ಸುಟ್ಟು ಬಿಡ್ತೀನಿ ! (ಪಿಸ್ತೂಲು ತೆಗೆದು ಅವಳ ಎದೆ ಬಳಿ ಹಿಡಿಯುವನು)
**ಚೆಲ್ವಿ** : ಸುಡ್ತೀಯ ಸುಡು ! ಸಾಯಿಸ್ತೀಯ ಸಾಯ್ಸು !!
**ಇನ್ಸ್** : (ಚಣ ತಡೆದು ಅನಂತರ ಪ್ರೇಮದ ನಗೆನಕ್ಕು) ಚೆಲ್ವೀ, ನಿನ್ನನ್ನ ಸಾಯಿಸಬಾರದ್ದು, ಸವೀಬೇಕು !
ಹ ಹ್ಹ ಹ್ಹ ಹ್ಹಾ..... ನೀನು ಹೆಣ್ಣಲ್ಲ ರಸಪೂರಿ ಮಾವಿನ ಹಣ್ಣು !
ಚೆಲ್ವಿ : ಪೋಲೀಸಪ್ಪಾ, ಬುದ್ದಿ ನೆಟ್ಟಗೈತಾ ?
ಇನ್ಸ್ : (ಸಿಡಿದು) ಇಲ್ಲಾ ಸೊಟ್ಟಗೈತೆ ! ಹಂಗಾರೆ ನೋಡೇ ಬಿಡ್ತೀನಿ ಒಂದು ಕೈ.
(ಗುಡಿಸಲ ಕಡೆ ನುಗ್ಗ ಹೊರಟಾಗ ತಡೆದು)
ಚೆಲ್ವಿ : ಪೋಲೀಸಪ್ಪಾ.....
ಇನ್ಸ್ : ಲೇಯ್, ಅಪ್ಪಾ, ಅಣ್ಣಾ, ಅಂತಾ ಕರೀ ಬ್ಯಾಡ, ನನಗೆ ಕೇಳಾಕಾಗಕಿಲ್ಲ...'ರ'ಕ್ಕೆ ಗುಡುಸು 'ರಿ' ಅಂತಾ ಕರೀ'
ಚೆಲ್ವಿ : ರಕ್ಕೆ ಗುಡುಸು'ರಿ' ಪೋಲೀ 'ರಿ' ಸ್ವಲ್ಪ ಇರಿ !
ನಾನು.....
ಇನ್ಸ್ : ಆಗ್ಲಿ, ಇಲ್ಲೇ ಈ ಮರದ ತುಂಡಿದ ಮ್ಯಾಲೆ ಕೂತು ಸಿಗರೇಟ್ ಹಚ್ತೀನಿ ಅದನ್ನ ಸೇದಿ ಮುಗಿಸೊದ್ರೊಳ್ಗೆ ಒಪ್ಗೆ ಕೊಡಬೇಕು !
(ಸೀಗರೇಟ್ ಹಚ್ಚಿ ಸೇದಿ ಹೊಗೆ ಉಂಗುರ ಬಿಡುತ್ತ ಕೂರುವನು.)
ಚೆಲ್ವಿ : (ಚಿಂತೆಗೊಳಗಾಗಿ)
ದ್ಯಾವ್ರೇ ಎಂತಾ ಸಂಕಟಾ ಕೊಟ್ಯಪ್ಪಾ ! ಈಗೇನೆ ಮಾಡ್ಲಿ ?
ಈ ಪಾಪಿ ಕೂಡದಿದ್ರೆ ಎಲ್ಲಾರ್ನೂ ಸುಟ್ಟುಹಾಕ್ತಾನೆ. ಸೆರೆ ಹಿಡಿತಾನೆ ?
ಒಪ್ಪಿದ್ರೆ ನಾನು ಶೀಲ ಕಳಕೊಂಡ ಕೊಳಕಿ ಆಗ್ತೀನಿ. ಶೀಲ ಕಳಕೊಂಡಾಳ್ನ ಬೂಡ್ನಾಗೆ ಸೇರ್ಸಾಕಿಲ್ಲ. ನಾನು ತಡೆದು ಇವನ ತುಪಾಕಿಗೆ ಬಲಿಯಾಗ್ಲೆ ? ಆದ್ರೆ ಏನು ಬಂತು ? ನನ್ನ ಸುಟ್ಟು, ಗಾಂಧಿ ಕಡೆಯೋರ್ನೂ ಬೂಡಿನವರೆಲ್ಲರ್ನೂ ಕೋಳ ಹಾಕ್ಕೊಂಡು ತಗಂಡೋಯ್ತಾನೆ ಅಲ್ಲಿ ಗಲ್ಲಾಗಬೋದು, ಗುಂಡು ಹೊಡೆದು ಸುಡಬೋದು ! ನಾನು ಸತ್ತು ಏನು ಸಾಧಿಸಿದಂಗಾತು ! ಇಲ್ಲಾ ಬದುಕಬೇಕು, ನಾನೀಗ ಎಲ್ಲರಿಗಾಗಿ ಬದುಕಬೇಕು ಇವನಿಗೆ ಸೆರಗು ಹಾಸಿ.. ಆ ಮೇಲೆ... ಆ ಮೇಲೆ ಇದ್ದೇ ಐತೆ ಗಂಗೊಳ್ಳಿ ಹೊಳೆ ಮಡ್ಲು ! ಹೌದು. ಅದೇ ಸರಿ ಅದೇ ಸರಿಯಾದ ದಾರಿ. ನನ್ನ ಪಾಲಿಗೆ ಉಳಿದಿರೋ ದಾರಿ !
(ಪ್ರಕಾಶ) ಹಾಂ...ಪೋಲೀ..
ಇನ್ಸ್ : ಹೂಂ....ಹೇಳು ಒಪ್ಪಿದೆಯಾ ? (ಪ್ರಕಾಶ)
ಚೆಲ್ವಿ : ನಾನು ನಿನ್ನವಳು ಏನೂ ತಿಳ್ಕಾ ಬ್ಯಾಡ. ಬಾ ಗೂಡಿಗೆ ಹೋಗಾನ ಉಹು ಹು...ಅಲ್ಲಲ್ಲ..ಅದು ಬಾಣ್ತಿ ಗೂಡು. ಇದು ನಮ್ಮ ಇದು ನಮ್ಮಸರಸದ ಬೀಡು !!
(ಕೈ ಹಿಡಿದು, ಕರೆದೊಯ್ಯೊವಳು)
(ಮೊದಲ ದೃಶ್ಯದಂತೆ ನರ್ತಕ ನರ್ತಕಿಯರ ತಂಡ ನೃತ್ಯದಲ್ಲಿ)
ನರ್ತಕ\ ಶೀಲ ಹರಣವಾಯ್ತೊ ! ಚೆಲ್ವಿಯ
ನರ್ತಕಿಯರು ಶೀಲ ಹರಣವಾಯ್ತು ॥
ದೇಶ ರಕ್ಷಣೆಗೆ ಪಾತ್ರ ಪೋಷಣೆಗೆ
ಸ್ವಾತಂತ್ರ್ಯ ಯೋಧರಾ ಪ್ರಾಣ ರಕ್ಷಣೆಗೆ, ಶೀಲ ಹರಣವಾಯ್ತೋ ।
ಶೀಲಗೆಟ್ಟವಳು ಬಾಳಬಾರದೆಂದವಳು ಹೊಳೆಗೆ ಓಡಿ
ಹಾರಿಕೊಂಡಳು. ದೇಶ ಬಿಡುಗಡೆಯು ಬೇಗ ಬೇಗ ಬರಲಿ
ಬಿಳಿಯರಾಳ್ವಿಕೆಯು ತಣ್ಣಗಾಗಲಿ
ಬರಲಿ ನಾಡಮುಕ್ತಿ ! ಬೂಡು ಕ್ಷಮಿಸಲಿ, ನಾಡು ಮೆಚ್ಚಲಿ ಮಂಗಳವು ಕೂಡಿ ಬರಲಿ.

ಎಂದೆಲ್ಲ ಹರಸಿ ಹಾರೈಕೆ ಸಲಿಸಿ ನೀರ್ಮಸಣವಾದಳಾಕೆ !
ಚೆಲ್ವಿ ಆತುಮಕೆ ಶಾಂತಿ ಸಿಗಲಿ, ಋತ ಒಂದೆ ಎಂದೂ ಗೆಲಲಿ ! ಋತ ಒಂದೆ ಗೆಲಲಿ !

# ಸಂಸಾರಯೋಗ

**ಪಾತ್ರಗಳು :**
ಘಟ್ಟಿವಾಳಯ್ಯ
ಅಲ್ಲಮ ಪ್ರಭು
ಬಸವಣ್ಣ
ಆಯ್ದಕ್ಕಿ ಮಾರಯ್ಯ
ಆಯ್ದಕ್ಕಿ ಲಕ್ಕಮ್ಮ
ರುದ್ರಾಕ್ಷಿ
ಶ್ರೀಗಂಧಯ್ಯ
ವಿಭೂತಿ
ಹಡಪದ ಅಪ್ಪಣ್ಣ
ಜಂಗಮರು
ಶರಣ ಶರಣೆಯರು
ನರ್ತಕ ನರ್ತಕಿಯರು

# ನೋಟ : 1
# ಗೃಹಶ್ರೇಣಿಗಳ ನಡುವೆ

(ತೆರೆಸರಿದಾಗ ರಂಗದ ಮೇಲಿನ ಮಬ್ಬು ಬೆಳಕಿನಲ್ಲಿ ನಾಲ್ಕಾರು ಜನ ನರ್ತಕಿಯರು ಅಸ್ಪಷ್ಟ ಕಾಣಿಸುತ್ತಿರುತ್ತಾರೆ ಎಲ್ಲರೂ ರಂಗದ ತುಂಬ ಅಲ್ಲಲ್ಲಿ ವಿವಿಧ ನಾಟ್ಯ ಭಂಗಿಯಲ್ಲಿ ನಿಂತಿರುತ್ತಾರೆ ಬೆಳಕಾದಾಗ ವಚನ, ವ್ಯಾಖ್ಯಾನ, ಹಾಡು, ನರ್ತನ ಆರಂಭವಾಗುವುವು)

**ನರ್ತಕಿ** 1 : ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ
ಸತಿಪತಿಗಳೊಂದಾಗದ ಭಕ್ತಿ ಅಮೃತದೊಳು ವಿಷಬೆರೆತಂತೆ ಕಾಣಾ ರಾಮನಾಥ ॥

ನರ್ತಕಿ 2 : ಜೇಡರ ದಾಸಿಮಾರ್ಯನ ಅನುಭವದ ಈ ಅಮೃತೋಪಮ ನುಡಿ ಆದರ್ಶ ದಾಂಪತ್ಯದ ನೀತಿ ಸಂಹಿತೆಯನ್ನು ಗರ್ಭೀಕರಿಸಿಕೊಂಡಿದೆ. ಗಂಡ ಹೆಂಡಿರ ಅನ್ಯೋನ್ಯ ಪ್ರೇಮ ಹಾಗೂ ಪರಸ್ಪರ ರಾಜೀ ಮನೋಭಾವವೇ ಸುಖೀ ಸಂಸಾರದ ಅಂತರಿಕ ರಹಸ್ಯ.

ಆದ್ದರಿಂದ –

ಹಾಡು : (ನರ್ತಕಿಯರ ಸಮೂಹ ನರ್ತನ)
ಸಂಸಾರ ಸಂಗೀತದಂತೆ
ಪ್ರೀತಿಯೇ ಅದರ ಶ್ರುತಿಯಂತೆ ॥ ಪ ॥
ಸತಿಪತಿಗಳೊಲವೆ ರಾಗ
ನಲ್ನುಡಿಯೆ ತಾಳ ಮೇಳ
ಸಲ್ಲಾಪ ಪಲುಕು ಅಲ್ಲಿ
ಲಯ ಗತಿಯು ಬಾಳಜೋಡಿ ॥ 1 ॥

ಅನ್ಯೋನ್ಯ ಪ್ರೇಮ ಯತಿಯು
ದಾಂಪತ್ಯ ಯೋಗ ಜತಿಯು
ಸಂಗತಿಯು ಮಾರ್ಗದೇಸಿ
ಸುಸ್ಮಿತವು ಭೀಮ್ ಪಲಾಸಿ ॥ 2 ॥

ಅಲರಿಪುವು ಪುತ್ರನಲ್ಲಿ
ತಿಲ್ಲಾನ ಪುತ್ರಿ ಬಳ್ಳಿ
ಸಾಹಿತ್ಯ ಶ್ರೇಯದಲ್ಲಿ
ಸಾಗುವುದು ನಾದದಲ್ಲಿ ॥ 3 ॥

(ಬೀಜಿಮ್ಸ್‌ನಲ್ಲಿ ನರ್ತನ ಮುಂದುವರಿಯುತ್ತಿರುತ್ತದೆ. ಅದರೊಡನೆಯೇ ನೇಪಥ್ಯದಲ್ಲಿ ಮುಂದಿನ ಗದ್ಯಪಠನ)

**ನರ್ತಕಿ** 3 : ಇದಕ್ಕೆತ್ತಿದ ಪ್ರತ್ಯಕ್ಷ ಸ್ವಾಯೆಂದರೆ ಗಂಗಾಂಬಿಕೆ ಮತ್ತು ನೀಲಾಂಬಿಕೆಯರೊಡಗೂಡಿದ ಬಸವಣ್ಣನ ಆದರ್ಶ ದಾಂಪತ್ಯ. ಅವರ ಪುಣ್ಯ ಪ್ರಭಾವದ ಪವಿತ್ರ ಪ್ರಭೆಯಲ್ಲಿ ಬೆಳಗಿದ ಅಸಂಖ್ಯಾತರಲ್ಲಿ ಆಯ್ದಕ್ಕಿ ಮಾರಯ್ಯಾ ಮತ್ತು ಲಕ್ಕಮ್ಮ ಇವರ ಸುಂದರ ಸಾಂಸಾರಿಕ ಜೀವನವೂ ಒಂದು.

**ನರ್ತಕಿ** 4 : ಬಸವಣ್ಣನ ಮಾಮನೆಯ ಮುಂಭಾಗದಲ್ಲಿ ಚೆಲ್ಲಾಡಿದ್ದ ಅಕ್ಕಿಯನ್ನಾಯುವ, ನಿತ್ಯದ ಜಂಗಮ ದಾಸೋಹಾದಿಗಳನ್ನು ನಡೆಸುವ ಸತ್ ಕಾಯಕ ಯೋಗಿಗಳು ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮರು, ಹೀಗಿರಲು ಒಂದು ದಿನ – ದೃಶ್ಯ ಬದಲಾವಣೆ.–

**ಲಕ್ಕಮ್ಮ** : ಮಾರಯ್ಯ, ಮಮ ಹೃದಯ ಪ್ರೇಮಯ್ಯ ಈಸಕ್ಕಿಗಳನಾಯ್ದು ತಂದೆ ಎಲ್ಲಿಂದ ?

**ಮಾರಯ್ಯ** : ಅಣ್ಣನಾಲಯದಿದಿರು, ಮಾಮನೆಯ ಬಯಲಲ್ಲಿ ಚೆದುರಿ ಚೆಲ್ಲಿದ ಕಾಳನಾಯ್ದು ತಂದೆನು ಚೆನ್ನೆ.

**ಲಕ್ಕಮ್ಮ** : ಏನಿದು ? ನಿತ್ಯದಂತಲ್ಲದಿದೆ ಚೆನ್ನಿಗನೆ !
ನೀನಿಂದು ರಾಶಿ ಅಕ್ಕಿಯನೆಲ್ಲ ಕೊಳ್ಳೆ ಹೊಡೆದಿರುವೆ ! ನಿತ್ಯ ದಾಸೋಹಕ್ಕೆ ಜಂಗಮಾರಾಧನೆಗೆ ಎನಿತು ಬೇಕೋ ಅನಿತು ಅನಿತಕ್ಕಿ ಸಾಕು ನನ್ನರಸ. ಅಗತ್ಯತೆಗೆ ಮೀರಿದುದ ಪಡೆವ ಹಕ್ಕೆಮಗಿಲ್ಲ ! ಏತಕತೆ :

ವಚನ : ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ ?
ಈಸಕ್ಕಿಯಾಸೆ ನಮಗೇಕೆ ? ಈಶ್ವರನೊಪ್ಪ !
ಮಾರಯ್ಯಪ್ರಿಯ ಅಮರೇಶ್ವರ ಲಿಂಗ ದೂರ ಮಾರಯ್ಯ !

ಮಾರಯ್ಯ : ದಿನ ನಿತ್ಯದ ಶ್ರಮ ಒಮ್ಮೆಗೇ ಮುಗಿದುಬಿಡಲಿ ಎಂದು ತಂದೆ ಲಕ್ಕಾ !

ಲಕ್ಕಮ್ಮ : ಮಾರಯ್ಯ, ಕಾಯಕಕ್ಕೆ ಅಪಹರಣ ತಿಳಿದಿಲ್ಲ !
ಅದು ಅಧ್ಯಾತ್ಮದೊಂದು ಅನುಷ್ಠಾನ. ಶರಣ ಸಂಹಿತೆಯಂತೆ
ಅನುದಿನವು ಕಾಯಕವು ನಡೆಯುತಿರಬೇಕು,
ಮತ್ತೆ ಬೆವರಿಗೆ ತಕ್ಕ ಬೆಲೆಯುಳ್ಳುದಿರಬೇಕು.

ಮಾರಯ್ಯ : ಹಾಗಾದರೆ, ಕಾಯಕದಿಂದ ಕೈಲಾಸ ಪ್ರಾಪ್ತಿ.
ಕಾಯಕದಿಂದಲೇ ಕೈವಲ್ಯ ಪದವಿ. ಅಲ್ಲವೆ ಲಕ್ಕಾ?

ಲಕ್ಕಮ್ಮ : ಎನ್ನೊಡೆಯ ಕರ್ತವ್ಯವನು ಮರೆತು ಕೈಲಾಸವೆಂಬ
ಬಿಸಿಲು ಕುದುರೆಯ ಬೆನ್ನು ಹತ್ತುತಿರುವಿರಿ ಏಕೆ ?
ಕೇಳಿ, ಕೈಲಾಸಕ್ಕಿಂತ ಕಾಯಕವು ಶ್ರೇಷ್ಠ !
ಇಷ್ಟಕ್ಕೂ ಕೈಲಾಸವೆಂಬುದು ನಾವು ಕೊಟ್ಟು ಬಿಟ್ಟ
ಕೈಕೂಲಿಯ ವಸ್ತುವೇನು ? ಬೇಡ,
ಪರದ ಭ್ರಮೆ ಬೇಡ, ಇಹ ಕುರಿತು ಚಿಂತಿಸಿ ಅಣ್ಣ ಹೇಳುವಂತೆ
ಸತ್ತು ಬೆರೆಸಿಹೆನೆಂದಡೆ ಕಬ್ಬಿನ ತುದಿಯ ಮೆಲಿದಂತೆ !
ಕಬ್ಬಿನ ರಸವಿರುವುದು ಅದರ ಕಾಂಡದಲ್ಲಿ ಬುಡದಲ್ಲಿ
ತುದಿಯಲ್ಲಲ್ಲ. ಹಾಗೆ ಜೀವನದ ಸಾರ ಇರುವುದು
ಇಹದಲ್ಲಿ ಪರದಲ್ಲಲ್ಲ. ಇಹವಿಲ್ಲದೆ ಪರ ಇಲ್ಲ ! ಪರ ಇರುವುದು
ಇಲ್ಲೇ, ಇಹದಲ್ಲೇ !
ಸಾವಿಗಿಂತ ಬದುಕು ಶ್ರೇಷ್ಠ. ತಿಳಿ.

ಮಾರಯ್ಯ : ಲಕ್ಕಾ, ನೀನು ಮಹಾಜ್ಞಾನಿ, ಅನುಭಾವಿ !
ನಾನು ಕಾಲುಳ್ಳ, ಆದರೆ ಕಣ್ಣಿಲ್ಲದ ಕುರುಡ !
ಸತಿಪತಿಗಳಾದ ನಾವಿಬ್ಬರೂ ಒಂದೇ ಆತ್ಮದೊಲು
ಬದುಕಿದವರು ! ಎನಗೆ ಶಿವ ದರುಶನವ ಮಾಡಿಸುವೆಯಾ?

ಲಕ್ಕಮ್ಮ : ಮಾರಯ್ಯ, ಕೈದುವ ಕೊಡಬಹುದಲ್ಲದೆ
ಕಲಿತನವ ಕೊಡಲು ಬಾರದು !
ಹೆಣ್ಣ ಕೊಡಬಹುದಲ್ಲದೆ ಕೂಟಕ್ಕೊಳಗು ಮಾಡಲು ಬಾರದು !
ಜಗದಣ್ಣ ಬಸವಣ್ಣನ ಮಾತಿನಂತೆ –

ಚಂದ್ರೋದಯಕೆ ಅಂಬುಧಿ ಹೆಚ್ಚುವುದಯ್ಯಾ
ಚಂದ್ರ ಕುಂದೆ ಕಂದುವುದಯ್ಯಾ
ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತೆ ?
ಅಂಬುಧಿಯ ಮುನಿಯಾಪೋಷಣವ ಕೊಂಬಲ್ಲಿ
ಚಂದ್ರನಡ್ಡ ಬಂದನೆ ?
ಅರಿಗಾರೂ ಇಲ್ಲ ಕೆಟ್ಟವಂಗೆ ಕೆಳೆಯಿಲ್ಲ
ಜಗದ ನಂಟ ನೀನೆ ಅಯ್ಯಾ, ಕೂಡಲಸಂಗಮದೇವಾ ॥

ಆದ್ದರಿಂದ ನಿನ್ನಿಂದ ನೀನೆ ಶಿವನ ಕಾಣಲು ಬೇಕು
'ಶಿವ' ಆಗಬೇಕು ! ಏತಕೆನೆ 'ಅರಿವೆ ಗುರು' ಎಂದಿದೆ
ಅಲ್ಲಮನ ಸ್ವಾತ್ಮ ದರ್ಶನದಿರವು !

ಮಾರಯ್ಯ : ಅಹುದಹುದು ಲಕ್ಕವ್ವೆ, ಕಟ್ಟಿಕೊಟ್ಟ ಬುತ್ತಿಗಿಂತ
ಅಟ್ಟುಂಬುವ ಸ್ವಯಂ ಪಾಕ ಲೇಸು !
ಈ ದಿನದ ದಾಸೋಹಕ್ಕೆ ಇನಿತಕ್ಕಿ ಸಾಕು ! ತೆಗೆದುಕೊ
ಮಿಕ್ಕುದನು ಕೊಂಡೊಯ್ವೆನೀಗಳೆ ! ಅಣ್ಣನ
ಮಾಮನೆಯಂಗಳದಲ್ಲಿ ಚೆಲ್ಲಿ ಬರುವೆ
ಕಾಯಕದ ಅರ್ಥ ತರುವೆ, ಮತ್ತೆ 'ಶಿವ'ವ ಮುಡಿವೆ !

(ಲಕ್ಕಮ್ಮನ ಮಡಲಿಗೆ ಸ್ವಲ್ಪ ಅಕ್ಕಿ ಹಾಕಿ, ಉಳಿದದ್ದನ್ನು ಜೋಳಿಗೆ ಸಹಿತ ಕೊಂಡೊಯ್ಯುತ್ತಾನೆ)

**ನೋಟ :** 2

**ಕಲ್ಯಾಣನಗರದ ರಾಜಬೀದಿ**

ಶ್ರೀಗಂಧ: (ಹಾಡಿಕೊಂಡು ಪ್ರವೇಶಿಸುವನು)
ಹೆಣ್ಣ ನಂಬಲು ಬ್ಯಾಡ, ಮಣ್ಣ ಮುಕ್ಕಲು ಬ್ಯಾಡ
ಹೆಣ್ಣು ಬಾಳಿನ ಹುಣ್ಣು ಕಣ್ಣಲ್ಲ ಕಾಣೋ
ಹೆಣ್ಣಿನಿಂದಲೆ ಗಂಡು ಹಾಳಾದ ಹಾಳಾದ ॥
ಎಂದನೀ ಅನುಭಾವಿ ತೀರ್ಥಯ್ಯ ಶಿವಯೋಗಿ ॥
ನಾರಿ ನರಕದ ದಾರಿ ನಾರಿ ಬಲು ಹೆಮ್ಮಾರಿ
ನಾರಿಯರ ನಂಬಿದವ ಆದನಾ ಕುರಿಮರಿ
ಬಿಂಕ ಬಿನ್ನಾಣದಾ ಕಂಕನರಿ ನಾರಿ ॥
ಎಂದನೀ ಅನುಭಾವಿ ತೀರ್ಥಯ್ಯ ಶಿವಯೋಗಿ ॥
ಥೂ ! ಹಾಳು ಬ್ರಹ್ಮ ಯಾಕೀ ಹೆಣ್ಣನ್ನ ಸೃಷ್ಟಿ ಮಾಡೆದ್ನೋ ?
ಹೆಣ್ಣು ಅನ್ನೋ ಪ್ರಾಣಿ ಅಸ್ತಿತ್ವದಲ್ಲಿರದೇ ಇದ್ದಿದ್ದರೆ......
ಹೆಣ್ಣಿನ ಅಗತ್ಯವೇ ಇಲ್ಲದೆ ಮಕ್ಕಳನ್ನು ಹಡೆಯಲು
ಗಂಡಸರಿಗೆ ಸಾಧ್ಯವಿದ್ದಿದ್ದರೆ......

ಗಂಡು ಕುಲ ಎಲ್ಲಾ ದುಃಖಗಳಿಂದಲೂ ಮುಕ್ತವಾಗಿರ್ತಾ ಇತ್ತು !
ಹೆಂಗಸರ ಸ್ವಭಾವ ಎಂಥದಪ್ಪಾ ಅಂದ್ರೆ... ಬಹಳ ವಿಚಿತ್ರ !
ರಾತ್ರೀ ಸುಖ ಮಧುರವಾಗಿರೋ ತನಕ ಅವರ ಪಾಲಿಗೆ ಎಲ್ಲದೂ
ಚೆನ್ನ, ಚೆಲುವು! ಅದಕ್ಕೇನಾದರೂ ಸ್ವಲ್ಪ ಧಕ್ಕೆ ಬಂತಂತೇ
ಮುಗಿದೇ ಹೋಯ್ತು! ಜಗತ್ತನ್ನೇ ಪ್ರಳಯ ಮಾಡಿ ಬಿಡ್ತಾವೆ !
ಬೆಲ್ಲದಂಥಾ ಬದುಕು ಬೇವಾಗಿ ಬಿಡುತ್ತೆ !
ನನ್ನ ಹೆಂಡ್ರು ಅದಾಳಲ್ಲಾ – ಅವಳೇ ನನ್ನ ರುದ್ರಾಕ್ಷಿ........

(ನೇಪಥ್ಯದಲ್ಲಿ 'ಗಂಧಾ.......ಏ ಶ್ರೀಗಂಧಾ.....ಎಂಬ ರುದ್ರಾಕ್ಷಿಯ ಕರೆ ಕೇಳಿ ಬರುವುದು, ಶ್ರೀಗಂಧಯ್ಯ ಗಡಗಡ ನಡುಗುತ್ತಾ...)

ಅಯ್ಯಯ್ಯಮ್ಮೋ, ಬಂದೇ ಬಿಟ್ಟಳಲ್ಲಪ್ಪಾ ! ದೇವರೇ,
ಭಗವಂತ....ನನ್ ಗಾಚಾರಾ ಗಮ್ ಅನ್ನಿಸ್ತಾಳೆ !....
ರುದ್ರಾಕ್ಷಿ....ರು...ದ್ರಾ...ಕ್ಷಿ...ಅಕ್ಷೀ (ಸೀನುವನು)

ರುದ್ರಾಕ್ಷಿ : (ಪ್ರವೇಶಿಸಿ) ಅಯ್ಯೋ ನಿನ್ನ ಮುಖಕ್ಕೆ ಮಸಿ ಬಳಿಯಾ !
ನನ್ ಮುಖದ ಮ್ಯಾಲಾ ಸೀನೋದು !!

ಶ್ರೀಗಂಧ: (ಅನುನಾಸಿಕಾಕ್ಷರಗಳನ್ನು ಉಚ್ಚರಿಸುವಂತೆ ಮೂಗಿನಲ್ಲಿ)
ರುದ್ರಾಕ್ಷಿ....ರುದ್ರಾಕ್ಷಿ.....ಈ ಶ್ರೀಗಂಧಯ್ಯನಿಗೆ...ನಿನ್ನ ಗಂಡಾ
ಅನ್ನಿಸಿಕೊಂಡಿರೋ ಈ ಭಂಡ ಶ್ರೀಗಂಧನಿಗೆ ನಿನ್ನ ನೆನಪಾದ್ರೆ ಸಾಕು
ಸೀನು ! ನಿನ್ನ ದರ್ಶನ ಆಯ್ತು ಅಂದ್ರೇ ಸೀನೋ ಸೀನು !!
(ಸೀನುವನು)

ರುದ್ರಾಕ್ಷಿ : ಸೀನೀವಂತೆ....ಮೊದಲ ನನ್ನ ಪ್ರಶ್ನೆಗೆ ಉತ್ತರ ಕೊಡು.

ಶ್ರೀಗಂಧ: ಅಪ್ಪಣೆಯಾಗಲಿ !

ರುದ್ರಾಕ್ಷಿ : ನನ್ನ ಮುದ್ದಿನ ಮಗುವಿಗೆ, ಯಾರಿಗೆ ?

ಶ್ರೀಗಂಧ: ಅದೇ...ಈ ಶ್ರೀಗಂಧಯ್ಯ ಮತ್ತು ರುದ್ರಾಕ್ಷಿಯರ ಕಾಮಸಂಜಾತ ಅಲ್ಲ– ಪ್ರೇಮಸಂಜಾತ ಶಿಶು 'ವಿಭೂತಿ' ಎಂಬ ಹೆಸರಿನ ಮುದ್ದು ಮಗುವಿಗೆ....

ರುದ್ರಾಕ್ಷಿ : ಹೌದು......ಆ ನಮ್ಮ ವಿಭೂತಿಗೆ ಮರದ ತುಂಡು ಹೊರಿಸಿ.
ಕಾಲಿಗೆ ಸರಪಣಿ ಬಿಗಿದದ್ದು ಯಾಕೆ ?

ಶ್ರೀಗಂಧ: ಅದೂ....

(ಅನ್ನುವಷ್ಟರಲ್ಲಿ ವಿಭೂತಿ ಮರದ ತುಂಡು ಹೊತ್ತುಕೊಂಡು ಸರಪಣಿ ಎಳೆದುಕೊಂಡು ಪೆದ್ದುಪೆದ್ದಾಗಿ ರಂಗಪ್ರವೇಶಿಸಿ....)

ವಿಭೂತಿ : ಅಂ...........ಮಾ !

(ಹಾಗೆ ಅಂ....ಎನ್ನುವಷ್ಟರಲ್ಲಿ ಶ್ರೀಗಂಧಯ್ಯನು ಒಂದು ಬಾಳೆಹಣ್ಣನ್ನು ಸುಲಿದು, ಅವನು 'ಮಾ' ಎಂದು ಉಚ್ಚರಿಸಿ ಬಾಯಿತೆರೆದ ಕೂಡಲೆ ಅವನ ಬಾಯಿಗೆ ತುರುಕುವನು ಆ ಪೆದ್ದ ಹಾಗೇ ಸುಮ್ಮನಾಗಿ ಅಲ್ಲಿಯೇ ನಿಲ್ಲುವನು)

ಶ್ರೀಗಂಧ: ಓ ಹೊ ಹೋ ! ಏನಿದು ಶ್ರೀಮದ್ ವಿಭೂತಿ
ಮಹನೀಯರ ರಥ ಅಲ್ಲೆ ನಿಂತು ಬಿಡ್ತಲ್ಲಾ!...
ಯಮ್ಮ...ಯಪ್ಪಾ ಅಂತಾ ಮುಂದಕ್ಕೆ ಸಾಗಲಿ...!

(ವಿಭೂತಿ ಮೆಲ್ಲಗೆ ರಂಗದ ಮೇಲೆ ಬರುವನು...ರುದ್ರಾಕ್ಷಿ ಅವನನ್ನು ಮುದ್ದಿಸುತ್ತಾ)

ರುದ್ರಾಕ್ಷಿ : ಬಗುಳ್ರೀ....ಯಾಕೆ ನನ್ನ ಕಂದನಿಗೆ ಈ ಬಂಧನ ?

ಶ್ರೀಗಂಧ: ನೋಡು ರುದ್ರಾಕ್ಷಿ. ನಿನ್ನ ಮಗ – ಅಲ್ಲ ಅಲ್ಲ ನಮ್ಮ ಮಗ..ಈ ಶ್ರೀಗಂಧಯ್ಯ ಮತ್ತು ಈ ರುದ್ರಾಕ್ಷಿಯರ ಸುಪುತ್ರನಾದ ಈ ವಿಭೂತಿ ಶಾಲೆಗೆ ಹೋಗದೆ, ಹೊಳೆ ಹತ್ತಿರ ಸೀರೆ ಸೆಣೆಯೋ ಹೆಂಗಸರನ್ನ ನೋಡ್ತಾ ಕೂರ್ತಿದ್ದ, ನಾನು ಹೋಗಿ 'ವಿಭೂ' ಅಂದ್ರೆ ಸಾಕು, ಜಿಂಕೆ ಮರಿ ಹಾಗೆ ಚಂಗನೆ ನೆಗೀತಿದ್ದ. ಎಲ್ಲಾದರೂ ಕಾಲು ಮುರುಕೊಂಡಾನು ಅಂತಾ ಹಾರಾಡದ ಹಾಗೆ ಕಾಲಿಗೆ ಸರಸಣಿ, ಹೆಗಲಿಗೆ ಮರದ ದಿಮ್ಮಿ ಬಿಗಿದೆ ! ಅದೇ ರುದ್ರಾಕ್ಷಿ, ಹಳ್ಳೀಕಡೆ ಕಂಡೋರ ಹೊಲ ಮೇಯೋ ತುಂಡು ದನಗಳ ಕೊರಳಿಗೆ ಹಗ್ಗ ಬಿಗಿದು ಎರಡು ಕಾಲು ಕೆಳಗೆ ಬಡಿದಾಡೋ ಒಂದು ದೊಣ್ಣೆ ಕಟ್ತಾರೆ, ಅದನ್ನ 'ಗುದ್ದೆ ಕಟ್ಟೋದು' ಅಂತಾರೆ. ಅಂಥಾ ಗುದ್ದೆ ಈ ಪುಂಡು ದನವಾದ ನಿನ್ನ – ಅಲ್ಲ ನಮ್ಮ ಮಗನಿಗೆ ತಿಳೀತಾ?

ರುದ್ರಾಕ್ಷಿ : ನನ್ನ ಕರ್ಮ...ನನ್ ಕರ್ಮ

(ಹಣೆ ಬಡಿದುಕೊಳ್ಳುತ್ತಾ ಅವಳೊಂದು ಮೂಲೆಯಲ್ಲಿ ನಿಲ್ಲುತ್ತಾಳೆ ಶ್ರೀಗಂಧಯ್ಯನೂ ಹಾಗೆ 'ಕರ್ಮ ಕರ್ಮ' ಅಂತಾ ಗೊಣಗುತ್ತಾ ತಾನೊಂದು ಮೂಲೆಯಲ್ಲಿ ನಿಲ್ಲುತ್ತಾನೆ. ಇವರಿಬ್ಬರನ್ನೂ ಮಿಕಮಿಕ ನೋಡಿದ ವಿಭೂತಿ ತಾನೂ ಹಣೆ ಚಚ್ಚಿಕೊಳುತ್ತಾ 'ಖರ್ಮ ಖರ್ಮ' ಎಂದು ಮಧ್ಯದಲ್ಲಿ ಪೆದ್ದು ಪೆದ್ದಾಗೆ ನಿಲ್ಲುತ್ತಾನೆ)

ಶ್ರೀಗಂಧ: ಹುಷ್! ಸಾಕಪ್ಪಾ ಈ ಸಂಸಾರ !
ಹಾಳಾದ್ದು ಮೊದಮೊದಲು ಸಾರ ಸಸಾರ,
ಅಮೇಲೆ ಎಲ್ಲ ನಿಸ್ಸಾರ !
ಯಾರಿಗೆ ನನಗೆ ! ನನ್ನಂಥಾ ಗಂಡಸಿಗೆ ! ಹೆಂಗಸಿಗೆ?....
ಸುಖವೋ ಸುಖ ! ನನ್ನ ದೃಷ್ಟೀಲಿ ಹೆಣ್ಣಿಗಿಂತ ಸುಖದ ಜೀವ
ಜಗತ್ತಿದಲ್ಲಿ ಬೇರಾವುದೂ ಇಲ್ಲ... ಊಹುಂ....

ರುದ್ರಾಕ್ಷಿ : ಏನು ಅದು ಗೊಣಗೋದು ?

ಶ್ರೀಗಂಧ: ಏನೂ ಇಲ್ಲ ಮಾತಾಯಿ !
ಸೃಷ್ಟಿಕರ್ತ ಪರಬ್ರಹ್ಮನಲ್ಲಿ ಒಂದು ಪ್ರಾರ್ಥನೆ ಸಲ್ಲಿಸಿದೆ !

ರುದ್ರಾಕ್ಷಿ : ಏನಂತಾ ?

ಶ್ರೀಗಂಧ: ಸ್ವಾಮಿ, ಬ್ರಹ್ಮದೇವರೆ, ಮುಂದಿನ ಜನ್ಮದಲ್ಲಿ ನನ್ನನ್ನ ಹೆಣ್ಣಾಗಿ ಹುಟ್ಟಿಸಪ್ಪಾ ಅಂತಾ.

ರುದ್ರಾಕ್ಷಿ : ಯಾಕೆ ?

ಶ್ರೀಗಂಧ: ಯಾಕೆ ಅಂದರೆ ಹಾಯಾಗಿರೋಕೆ ! ನೋಡು.
ಗಂಡಿಸಿನ ಹಾಗೆ ದುಡಿಯೋ ಹಾಗಿಲ್ಲ,
ಧೂಳು ಕುಡಿಯೋ ಹಾಗಿಲ್ಲ
ಕಡಿಯೋ ಹಾಗಿಲ್ಲ, ಕತ್ತರಿಸೋ ಹಾಗಿಲ್ಲ !

ಯಾವನೋ ಗಂಡಸು ತಂದು ಹಾಕಿದ್ದನ್ನ ಕೂತ್ಕೊಂಡು
ಹೇಗೋ ತಿಂದು ಕೊಂಡು, ಸವಡು ಸಿಕ್ಕಾಗ ಎರಡು
ಮಕ್ಕಳು ಹಡಕೊಂಡು....

ರುದ್ರಾಕ್ಷಿ : ಅಯ್ಯೋ ಗಂಡಸೆ, ಬಯ್ಯೋರ ಕಣ್ಣಿಗೆ ನ್ಯಾಯ ಕಾಣಸೊಲ್ಲವಂತೆ ! ನಿನಗೇನು ಗೊತ್ತು ಹೆಣ್ಣಿನ ಕಷ್ಟ, ಇಲ್ಲಿ ಕೇಳು :
ಹೆಂಗಸು ಹೆರಿಗೆ ಕೋಣೇಲಿ ಒಂದು ಮಗು ಹೆರೋದೂ ಒಂದೇ ರಣರಂಗದಲ್ಲಿ ನಾಲ್ಕು ಬಾರಿ ಯುದ್ದ ಮಾಡೋದೂ ಒಂದೇ ಗೋತ್ತಾ ?

ಶ್ರೀಗಂಧ: ಇಲ್ಲ ಗೊತ್ತಾಗಲಿಲ್ಲ.
ತಾನು ಹಡೆದಾಗ ತಾನೆ ಅದರ ಕಷ್ಟ ಎಷ್ಟೂಂತ ಗೋತ್ತಾಗೋದು ಏನೋ ಗಂಡಸು ಜನ್ಮ ರೋಸಿಹೋಯ್ತು ನಿನ್ನಂಥಾ ಹೆಂಡ್ತಿ ಕೈಯಾಗ ಸಿಕ್ಕು. ಅದಕ್ಕೆ ಹೆಣ್ಣಿನ ಜನ್ಮವೇ ಸುಖ, ಗಂಡನ್ನ ಬಡಕೊಂಡು ಬಾಳಬಹುದೂಂತ ಅನ್ನಿಸ್ತು....

ರುದ್ರಾಕ್ಷಿ : ಅಂದುಬಿಟ್ಟೆ....! ಚೆನ್ನಾಗಿದೆ, ಚೆನ್ನಾಗಿದೆ ನಿನ್ನ ವಿಮರ್ಶೆ ! ಯಾವನೋ ಒಬ್ಬ ಹುಚ್ಚ– ನಿನ್ನಂಥೋನು ಅಂದನಂತೆ – ತನ್ನನ್ನು ಹೆತ್ತ ತಾಯಿಯನ್ನೇ ಬಂಜೆ ಅಂತಾ !

ಶ್ರೀಗಂಧ: ನೋಡು ರುದ್ರಾಕ್ಷಿ, ನೀನು ಒಬ್ಬ ಹುಚ್ಚ ಅಂದೆಯಲ್ಲಾ ಅದರಿಂದ ಒಬ್ಬ ಹುಚ್ಚನ ನೆನಪಾಯ್ತು...!

ರುದ್ರಾಕ್ಷಿ : ಹೌಹೌದು, ತುತ್ತಿನ ಚೀಲಕ್ಕೆ ತುಂಬೋದು ಬಿಟ್ರೆ ಬೇರೆ ಯಾವುದು ತಾನೆ ನೆನಪಿರುತ್ತೆ ನಿನಗೆ ! ಹೇಳು ಗಂಡ್ಸೇ.....

ಶ್ರೀಗಂಧ: ನೋಡು ರುದ್ರಾಕ್ಷಿ, ನಮ್ಮ ಕಲ್ಯಾಣದಲ್ಲಿ ಮುದ್ದಣ್ಣ ಅಂತಾ ಇದ್ದ ಅವನ ಶಿವನಿಷ್ಠೆ ಗಟ್ಟಿಯಾಗಿದದ್ದರಿಂದ ಅವನನ್ನ ಗಟ್ಟಿವಾಳಯ್ಯಾ ಅಂತಾ ಕರೀತಿದ್ರು. ಅವನೊಬ್ಬ ಮಹಾಶರಣ. ಅವನು ಶರಣನಾದದ್ದು ಯಾರಿಂದ ಗೊತ್ತಾ ?

ರುದ್ರಾಕ್ಷಿ : ಗೊತ್ತಿಲ್ಲ ...ಬಗುಳು !

ಶ್ರೀಗಂಧ: ಅವನ ಹೆಂಡ್ತಿಯಿಂದ !

ರುದ್ರಾಕ್ಷಿ : ಅವಳು ಮಹಾಶರಣೆ, ನೀನೂ ಅವಳ ಹಾಗೆ ಶರಣೆ ಆಗು ಅಂತಾ ಉಪದೇಶ ಮಾಡೋಕೆ ಅವಳ ಮಾತು ಎತ್ತಿಕೊಂಡೆ ತಾನೆ ?

ಶ್ರೀಗಂಧ: ಛೇ ! ಛೇ! ಹಾಗೇನಿಲ್ಲ, ನೀನೀಗಾಗ್ಲೇ ಅವಳ ಮಟ್ಟದ ಶರಣೆ ಆಗಿಬಿಟ್ಟಿದ್ದೀಯ !

ರುದ್ರಾಕ್ಷಿ : ಅಂದರೆ?

ಶ್ರೀಗಂಧ: ಅಂದರೆ...ಅವಳು ವ್ಯಭಿಚಾರಿಣಿ ! ಗಂಡನುಳ್ಳ ಸೂಳೆ !!

ರುದ್ರಾಕ್ಷಿ : (ಕೋಪದಿಂದ) ನಾನು...ಅವಳ ಹಾಗೆ,, ಏಯ್ (ಕೈ ಎತ್ತುವಳು)

ಶ್ರೀಗಂಧ: ಅಲ್ಲ ಅಲ್ಲ, ಅವಳು ಶೀಲಗೆಟ್ಟವಳು ....ನೀನು ಮಹಾಪತಿವ್ರತೆ! ಆದರೆ ಸ್ವಲ್ಪ ಜೋರು ಅಷ್ಟೆ...!

ರುದ್ರಾಕ್ಷಿ : ಸಲ್ಲದ ಮಾತಾಡಿದ್ಯೋ...ನೋಡ್ತಿರು...!

ಶ್ರೀಗಂಧ: ನಿನ್ನ ವಿಷಯ ಅಲ್ಲ ಮಾರಾಯ್ತಿ...ತಮಾಷೆಗೆ ಹಾಗಂದೆ. ಹಿಂದಿಂದು ಮರೆತು ಬಿಡು... ಈಗ ಗಟ್ಟಿವಾಳಯ್ಯ ಮತ್ತು ಅವನ ಹೆಂಡ್ತಿ ಕತೆ ಕೇಳು.
ಒಂದು ಸಾರಿ ಅವಳು ತನ್ನ ಗಂಡನ ಜೊತೆ ತೌರಿಗೆ ಹೊರಟಳು ಗಂಡನೇ ಗಾಡಿ ನಡೆಸೋ ಸಾರಥಿ! ಹಾದಿ ಮಧ್ಯದಲ್ಲಿ 'ನೀರು ನೀರು' ಅಂದಳು. ಗಂಡ ಅದೇ ಆ ಮುದ್ದಣ್ಣ ನೀರು ತರೋಕೆ ಹೋದ, ಅಲ್ಲಿ ಅವನನ್ನು ಕೊಲೆ ಮಾಡೋದಕ್ಕೆ ನಾಲ್ಕು ಜನ ನೇಮಿಸಿದ್ದಳು ಪುಣ್ಯಾತಗಿತ್ತಿ, ಆದರೆ ಮುದ್ದಣ್ಣ ಬುದ್ಧಿವಂತ, ನೀರಿದ್ದ ಜಾಗಕ್ಕೆ ಹೋಗದೆ, ನೇರವಾಗಿ ತನ್ನ ಹೆಂಡ್ತಿ ತವರಿಗೆ ಹೋದ. ಹೆಂಡ್ತಿ ತನ್ನ ಮಿಂ...ಜತೆ ಬಂದ್ಲು.. ಮುದ್ದಣ್ಣ ಇಬ್ಬರನ್ನೂ ಸ್ವಾಗತ ಮಾಡಿದ. ಅಲ್ಲಿ ಏನಾಯ್ತಪ್ಪಾ ಅಂದ್ರೆ. ಅವಳ ಜೊತೆ ಬಂದ ಹೊಸಬ, ತವರಿನಲ್ಲಿದ್ದ ಹಳಬ ಇಬ್ಬರೂ ಕುಸ್ತಿಗೆ ನಿಂತರು. ಈ ಹಗರಣ ನೋಡಿ ಮುದ್ದಣ್ಣನಿಗೆ ವೈರಾಗ್ಯ ಬಂತು. ಹೆಂಡ್ತಿ ಬಿಟ್ಟು ಶರಣ ಆದ, ಘಟ್ಟಿವಾಳಯ್ಯ ಅನ್ನಿಸಿಕೊಂಡ!

ರುದ್ರಾಕ್ಷಿ : ಒಳ್ಳೇದು ಮಾಡಿದ, ಅಂಥ ಹೊಲಸು ಹೆಂಗಸು ಕಟ್ಟಿಕೊಂಡು ಸಂಸಾರ ನಡೆಸೋಕಿಂತ ಸನ್ಯಾಸ ತಗೊಳ್ಳೋದು ಲೇಸು !

ಶ್ರೀಗಂಧ: ರುದ್ರಾಕ್ಷಿ ನಿನಗೀಗ ಗೊತ್ತಾಗಿರಬಹುದು...

ರುದ್ರಾಕ್ಷಿ : ಯಾವುದು ಶ್ರೀಗಂಧ ?

ಶ್ರೀಗಂಧ: ಹೆಂಡ್ತಿ ಗಯ್ಯಾಳಿಯಾದರೆ ಗಂಡ ತತ್ವಜ್ಞಾನಿ ಆಗ್ತಾನೆ ಅನ್ನೋದು ! ಈಗ ನಾನೂ...

ರುದ್ರಾಕ್ಷಿ : ನಿಮ್ಮ ದಮ್ಮಯ್ಯ...ಬೇಡ ಬೇಡಾ...ಹಾಗೇನಾದ್ರೂ ನನ್ನ ಬಿಟ್ಟು ಶರಣರಾಗಿ ಬಿಟ್ಟೀರಿ ! ಶ್ರೀಗಂಧ ನನ್ನ ಗಂಡ ಬಹುಗಂಧ...!!

ಶ್ರೀಗಂಧ : ಹಾಗೆ ಬಾ ದಾರಿಗೆ...ಈಗ ಕೇಳು ಆ ಘಟ್ಟಿವಾಳಯ್ಯನ ಕಥೇನಾ !

–ದೃಶ್ಯ ಬದಲಾವಣೆ –

(ಬಸವಣ್ಣನ ಮಾಮನೆಯ ಮುಂದೆ ಘಟ್ಟಿವಾಳಯ್ಯ ಹುಚ್ಚನಂತೆ ಅಣ್ಣನ ಮನೆಗೆ ಹೋಗಿ ಬರುವ ಜಂಗಮರನ್ನು ಕುರಿತು ಬಯ್ಯುತ್ತಿರುತ್ತಾನೆ.)

ಘಟ್ಟಿ : ಹುಚ್ಚರು...ಜನರೆಲ್ಲ ಹುಚ್ಚರು !
ಎಚ್ಚೆತ್ತ ಜಾಣರನು ನಾ ಕಾಣೆನಯ್ಯೋ !!
ಹುಚ್ಚರು ಹಸೀ ಹುಚ್ಚರು.
ಹುಚ್ಚರೀ ಸಂತೆಯಲಿ ಆಸೆಯೇ ಸರಕು
ಆ ಸರಕು ಕೊಳ್ಳುವೆಡೆ ಸಾಕು ಬೇಕು !
ನೂಕು ನುಗ್ಗಲು ಶಿವನೆ ಏನೊ ನಿನ್ನಾಟ ?
ಹೆಣ್ಣು ಹೊನ್ನೂ ಮಣ್ಣು ಇವಕೆ ಕಿತ್ತಾಟ !!
ರೊಕ್ಕ ತಂದವರಿಲ್ಲ, ಸುಂಕ ಕೇಳುವರಿಲ್ಲ
ಬೊಕ್ಕಸವೆ ಬೇಕಿಲ್ಲ, ಮಂಕರೆಲ್ಲ !
ಎತ್ತು ಹೇರುಗಳಲ್ಲಿ ಹೊತ್ತು ಸಾಗುವರೆಲ್ಲ
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

ಜಂಗಮ 1 : ಯಾವನೋ ಈ ಗೊರವ ಹುಚ್ಚನೆಂಬನು ನಮ್ಮ !
ಅದರಲೂ ಬಸವಣ್ಣನೀ ಮಾಮನೆಯ ಮುಂದೆ.
ಮಂದಿ ಮಾತೇ ಬೇಡ ಅಣ್ಣನವರೇನೆಂದು ಕೊಂಡಾರು ?
ನೀವಾದರೂ ತಿಳಿಯ ಹೇಳಿರಿ ಅಪ್ಪಣ್ಣನವರೆ.

ಅಪ್ಪಣ್ಣ : ಅವನು ಯಾರಿಗೂ ಹೆದರೋನಲ್ಲಪ್ಪಾ ! ಅವನು ಮಹಾಶರಣ !
ಹುಟ್ಟು ಹೆಸರು ಮುದ್ದಣ. ನಿಷ್ಠೆಯಲಿ ನೆಟ್ಟ
ದಿಟ್ಟಿಯವನಾದುದರಿಂದ ಘಟ್ಟಿವಾಳಯ್ಯನೆಂದಾದ ! ಅವನು
ಅಲ್ಲಮಪ್ರಭುಗಳಂತೆ ನಟುವ ಕುಲದವನು. ಶ್ರೇಷ್ಠ ಕಲಾವಿದ !
ಅವರಂತೆ ಚೆಲುವ ಮದ್ದಲಿಗ ! ಇವನ ಹೆಂಡತಿಯೂ ಕಲಾವಿದೆ,
ಶ್ರೇಷ್ಠ ನರ್ತಕಿ, ಆದರೆ ಶೀಲಗೆಟ್ಟವಳು..
ಅವಳ ವಿಷಯವೆ ಬೇಡ. ಈ ಘಟ್ಟಿವಾಳಯ್ಯನ ಬಗೆಗೆ ಲಘು
ನುಡಿಯು ಸಲ್ಲ.

ಜಂಗಮ 2 : ಇರಲಿ ಬಿಡಿ ಅಪ್ಪಣ್ಣಗಳೆ, ಯಾರು ಹೇಗಿದ್ದರೇನು ! ಬಾಳನ್ನೇ
ಹರಿದುಕೊಂಡವನಿವನು ! ಹೆಂಡತಿ ಹೆರರ ಪಾಲು ಗಂಡ ಕಂಡವರ
ಪಾಲು !
– ಎಲ್ಲರೂ ಚಪ್ಪಾಳೆ ತಟ್ಟಿಕೊಂಡು ನಗುವರು –

ಘಟ್ಟಿ : ನಗುವಿರೇತಕೆ ಬರಿದೆ ಜೋಳಿಗೆಯ ಜೋಗಿಗಳೆ ?
ಬಸವಣ್ಣನೀ ಮನೆಯ ಮುಸುರೆ ಮಡಕೆಯ ನೆಕ್ಕಲಿಹ ನೊಣಗಳೇ !
ಏನೇನ ಕದ್ದಿರಿ ? ಏನೇನ ಮೆದ್ದಿರಿ ?

ಜಂಗಮ 1 : ಹ್ಞಾ ! ನಾವು ಕಳ್ಳರೆ ! ಎಲ್ಲವೋ ಹುಚ್ಚ ನಾವು ಶುದ್ಧ ಜಂಗಮರು !
ಸಿದ್ಧ ಮಂಗಳರು !

ಜಂಗಮ 2 : ಅಹುದಹುದು ನಾವು ಜಂಗಮ ಜ್ಯೋತಿಗಳು !
ಹೊನ್ನು ಹೆಣ್ಣು ಮಣ್ಣುಗಳ ಕಣ್ಣೆತ್ತಿಯೂ ನೋಡದವರು !
ತಿಳಿಯಿತೇ ? ನಾವು ಶುದ್ಧ ಸಿದ್ಧ ಪ್ರಸಿದ್ಧ ಶಿವನ ಪ್ರತಿರೂಪಿಗಳು !

ಜಂಗಮ 3 : ಕಲ್ಯಾಣ ನಗರದೀ ಅಣ್ಣನೀ ಮಾಮನೆಗೆ
ಬಾಗಿಲೆಂಬುದೆ ಇಲ್ಲ, ತೆರೆದ ದ್ವಾರ !

ನಿತ್ಯ ಪ್ರಸಾದಕ್ಕೆ ಸಮಯವಾಯಿತು ಬಾರ !
ಈ ಹುಚ್ಚನೊಡನೇನು ನಮಗೆ ವ್ಯವಹಾರ !

ಎಲ್ಲರೂ : ನಡೆಯಿರಿ...ನಡೆಯಿರಿ

–ತನು ಮಂದೆ ಹೋಗುವರು–

ಘಟ್ಟಿ : ದಾಸೋಹ ಮೂರ್ತಿಗಳು ! ಪಾಪ,
ಬಸವ ಮಾಡಿಹನೆಂದು
ಬಾಯಲ್ಲಿ ಬಸಿವ ಲೋಳೆಯನರಿಯದ
ಎಸಕದಿಂದ ಮಾಡುವ ಹುಸಿ,
ಭಕ್ತಿಯನರಿಯದ ಈ ಕಿಸುವಾಯರಿಗೇಕೆ
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ !

(ಜಂಗಮರೆಲ್ಲರೂ ಮರಳಿ ಬಂದು, ಬಾಯಿತೆರೆದು ಜೋರಾಗಿ)

ಜಂಗಮರು : ಏನೆಂದೇ ???

ಘಟ್ಟಿ : ಕಂಡವರ ಹೊಲ ಮೇವ ತುಂಡುದನಗಳು ಎಂದೆ !
ಲೋ ಕೇಳಿರೊ.
ಹೊನ್ನು ಹೆಣ್ಣು ಮಣ್ಣಿಂಗೆ ಹೊಡೆದಾಡುವನ್ನೆಬರ
ನೀವು ಹಿರಿಯರೆಂತಪ್ಪಿರೊ ? ಬಸವಣ್ಣನ ಮನೆಯ ಬಾಗಿಲಲ್ಲಿ
ಬಂಧಿತರಾಗಿ ನೊಂದವರಿಗೇಕೆ ?
ಚಿಕ್ಕಯ್ಯ ಪ್ರಿಯ ಸಿದ್ದಲಿಂಗ ಇಲ್ಲ ಇಲ್ಲಾ ಎಂದೆ !

ಜಂಗಮ 1 : ಎಲ್ಲೋ, ನಾವು ಅಣ್ಣನ ಮನೆಯ ಬಾಗಿಲಲ್ಲಿ ಕೂಳಿಗಾಗಿ
ಕಳವಳಿಸುವ ಜೋಳಿಗೆ ಜೋಗಿಗಳೆಂದು ಭಾವಿಸಿದೆಯಾ ?

ಜಂಗಮ 2 : ಅಥವಾ ಎಂಜಲಿಗಾಗಿ ಹಂಬಲಿಸುವ ನಾಯಿಗಳೆಂದು ತಿಳಿದೆಯೊ ?

ಘಟ್ಟಿ : ಅವಕಿಂತಲೂ ಕೀಳು ! ಕ್ಷುದ್ರ ಜೀವರು ನೀವು !
ಜಂಗಮವಾಗಿ ಹುಟ್ಟಿದ ಮತ್ತೆ ಹಿಂದಣ ಹೆಜ್ಜೆಯ ಮೆಟ್ಟಲುಂಟೆ ?
ಜಂಗಮವೆಂದು ಮಾತಿಂಗೊಳಗಾದಲ್ಲಿ
ಮೂರು ಮಲತ್ರಯವ ಹಿಂಗಿರಬೇಕು,
ಅನಂಗನ ಬಲೆಗೆ ಎಂದಿಗೂ ಸಿಲುಕದಿರಬೇಕು,
ಅದು ನಿಜದ ಸಂಗ. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ
ಈ ಗುಣ ಆರಿಗೂ ಇಲ್ಲಾ ಎಂದೆ.

ಜಂಗಮ 3 : ನಾವು ಅಂದರೇನು ? ನಮ್ಮ ಯೋಗ್ಯತೆ ಅಂದರೇನು ?
ಸಾಮಾನ್ಯವೆ ? ಎಲವೆಲವೋ ನೀಚ, ನಿರ್ಗುಣ, ಪಾಪಿ ಚಾಂಡಾಲ
ನಮ್ಮನ್ನು ಹೀಯಾಳಿಸುವೆಯಾ ? ನೋಡುತಿರು ನಿನ್ನ ಗತಿ !
ಕೊಟ್ಟೇವು ಶಾಪ !

ಘಟ್ಟಿ : ಬೇಗ ಹಾಕಿ ನಿಮ್ಮ ಶಾಪವನ್ನ ಈ ನನ್ನ ಜೋಳಿಗೆಗೆ !
ಬೆಕ್ಕಿನ ಶಾಪಕ್ಕೆ ನೆಲುವು ಹರಿದು ಬೀಳದು !
ಇರಿವ ಕೈದಿಂಗೆ ದಯೆಧರ್ಮದ ಮೊನೆಯುಂಟೆ ?
ಕಾಳೋರಗನ ದಾಡೆಯಲ್ಲಿ ಅಮೃತದ ಸುಧೆಯುಂಟೆ ?
ಕೂಟವ ಕೂಡಿ ಸಮಯ ನೊಂದಲ್ಲಿ ಅಜಾತನ ಬಲ್ಲರೆ ?
ಎನಗೆ ನಿಮ್ಮೊಳಗೇತರ ಮಾತು ವೇಷಧಾರಿಗಳಲ್ಲಿ !
ನಿಮ್ಮ ಕೂಟಕ್ಕೆ ಹೊರಗು.
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ,

ಜಂಗಮ 1 : ಧೂರ್ತನಿವ ಶಿವದ್ರೋಹಿ, ಜಂಗಮದ್ರೋಹಿ !
ಹಿಡಿದಿವನ ಬಡಿಯಿರೊ.

ಜಂಗಮ 2 : ಬೇಡ..ಬಡಿವುದು ಬೇಡ ! ಅವನೆದೆಯ ಮೇಲಿರುವ

ಲಿಂಗವನು ಕಸಿದುಕೊಳಿ !

ಜಂಗಮ 3 : ಯೋಗ್ಯ ಸಲಹೆ ! ಲಿಂಗವಿಲ್ಲದ ಭವಿಯ ಭಂಗಿಸದೆ ಬಿಡದು ಜಗ !
ಅಂತೆಗೆಯ್ಯೋಣ...ಅಂತೆಗೆಯ್ಯೋಣ !

–ಕೆಲವರು ಅವನ ಎರಡೂ ತೋಳು ಬಿಗಿಹಿಡಿವರು, ಮತ್ತೆ ಕೆಲವರು ಅವನ
ಕೊರಳ ಲಿಂಗವ ಕಸಿವರು –

ಘಟ್ಟಿ : ಜಂಗಮವಾಗಿ ಜಂಗಮನ ಕೊಂದಾಗಲೆ ತನ್ನ ದೈವ ತನಗಿಲ್ಲ
ಭಕ್ತನಾಗಿ ಭಕ್ತರ ಸ್ತುತಿ ನಿಂದ್ಯವ ಮಾಡಲಾಗಿಯೆ ಸತ್ಯ ಸದಾಚಾರ
ತನಗಿಲ್ಲ, ದೀಹದ ಮೃಗಗಳಂತೆ, ಕೊಡಲಿಯ ಕಾವು ಕುಲಕ್ಕೆ
ಮಿತ್ತಾದಂತೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ.

ಜಂಗಮ 1 : ಲೋ, ಲಿಂಗವಿಲ್ಲದ ಮಂಗ, ಈಗೇನ ಮಾಡುವೆಯೋ ?

ಘಟ್ಟಿ : ನಾನೀಗ ಸರ್ವತಂತ್ರ ಸ್ವತಂತ್ರ ! ಮುಕ್ತನಾ ಬಂಧ ಮುಕ್ತ !
ನನ್ನದಾಯಿತು ಇಂದು ಅನಿಕೇತನಾತ್ಮ ! ಅನಿಕೇತನಾತ್ಮಾ !!

–ಕೂಗಿಕೊಂಡು ಅತ್ತ ಹೊರಡುವನು, ಅಷ್ಟರಲ್ಲಿ ಪ್ರಭು ಆಗಮಿಸಿ –

ಪ್ರಭು : ನಿಲ್ಲು ಓ ಮುದ್ದಣ್ಣ.

ಘಟ್ಟಿ : ಇವನಾರೊ ಬಂದವನು ಮತ್ತೋರ್ವ ಕೂಳು ಬಡುಕ !

ಪ್ರಭು : ಘಟ್ಟಿವಾಳಣ್ಣ, ಲಿಂಗವನ್ನೊಪ್ಪಿಸಿದೆ ಮತ್ತೇನು ಮುಂದೆ ?

ಘಟ್ಟಿ : ಇಷ್ಟ ಲಿಂಗವ ತೆಕ್ಕೊಂಡಲ್ಲಿ ದೃಷ್ಟವಾಯಿತೆ ನಿಮಗೆ ?
ಬಂಧಿಕಾರನ ಬಂಧನವ ಮಾಡುವುದು ಲಿಂಗದೇಹಿಗಳಿಗುಂಟೆ ?
ಜಗದಲ್ಲಿ ಉಂಡುಂಡು ಕೊಂಡಾಡುವರಿಗೆ ಘನಲಿಂಗದ ಸುದ್ಧಿ
ಏಕೆ ? ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ

ಬಸವ : (ಆಗಮಿಸಿ)
ಓಹ್ ! ನನ್ನ ಆರಾಧ್ಯ ಮೂರ್ತಿ ಅಲ್ಲಮ ಪ್ರಭುದೇವರು !
ಪೂಜ್ಯರೆ ಮಾಮನೆಯ ಹೊರಗೆ ನಿಲ್ಲುವುದೆ.
ಒಳಗೆ ದಯಮಾಡಿಸಬೇಕಾಗಿ ವಿನಂತಿಸುವೆ.

ಪ್ರಭು : ಬಸವಣ್ಣ, ಇಲ್ಲಿ ಮಹಾಶರಣ ಘಟ್ಟಿವಾಳಯ್ಯಗಳ ಹಗರಣವು
ನಡೆದಿತ್ತು. ನೋಡುತ್ತ ನಿಂತೆ !

ಘಟ್ಟಿ : (ಅಚ್ಚರಿ) ಹ್ಞಾ ! ಇವರು ಪ್ರಭುದೇವರು ! ವ್ಯೋಮ ಮೂರುತಿ
ಮಹಾಸನ್ನಿಧಾನ ! ಪ್ರಭುದೇವ ನನಗೆ ಕ್ಷಮೆ ಇರಲಿ !

ಪ್ರಭು : ಬಿಡಿ ಬಿಡಿ ಘಟ್ಟಿವಾಳಣ್ಣನವರೆ, ಇಲ್ಲಿ ತಪ್ಪಾದುದೇನು ಹೇಳಿ?

ಘಟ್ಟಿ : ಅಣ್ಣಾ ಆಜ್ಞಾನಕ್ಕೆ ನಾಚುವೆ, ಕ್ಷಮೆ ಬೇಡುವೆನು ಬಸವಣ್ಣ.

ಬಸವ : ಎಲ್ಲೆಯಿಲ್ಲದ ವೃಕ್ಷ ಉಲಿಯಬಲ್ಲುದೆ ?
ಜಲವಿಲ್ಲದ ತಟಾಕ ತೆರೆಗೊಡಲುಂಟೆ ?
ಶಬ್ದ ಮುಗ್ಧವಾದವಂಗೆ ಸಮಯವ ಸಂಪಾದಿಸುವನ್ನಬರ
ಭ್ರಾಂತ ಮರ್ಕಟವ ವೃಶ್ಚಿಕ ಹೊಯಿದಂತೆ
ಮರೆದಾಡಬೇಡ, ಭ್ರಾಂತಯೋಗಿ !

ಘಟ್ಟಿ : ತಂದೆ ಅಲ್ಲಮದೇವ, ಜಗದಣ್ಣ ಬಸವಣ್ಣ,
ನಿಮ್ಮೀರ್ವರಾ ಪಾದ ದರುಶನಕೆ ಕಾದಿದ್ದೆ.
ಅದು ಪೂರ್ಣವಾಯ್ತಿಂದು. ಬಂದ ಕಾರ್ಯವ ಮುಗಿಸಿ
ಶಿವದೆಡೆಗೆ ನಡೆಯುವೆನು !
ಅಪ್ಪಣೆಯ ಕೊಡಿ ನೀವು
–ಭಾವ ಪರವಶನಾಗಿ –
ಲೀಲೆಗೆ ಹೊರಗಾದ ಲಿಂಗವೆ ಬಾರಯ್ಯ ಎನ್ನಂಗದೊಳಗಾಗು !
ಶ್ರುತದೃಷ್ಟ ಅನುಮಾನದಲ್ಲಿ ನೋಡುವವರಿಗೆಲ್ಲಕ್ಕು ಅತೀತನಾಗು !

ಆಗೆಂಬುದಕ್ಕೆ ಮುನ್ನವೆ ಆ ಗುಂಡು ಕಾಯಕದ ಕರಸ್ಥಲದಲ್ಲಿ
ನಿಭಾರ್ವವಾಗು !
ಕಾಯವಡಗಿ ಭಾವವೆಂಬ ಭಾವ ಬಯಲಾಯಿತ್ತು !
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂಬುದಕ್ಕೆ ಮುನ್ನವೆ !

–ಘಟ್ಟಿವಾಳಯ್ಯನ ಸುತ್ತ ಜಾಜ್ವಲ್ಯಮಾನ ತೇಜಸ್ಸು ಮೂಡಿ ಅದರಲ್ಲಿ ಅವನು ಕರಗಿಹೋಗುವನು –
–ಚಣ ಕಾಲ ರಂಗ ನೀರವ –

ಬಸವ : ಶಿವ ಶಿವಾ! ಘಟ್ಟಿವಾಳಯ್ಯಗಳು ಲಿಂಗದೊಳಗಾದರು !
ಶಿವವಾದರು ಪ್ರಭುವೆ, ಶುಭದ ಸೆಲೆಯಾದರು !
ಶರಣರನು ಮರಣದಲಿ ಕಾಣುವಂತಾದರು !
ಇದೇ ಮಹಾನವಮಿ !

ಪ್ರಭು : ಅಶನಕ್ಕಂಜಿ ವೇಷವನೆ ಹೊತ್ತು ತೊಳಲುವ ಹಿರಿಯರ ಗಂಡ
ಕಾಲದ ಗಂಡ ಕರ್ಮದ ಗಂಡ
ಲಿಂಗವಿಡಿದು ಸಾವ ಹಿರಿಯರ ಗಂಡ
ಗೊಹೇಶ್ವರಾ, ನಿಮ್ಮ ಶರಣ ಘಟ್ಟಿವಾಳ
ಅಲ್ಲಮನಂತಿಂತೆಂಬುವರ ಗಂಡ !

– ಘಟ್ಟಿವಾಳಯ್ಯನ ಪಾರ್ಥಿವ ಶರೀರದ ಎಡಬಲದಲ್ಲಿ ಅಣ್ಣ ಮತ್ತು ಅಲ್ಲಮರು ನಿಲ್ಲುತ್ತಾರೆ. ಅವರ ಮುಂದೆ ಹಿಂದೆ ಹತ್ತಾರು ಜನ ಶರಣ ಶರಣೆಯರು ನೆರೆದು ಹಾಡಿ ನರ್ತಿಸುತ್ತಾರೆ–

ಹಾಡು : ದೇಹ ಗುಣಗಳನಳಿದು ಲಿಂಗದೇಹಿಯಾದ ಶರಣನು
ಬಹಿರಂಗದ ಬಳಕೆ ಮಾಯಾಮೋಹವನ್ನು ಜರಿದನು ॥ ಪ ॥
ಭಾವ ಬ್ರಹ್ಮವಾದ ಯತಿಗಿನ್ನಾವ ವೇಷವೇತಕೊ ?
ದೇಶ ಲಿಂಗವಾದ ಬಳಿಕಿನ್ನಾವ ಪದಗಳೇತಕೊ ? ॥ 1 ॥
ಮಲವ ತೊಳೆಯಲರಿಯದಮಲ ಜಲವ ತೊಳೆವೆನೆಂಬೆಯೋ
ಒಳಗೆ ಹೊರಗೆ ಲಿಂಗವಿರಲು ತೊಳಲಿ ಬಳಲಲೇತಕೋ ? ॥ 2 ॥
ಮುತ್ತು ರತ್ನ ಸಿತಕೆ ಘೃತಕೆ ಮತ್ತೆ ಪೂರ್ವ ಕ್ರೀಗಳುಂಟೆ ?
ನಿತ್ಯಮುಕ್ತ ಶರಣಗುಂಟೆ ಮತ್ತೆ ಪೂರ್ವಚರಿತವು ? ॥ 2 ॥
ಬ್ರಹ್ಮ ವಿಷ್ಣು ರುದ್ರಪದವ ಪೆರ್ಮೆಗಳಿಗೆ ಎಣಿಸದಾ
ನಿರ್ಮಳದ ಲಿಂಗದಲ್ಲಿ ಸಂಬಂಧಿಸಿದ ಶರಣನು ॥ 4 ॥
ಅಪ್ರತಿಮನಗಮ್ಯದಲ್ಲಿ ನಿಷ್ಪತ್ತಿಯನೆಯ್ದಿದಾ
ಅಪ್ರಮಾಣ ಗೊಹೇಶ್ವರನೊಳಿಪ್ಪಗಮ್ಯ ಶರಣನು ॥ 5 ॥

ಎಲ್ಲರೂ : ಶರಣ ಶ್ರೇಷ್ಠ ಘಟ್ಟಿವಾಳಯ್ಯಗಳಿಗೆ
ಉಘೇ ಉಘೇ ಉಘೇ

– ತೆರೆ –

# ಸಂಕ್ರಾಂತಿ

(ಆರಂಭದಲ್ಲಿ ಆರು ಜನ ನರ್ತಕ ನರ್ತಕಿಯರು ರಂಗದ ಮೇಲೆ ಶಿರಬಾಗಿ ಭೂದೇವಿಗೆ ನಮಿಸುವ ಭಂಗಿಯಲ್ಲಿ ಮಂಡಿಸಿರಬೇಕು. ರಂಗಬೆಳಗಿದಾಗ ತುಂಬು ಗಂಭೀರ ಕಂಠದಲ್ಲಿ ಕೆಳಗಿನ ಶ್ಲೋಕ ಪಠಿತವಾಗಬೇಕು. ಅದರೊಡನೆ ನರ್ತಕ ನರ್ತಕಿಯರ ಅಭಿನಯವೂ ಅನುಕ್ರಮವಾಗಿ ಪ್ರದರ್ಶಿತವಾಗಬೇಕು)

ಶ್ಲೋಕ : ಉದಯ ಕಾಲದೊಳೆದ್ದು ಸಡಗರದೊಳಣಿಗೈದು
ಸದಮಲದ ಸದ್ಭಾವನದಭ್ಯಂಜನವ ಮಾಡಿ
ಮನೆ ಮುಂದೆ ಮುದಗೊಳಿಸಿ ತಳಿರ ತೋರಣಕಟ್ಟಿ
ಸಾರಣೆಗೆ ಕಾರಣೆಗೆ ರಂಗವಲ್ಲಿಯ ಬರೆದು ತಿಲಕವಿಕ್ಕಿ
ಶುಭ್ರ ವಸ್ತ್ರವನುಟ್ಟು ತೊಟ್ಟು ಆಭರಣಗಳ
ಬಟ್ಟಲಲಿ ಬಿಳಿ ಎಳ್ಳು ಒಣಕೊಬರಿ ಬೆಲ್ಲ
ಮೇಲೆ ಸಕ್ಕರೆ ಅಚ್ಚು, ಚಿಣಿಕಬ್ಬು, ಕಲ್ಯಾಣಸೇವೆ
ಎಲೆ ಅಡಕೆ ಹಣ್ಣು ಕಾಯ್ ಹೂವುಗಳನಳವಡಿಸಿ
ಮನೆ ಮನೆಗೆ ಎಳ್ಳನ್ನು ಬೀರುತ್ತ ಬಂದಿದೇ ಹಬ್ಬ
ಭವ್ಯ ಸಂಕ್ರಾಂತಿ ಬಂದಿದೇ !

(ಇದು ಮುಗಿದ ಕೂಡಲೆ ಹಾಡು ಆರಂಭವಾಗಬೇಕು ಹಾಡಿನ ಕೂಡೆ ನರ್ತನವೂ ಪ್ರಾರಂಭವಾಗಬೇಕು)

ಹಾಡು : ಬಂದಿದೇ ೬ ೬ ೬.........
ಹಬ್ಬ ಬಂದಿದೆ !

(ಪಲ್ಲವಿ ಪುನರುಕ್ತಿಗೊಳ್ಳುತ್ತಾ ಕ್ಷೀಣಿಸುತ್ತದೆ. ನಿವೇದನೆ ಗಂಭೀರ ಸ್ವರದಲ್ಲಿ ಪುಟಿಯುತ್ತದೆ. ಹಿನ್ನೆಲೆಯಲ್ಲಿ ಪಲ್ಲವಿಯನ್ನು ಕುರುಕುತ್ತಲೇ ಇರಬೇಕು.)

ನಿವೇದಕ: ಹಬ್ಬಗಳು ನಮ್ಮ ಆನಂದದ ಕ್ಷಣಗಳು. ಅಂತಹ ಕ್ಷಣಗಳಲ್ಲಿ
ಒಂದು ಸಂಕ್ರಾಂತಿ, ಇದನ್ನು 'ಮಕರ ಸಂಕ್ರಾಂತಿ' ಅಥವಾ
'ಸಂಕ್ರಮಣ ಹಬ್ಬ' ಎಂತಲೂ ಕರೆಯುತ್ತಾರೆ.
ಇಂದು ಸಂಕ್ರಾಂತಿ ! ಅಂದರೆ ಬೆಳಕು ಬೆಳಕಿನೊಡನೆ ಕೂಡುವ ಹಬ್ಬ
ಸೂರ್ಯದೇವನು ಧನುರ್ ರಾಶಿಯಿಂದ ಮಕರ ರಾಶಿಗೆ ಕ್ರಮಿಸುವ
ದಿನ ! ಉತ್ತಾರಾಯಣದ ಪುಣ್ಯದಿನ. ಹಬ್ಬಕ್ಕೆ ಹಾರ್ದಿಕ ಸ್ವಾಗತ.

ಹಾಡು : ಬಂದಿದೇ ಹಬ್ಬ ಬಂದಿದೆ
ಸಂಕ್ರಾಂತಿ ಬಂದಿದೆ
ಸಂಕ್ರಮಣ ಬಂದಿದೆ ॥ ಪ ॥
ಸುಗ್ಗಿಗೆ ಶುಭ ನಾಂದಿಯನ್ನು
ಹಾಡಿ ಹರಸಿ ನಿಂದಿದೆ ॥ ಅನು.ಪ

ಗರುಕೆ ದೋಣಿ ಎಲೆಗಳಲ್ಲಿ ಇಬ್ಬಣಿ ಮಣಿ ದೀಪಮಾಲೆ
ಮಿರು ಮಿರುಗಿಸಿ ಹೊಂಬಿಸಿಲಲಿ ಸಂಗಮಿಸುತೆ ಸಂಭ್ರಮದಲಿ
॥ ಬಂದಿದೇ ಹಬ್ಬ ಬಂದಿದೆ ॥

ಹೂವು ಹೂವು ಹೂವು ಚೆಲ್ಲಿ ಹೊಂಬಾಳೆಯ ರಂಗದಲ್ಲಿ
ನೀಲಿಯ ಆಕಾಶದಲ್ಲಿ ಬೆಳ್ಳಕ್ಕಿಯ ಸಾಲ ರಚಿಸಿ ॥
॥ ಬಂದಿದೇ ಹಬ್ಬ ಬಂದಿದೆ ॥

ಮಾಗಿ ಚಳಿಗೆ ಪುಂಗಿಯೂದಿ ಅದರ ಬೆಂಗೆ ಸುಗ್ಗಿ ಸೂಡಿ
ರಾಗ ರಸಿಕರಾನಂದದ ರಾಸಕ್ರೀಡೆಯನ್ನು ಅಡಿ
॥ ಬಂದಿದೇ ಹಬ್ಬ ಬಂದಿದೆ ॥

ಪಚ್ಚೆ ಹಸುರ ಹಚ್ಚಡದಲಿ ಬೆಚ್ಚನೆ ಪಿಸುಮಾತನಾಡಿ

ಹುಚ್ಚು ಹೊಳೆಯ ಹಸಿರ ಹರಿಸಿ ಕಾಶ್ಮೀರದ ಚವರಿ ಬೀಸಿ
॥ ಬಂದಿದೇ ಹಬ್ಬ ಬಂದಿದೆ ॥
ಅಂಬೆಗಾಲ ಕಂದರಿಗೆ ಆನಂದದ ಚಿಣ್ಣರಿಗೆ
ಬೆಳ್ಳಿ ಬೊಂಬೆಯನ್ನು ಕೊಟ್ಟು ಎಳ್ಳು ಬೆಲ್ಲ ಕೊಬರಿಯಿಟ್ಟು
॥ ಬಂದಿದೇ ಹಬ್ಬ ಬಂದಿದೆ ॥
ತೆಕ್ಯಾಲ ಕೃಷ್ಣನನ್ನು ತಳಿಗೆ ತೋರಿ ಕರೆವುತಾ
ಬಾರೊ ಕೃಷ್ಣ, ಕೃಷ್ಣ ಬಾರೊ ಮುದ್ದು ಮಗುವೆ ಬಾರೊ ಎನುತ
॥ ಬಂದಿದೇ ಹಬ್ಬ ಬಂದಿದೆ ॥
ಮಣೆಯ ಮೇಲೆ ಮಕ್ಕಳನ್ನು ಅಕ್ಕರಿಂದ ಕೂರಿಸಿ
ಎಳ್ಳು ಬೆಲ್ಲ ಹಿಡಿಯನೆತ್ತಿ ದೃಷ್ಟಿತೆಗೆದು ನಿವಾಳಿಸಿ
ಹಣೆಗೆ ಕುಂಕುಮವನಿಟ್ಟು ಅರತಿಯನು ಎತ್ತುತಾ
ಸಕ್ರೆ ಅಚ್ಚು ಬಾಯಿಗಿರಿಸಿ ಹಾಡಿ ಹರಸಿ ಬಂದಿದೆ ॥
॥ ಬಂದಿದೇ ಹಬ್ಬ ಬಂದಿದೆ ॥

ನಿವೇದಕ: ತಮಿಳು ನಾಡಿನಲ್ಲಿ ಇದನ್ನು 'ಪೊಂಗಲ್' ಎಂದು ಕರೆಯುತ್ತಾರೆ.
'ಪೊಂಗು' ಎಂಬ ಶಬ್ದಕ್ಕೆ 'ಉಕ್ಕುವುದು' ಎಂಬರ್ಥವಿದೆ.
ಅದರಂತೆ ಬಯಲಿನಲ್ಲಿ ಒಲೆಹೂಡಿ ಅನ್ನ ಮಾಡುತ್ತಾರೆ.
ಅದು ಉಕ್ಕುತ್ತದೆ. ಆ ಉಕ್ಕುವಿಕೆಯೇ ಪೊಂಗಲ್.
ಇದು ಅಂತರಂಗದ ಆನಂದ ಉಕ್ಕುವುದರ ಬಾಹ್ಯಸಂಕೇತವೂ
ಹೌದು. ಅಂದು ತೌರಿಗೆ ಬಂದ ಹೆಣ್ಣು ಮಕ್ಕಳು
ಸಾಂಪ್ರದಾಯಿಕವಾಗಿ 'ತವರು ತಂಪಾಗಿರಲಿ, ಎಂದು ಹರಸುತ್ತಾರೆ,
ಇಂತಹ ಹಾರೈಕೆಯಿಂದಾಗಿ ಇದನ್ನು 'ಕನುವು ಹಬ್ಬ' ಎಂತಲೂ
ಕರೆಯುತ್ತಾರೆ.

ಹಾಡು : ಹೆಣ್ಣುಮಕ್ಕಳನ್ನು ಕರೆಸಿ ತೌರಿಗೆ ತಂಪನ್ನು ಕೋರಿ
ಕನುವು ಹಬ್ಬ ತನುವಿನಿಂದ ಅಚ್ಚರಿಸಿ ಹಸೆ ರಚಿಸಿ
ಗುಬ್ಬಿ ಕಾಗೆ ಮದುವೆ ಮಾಡಿದಂತೆ ಆಟವಾಡಿ
ಹರಿಶಿಣದಾ ಕುಂಕುಮದಾ ಬಣ್ಣ ಬೆರೆತ ಅನ್ನ ಚೆಲ್ಲಿ
॥ ಬಂದಿದೇ ಹಬ್ಬ ಬಂದಿದೆ ॥

ನಿವೇದಕ: ವೈದಿಕ ಸಂಪ್ರದಾಯದಲ್ಲಿ ಉತ್ತರಾಯಣ ಪುಣ್ಯ ಕಾಲವೆಂದು
ಪರಿಗಣಿತವಾದ ಈ ದಿನ ದ್ರಾವಿಡ ಸಂಪ್ರದಾಯದಲ್ಲಿ ಸ್ವರ್ಗದ
ಬಾಗಿಲು ತೆರೆಸುವ ಪುಣ್ಯ ದಿನ ಎಂಬ ನಂಬುಗೆ ಮೂಡಿಸಿದೆ.

ಹಾಡು : ಹುಗ್ಗಿ ಪಾಯ್ಸ ಪೊಂಗಲು ಉಂಡು ಮಂದಿ ಹಿಗ್ಗಲು
ತೆರೆವುದಿಂದು ಬಾಗಿಲು ಸ್ವರ್ಗದಾ ಹೆಬ್ಬಾಗಿಲು
ಎಂಬ ಭವ್ಯ ಭಾವ ಬೆಳೆಸಿ ಚಿಂತೆ ಸಂತೆ ಎಲ್ಲ ಮರೆಸಿ
ಹೊಸ ಬಾಳಿಗೆ ಜಸವ ಹಾಡಿ ಚೈತನ್ಯವ ತುಂಬುತಾ ।

ನಿವೇದಕ: ಶಿಷ್ಟ ಮತ್ತು ಜಾನಪದ ಎರಡೂ ಸಂಪ್ರದಾಯಗಳ ವಿಶಿಷ್ಟ ಆಚರಣಾ ಹಬ್ಬ ಈ ಸಂಕ್ರಾತಿ. ಶಿಷ್ಟ ಸಂಪ್ರದಾಯದವರಿಗೆ ಇದು ಎಳ್ಳು ಬೀರುವ ಹಬ್ಬ 'ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡು' ಎಂಬ ನೀತಿ ಮಾತು ಪ್ರಸಕ್ತ ದಿನದಲ್ಲಿ ಪ್ರಸಿದ್ಧ. ತಾಯಂದಿರು ಇಂದು ತಮ್ಮ ತಮ್ಮ ಹೆಣ್ಣು ಮಕ್ಕಳಿಗೆ ರೇಶ್ಮೆ ಲಂಗ ಉಡಿಸಿ, ಬಂಗಾರದ ಆಭರಣ ತೊಡಿಸಿ, ಕೈ ತಟ್ಟೆಯಲ್ಲಿ ಎಳ್ಳು ಬೆಲ್ಲ, ಕೊಬರಿ ಕಬ್ಬು ಹಾಗೂ ಹಲವಾರು ಸಕ್ಕರೆ ಅಚ್ಚುಗಳನ್ನು ಕೊಟ್ಟು ಮನೆ ಮನೆಗೆ ಬೀರುವಂತೆ ಹೇಳಿ ಕಳುಹಿಸುತ್ತಾರೆ.

ಆ ಮಕ್ಕಳು ಎಲ್ಲರ ಮನೆಗಳಿಗೂ ಎಳ್ಳು ಬೀರಿ ಅವರಿತ್ತುದನ್ನು ಕೊಂಡು ಮನೆಗೆ ಬರುತ್ತಾರೆ.

ಆ ಮಕ್ಕಳ ಆಗಮನವೇ ಚೆಂದ ನೋಡಲು ;

ಹಾಡು : ಸಂಕ್ರಾಂತಿ ಇದು ಸಂಕ್ರಾಂತಿ
ಹರಸಲು ಬಂದಿದೆ ಸುಖಶಾಂತಿ ॥ ಪ ॥

ವರುಷದ ಹರುಷದ ಸಂಕ್ರಾಂತಿ
ಬೆಳಕಿನ ಸಂಗಮ ಸಂಕ್ರಾಂತಿ ॥ ಅನು. ಪ. ॥
ಲಂಗದ ಹುಡುಗಿಗೆ ಸೀರೆಯ ಉಡಿಸಿ
ಬಂಗಾರದ ಆಭರಣ ತೊಡಿಸಿ
ತಳಿಗೆಯ ತುಂಬಿಸಿ ಎಳ್ಳು ಬೆಲ್ಲ
ಬೀರಿಸಿ ನಲಿಯುವ ಸಂಕ್ರಾಂತಿ ॥ 1 ॥
ಮನೆ ಮನೆಯಂಗಳ ಕಾಮನ ಬಿಲ್ಲು
ಏಳು ಬಣ್ಣಗಳ ರಂಗೋಲಿ
ರಾಸಲೀಲೆಗೆ ಹಾಸು ಹಾಸಿದೊಲು
ವೇಷವ ಧರಿಸಿವೆ ಬೀದಿಗಳು
ಉತ್ತರಾಯಣದ ಸಂಕ್ರಾಂತಿ
ಪುಣ್ಯಪ್ರದವಿದು ಸಂಕ್ರಾಂತಿ
ದೂರ ಸರಿಯುತಿದೆ ಮಾಗಿ ಚಳಿ
ನವಚೈತನ್ಯದ ಕಸು ತುಂಬಿ

ನಿವೇದಕ: ಜಾನಪದರು ಈ ಹಬ್ಬವನ್ನು ಬಹಳ ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಇದನ್ನು ಉಯ್ಯಾಲೆ ಹಬ್ಬವಾಗಿ ರೂಪಿಸಿಕೊಂಡಿದ್ದಾರೆ. ಹಳ್ಳಿಯ ಹೆಣ್ಣು ಗಂಡು ಒಟ್ಟಾಗಿ ಸೇರಿ ಮರದ ಕೊಂಬೆಗಳಿಗೆ ಹಗ್ಗ ಕಟ್ಟಿ ಜೋಕಾಲಿ ಆಡುತ್ತಾರೆ. ಈ ಉಯ್ಯಾಲೆಯ ಒಲವು ವಯ್ಯಾರದ ಚೆಲುವು ನಮ್ಮ ಜಾನಪದರಿಗೆ ಜಗತ್ತನ್ನೇ ಮರೆಸುತ್ತದೆ.

ಹಾಡು : ಉಯ್ಯಾಲೇ !!!
ಉಯ್ಯಾಲೆ ಉಯ್ಯಾಲೆ ಉಯ್ಯಾಲೆ ॥
ಗಾಳಿ ಗಯ್ಯಾಳಿಯ ತೋಳೀನ ಅಲೆ ಅಲೆ
ಮೇಲೆ ತೇಲೂವಾಗ ಕೆದರಿತವಳಾ ತಲೆ !
ಸೂರ್ಯದೇವನಿಗೇ ಚಾಮsರವಿಕ್ಕೂತ
ಹಾಸು ಬೀಸಿನಲಿ ಹಾರಾಡುತ್ತೈತೇ॥ ಉಯ್ಯಾಲೇ ॥
ಹೆಣ್ಣು ಗಂಡು ಕೂಡಿ ಜೋಕಾಲಿಯಾಡೀ
ಗಗನಕ್ಕೆ ಹಾರಿ ಮುಗಿಲು ಮಾತಾಡೀ
ಗರಿಗೆದರಿ ಹಾರುsವ ಹಕ್ಕಿಗಳಂತೇ
ಮಿರುಗುವ ಬೆಳ್ಳನ್ನ ಚುಕ್ಕಿಗಳಂತೆ ॥
। ಉಯ್ಯಾಲೇ.......॥

ನಿವೇದಕ: ಕನ್ನಡನಾಡು ಶ್ರೇಷ್ಠ ಸಂಸ್ಕೃತಿಯ ತೂಗು ತೊಟ್ಟಿಲು. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಸಂಸ್ಕೃತಿ ಅದರದು. ಅದರಿಂದಾಗಿ ಸಂಕ್ರಾಂತಿ ಮಾನವನಿಗಷ್ಟೇ ಮೀಸಲಲ್ಲ, ದನಕರುಗಳಿಗೂ ಆಚರಣ ಯೋಗ್ಯ ಹಬ್ಬ ಎಂಬ ಸದ್ಭಾವನೆ ಈ ನಾಡಿನದು. ಇಂದು ದನಕರುಗಳ ಮೈತೊಳೆದು. ಅವುಗಳ ಕೊಂಬುಗಳಿಗೆ ಬಣ್ಣ ಬಳಿದು, ಕೊರಳುಗಳಿಗೆ ಗೊಂಡೆ ಹಾರ ಹಾಕಿ, ಬೆನ್ನು ಮೇಲೆ ಜೂಲು ಹರಡಿ, ಹಬ್ಬದ ಅಡುಗೆಯನ್ನು ಅವುಗಳಿಗೂ ಉಣ ಬಡಿಸಿ, ಊರಾಚೆಯ ದೇವಾಲಯದ ಬಳಿ 'ಕಿಚ್ಚು ಹಾಯಿಸು'ತ್ತಾರೆ ಅಲ್ಲಿ ಉರಿಯುವ ಜ್ವಾಲೆಯ ಮೇಲೆ ನುಗ್ಗಿಸಿ ತಾವೂ ನುಗ್ಗಿ, ಕೇಕೆ ಶಿಳ್ಳೆ ಹಾಕಿ, ಆನಂದದ ಬುಗ್ಗೆ ಚಿಮ್ಮಿಸುತ್ತಾರೆ.

ಹಾಡು : ಊರು ಊರುಗಳಲ್ಲಿ ಕೇರಿ ಸೂರುಗಳಲ್ಲಿ
ಸಾರುತ್ತ ಬಂದೈತೆ ಸಂಕ್ರಾಂತಿ !
ಎಳ್ಳು ಬೆಲ್ಲ ತಿಂದು ಒಳ್ಳೆ ಮಾತುಗಳಾಡಿ
ಮನೆ ಮನವ ತುಂಬಲಿ ಸುಖ ಶಾಂತಿ ॥
ಕುಸುರೆಳ್ಳು ಒಣ ಕೊಬರಿ ಹಸನಾದ ಹೊಸಬೆಲ್ಲ
ಸಕ್ಕರೆs ಅಚ್ಚು ಚಿಣಿ ಕಬ್ಬು
ಸಕ್ಕರೆs ಅಚ್ಚು ಚಿಣಿ ಕಬ್ಬು ಬೀರುತ್ತ

ಅಕ್ಕರೆಯ ಹಸೆಯ ಬರೆದಿದೆ
ದನಕರು ಹಸು ಹೋರಿ ದವನದ ತುತ್ತೂರಿ
ಹೊಂಬಾಳೆ ಚವರಿ ಹಣೆ ಏರಿ
ಹೊಂಬಾಳೆ ಚವರಿ ಹಣೆ ಏರಿ ತೊನೆವಾಗ
ಗೊಂಡೆಯ ದಂಡೆ ನಲಿದಾವೊ
ಮನೆಯ ಅಂಗಳದಲ್ಲಿ ಗೊನೆಯ ಬಾಳೆಯ ಹಣ್ಣು
ಗಂಗಳದ ತುಂಬಾ ಪೊಂಗಲ್ಲು
ಗಂಗಳದ ತುಂಬಾ ಪೊಂಗಲ್ಲು ತುಂಬಿಟ್ಟು
ತಂಗೀಯ ತವರೀಗೆ ಕರೆಸೈತೆ
ಹೊಂಗೆಯ ನೆರಳಂತೆ ತುಂಗೆಯ ದಡದಂತೆ
ತಂಪು ಸಂಕ್ರಾಂತಿ ಬಂದೈತೆ !
ತಂಪು ಸಂಕ್ರಾಂತಿ ಬಂದೈತೆ ಜನರಲ್ಲಿ
ಶಾಂತಿ ಪ್ರೀತಿಗಳ ಬೆಸೆದೈತೆ

**ಶುಭಂ**

# ಗಣೇಶ ಮಹಿಮೆ

## ಪಾತ್ರವರ್ಗ

1. ಶಿವ
2. ಪಾರ್ವತಿ
3. ಗಣೇಶ
4. ಷಣ್ಮುಖ
5. ಮಾರೀಚ ಮಹರ್ಷಿ (ಛಾಯಾರೂಪಿ)
6. ವ್ಯಾಸ (ಛಾಯಾರೂಪಿ)
7. ರಾವಣ
8. ಜೃಂಬೆ (ರಾಕ್ಷಸಿ)
9. ಸಿದ್ಧಿ
10. ಬುದ್ಧಿ
11. ಕ್ಷೇಮ
12. ಲಾಭ
13. ನರ್ತಕಿ – 1
    – 2
    – 3
    – 4
14. ನಟ
15. ನಟಿ

– ಹಿನ್ನೆಲೆ ಧ್ವನಿ –

## ದೃಶ್ಯ 1 :

[ ರಂಗ ಬೆಳಕಾಗುವುದರ ಜೊತೆಯಲ್ಲೇ ಓಂಕಾರದ ಝೇಂಕೃತಿ ಮೊಳಗಬೇಕು. ಮುಂದಿನ ಶ್ಲೋಕ ಪಠಣ ಮುಂದುವರಿದಂತೆ ನಾಲ್ವರು ನರ್ತಕಿಯರು ನಿಧಾನವಾಗಿ ನೆಲದಿಂದ ಮೇಲೆ ತಲೆಯೆತ್ತಿ ಅಭಿನಯ ತೋರುತ್ತಾ ಹಾಡು ಆರಂಭವಾದ ಮೇಲೆ ನರ್ತನ ನಡೆಸಬೇಕು.]

ಶ್ಲೋಕ : ಓಂ ಅಜಂ ನಿರ್ವಿಕಲ್ಪಂ ನಿರಾಕಾರಮೇಕಂ
ನಿರಾಲಂಬಮಾನಂದಮದ್ವೈತ ರೂಪಂ
ಪರಂ ನಿರ್ಗುಣಂ ನಿರ್ವಿಶೇಷಂ ಪರೇಶಂ
ಪರಬ್ರಹ್ಮ ರೂಪಂ ಗಣೇಶಂ ಭಜೇಮ ॥

ಹಾಡು : ಶರಣು ಗಣೇಶ
ಶರಣು ವಿಘ್ನೇಶ
ಶರಣು ಪವಿತ್ರ ಪಾವನ ಗಾತ್ರ ॥
ಗಜವದನನೆ ಹೇ ಲಂಬೋದರನೆ
ಮೂಷಕ ವಾಹನ ಪರಶು ಪಾಣಿಯೇ
ಮೋದಕ ಪ್ರಿಯನೇ ಸಾಧಕ ಸಿದ್ಧಿಯೆ
ವಿದ್ಯಾ ಬುದ್ಧಿ ಪ್ರದಾಯಕ ಮೂರ್ತಿಯೇ ॥1॥
ಗೌರೀಸುತನೆ ಗುಣಗಣ ಗಣಿಯೆ
ಸಿದ್ಧಿ ಬುದ್ಧಿಯರ ಪ್ರೀತಿಯ ಪತಿಯೆ
ಕ್ಷೇಮ ಲಾಭರಿಗೆ ತಂದೆಯಾದವನೇ
ಶುಭಕರ ಶ್ರೀಕರ ತೃಪ್ತಿ ಸ್ವರೂಪನೆ ॥2॥
ದೇವರ ದೇವನೆ ಶಿವ ಸುಪ್ರೀತನೆ
ಸಕಲ ಲೋಕಹಿತ ಸಾಧಕನೆ
ವಿಶ್ವ ಪೂಜಿತನೇ ವಿಶ್ವಾಂತರಾತ್ಮನೆ
ಶಾಂತಾರ್ಕಕೋಟಿ ಪ್ರಭಾಪುಂಜ ತೇಜನೆ ॥3॥

(ನರ್ತಿಸುತ್ತಲೇ ನರ್ತಕಿಯರ ನಿರ್ಗಮನ ತದನಂತರ ನಟ – ನಟಿಯರ ಪ್ರವೇಶ ನಟ ಗಾಬರಿಯಿಂದ ರಂಗವೇರಿ)

ನಟ : ಎಲ್ಲಿ ಪಾರ್ವತಿಯ ಪಾತ್ರಧಾರಿಣಿ ಇನ್ನೂ ರಂಗವೇರಲಿಲ್ಲವೇ ।
ಸಮಯವಾಗುತ್ತಾ ಬಂತು ಕೊಟ್ಟ ಕಾಲವನ್ನು ಮೀರುವುದು
ಒಳ್ಳೆಯದಲ್ಲ ಒಳ್ಳೆಯದಲ್ಲ ಒಳ್ಳೆಯದಲ್ಲ !

ನಟಿ : ಏನು ಸೂತ್ರಧಾರಿ
ನೀನೆಂಥ ನಾಟ್ಯಾಚಾರಿ !
ನಾಂದಿ ಸಭಾವಂದನೆ ಸ್ಥಾಪನೆ ಪ್ರಸ್ತಾವನೆ
ಪ್ರಕರಣ ವಿಧಿ ನಿಬಂಧನೆ ಎಲ್ಲವೂ ಸಮರ್ಪಣೆ
ಶಿವೋಹಂ ! ಶಿವೋಹಂ !!

ನಟ : ನಟಿ, ಹಾಗಲ್ಲ ಕೇಳು :
ಲೀಲೆ ಲೀಲೆ ಇದು ಲೀಲೆ
ವಿಘ್ನ ವಿನಾಶಕನಾ ಲೀಲೆ
ಇದು ಗಣೇಶ ಲೀಲೆ
ಗಮನಿಸೆ ಬಾಲೆ
ವಿಘ್ನವೆಲ್ಲಿಯದು ನೀ ಹೇಳೇ ?
ಅವನದೇ ನಾಟಕ ಅವನೇ ಗಾಯಕ
ನಾಯಕ ನಟನೂ ಅವನೇ
ಕವಿಯೂ ಅವನೇ ಕಾವ್ಯವು ಅವನೇ

ಅವನೇ ನಾಟ್ಯ ವಿಹಾರಿ !

(ಬೇರೆ ಧಾಟಿಯಲ್ಲಿ)

ಕೇಳು ಸುಜಾಣೆ ಕಥೆ ಹೇಳುವೆ
ನಾ ಹೇಳುವುದೆಲ್ಲವ ನೀ ನೋಡುವೆ
ಗಣಪತಿ ಗಜಮುಖ ಗೌರೀಕುವರನು
ಪಾರ್ವತಿ ದೇವಿಯ ಮಾನಸ ಪುತ್ರನು
ಗಜಾಸುರನೆಂಬುವ ರಕ್ಕಸನನ್ನು
ಕೊಲ್ಲಲು ಹೋಗಿದ್ದ ಶಿವ ಬಿಟ್ಟು ಶಿವೆಯ
ಒಬ್ಬಳೆ ಶಿವೆ ಬೇಸರ ನೀಗಲು
ಮಾಡಿದಳೊಂದು ಮೂರ್ತಿ ಮೃತ್ತಿಕೆಯ
ಮಣ್ಣಿನ ಮೂರುತಿ ಮಾತಾಡಿತಂದು
ಪಾರ್ವತಿಗಿತ್ತು ಬಲು ಹಿಗ್ಗು ತಂದು ॥

– ದೃಶ್ಯ ಬದಲಾವಣೆ –

(ಪಾರ್ವತಿ ತನ್ನ ಸಖಿಯರೊಡನೆ ಗಣೇಶನನ್ನು ಮುದ್ದಿಸುತ್ತಾ ಪ್ರವೇಶ)

ಮುದ್ದಿನ ಕಂದನೆ ಬಾರೊ
ಎನ್ನ ಮನದಾನಂದವೆ ಬಾರೊ ॥ ಪ ॥
ಮುದವನೆ ತುಂಬುವ ಮದ್ದಾನೆ ಮರಿಯಂಥ
ಸಿದ್ಧಿ ವಿನಾಯಕ ಬಾ ಬಾರೋ ॥ ಅನು. ಪ ॥
ಶಿವನಾಗಿ ರವಿಯಾಗಿ ರಾಗಿಣೀ ರೂಹಾಗಿ
ಕಟಿತಟ ವಿನ್ಯಸ್ತ ನಟನಾಗಿ ಬಾರೋ ॥ 1 ॥
ನಂದನದ ಮಂದಾರ ಬಾಂದಳದ ಚಂದ್ರಮ
ಎಲ್ಲ ಎಲ್ಲವು ಆಗಿ ಬಾ ಬಾರೋ ॥ 1 ॥
ನುಡಿಯಲ್ಲಿ ಗುಡಿಯಾಗಿ ನಡೆಯಲ್ಲಿ ಮಡಿಯಾಗಿ
ದಿನದ ದಾಹಕೆ ತೀರ್ಥವಾಗಿ ಬಾರೋ
ದಿನಕೊಂದು ಬೆಳಕಾಗಿ ಬುವಿಗೊಂದು ಬೆಲೆಯಾಗಿ
ಜೀವ ಸಂಜೀವನೆ ಬಾ ಬಾರೊ ॥ 2 ॥

ಗಣೇಶ : ನಿನ್ನ ತೋಳ ತೊಟ್ಟಿಲಿನಲ್ಲಿ ನಾ ಲಾಲಿಯಾಡುವೆ
ನಿನ್ನ ತೊಡೆಯ ತಲ್ಪದಲ್ಲಿ ನಾನೊಮ್ಮೆ ಪವಡಿಸುವೆ :
ಅಮ್ಮ, ನಿನ್ನ ಕಣ್ಣಿನಲ್ಲಿ ಬಿಂಬವಾಗಿ ಮೂಡಿ ಬರುವೆ
ನೂರು ಬಗೆಯ ಭಾವದಲ್ಲಿ ಭಾವಗೀತವಾಗುವೆ
ನಿನ್ನ ಕೊರಳ ಶಂಖದಲ್ಲಿ ನಾನು ಶುಭ್ರನಾಗುವೆ
ನಿನ್ನ ತಿಳಿವು ತೀರ್ಥದಲ್ಲಿ ನಾನು ಶುದ್ಧನಾಗುವೆ
ಅಮ್ಮ, ಪಾದಕಮಲದಲ್ಲಿ ದುಂಬಿಯಾಗಿ ಮೊರೆಯುವೆ
ನಿನ್ನ ಪುಣ್ಯ ತಾಣದಲ್ಲಿ ಕರುಣೆಯಾಗಿ ಆಡುವೆ.
ಚಂದ್ರಕಾಂತಿ ಬಿಂಬದಲ್ಲಿ ನಿನ್ನ ಹೆಸರ ಕೆತ್ತುವೆ
ಕಡಲ ತೆರೆಯ ಎದೆಯ ಮೇಲೆ ದೋಣಿಯಾಗಿ ತೇಲುವೆ
ಅಮ್ಮ, ನಿನ್ನ ಹಾಸಿನಲ್ಲಿ ಕನಸೆ ಆಗಿ ಸುಳಿಯುವೆ
ನನಸಿನೆಳೆಯ ನೇಯುತಿರುವ ಜೇಡ ಜಾಲವಾಗುವೆ.

ಪಾರ್ವತಿ : ಬೇಸರು ನೀಗುವ ಆಸರೆ ಬೊಂಬೆ
ನಿನಗಿಂತಲು ಮಿಗಿಲಿಲ್ಲೆಂದೆ ॥
ಸ್ನಾನಕೆ ಹೋಗುವೆ ಪನ್ನೀರ ಮೀಯುವೆ
ಆನಂದದಿ ನಾ ಕ್ರೀಡಿಸುವೆ !
ಯಾರನು ಬಿಡಬೇಡ ಎಲ್ಲಿಗು ಹೊಗಬೇಡ

ಬಲ್ಲಂತೆ ನಡೆದುಕೊ ನನ ಕಂದ !!
ಕಾಣದರಿದ್ದರು ಕಳ್ಳರೆ ಇದ್ದರು
ಅದರ ನುಡಿ ಮಾತ್ರ ಮರಿಬೇಡ !
ದರ್ಪಕ್ಕೆ ದಾರ್ಷ್ಟ್ಯಕ್ಕೆ ತಲೆಬಾಗದಿರು ಕಂದ
ಮೆಟ್ಟು ಸೊಕ್ಕಿನ ಶಾರ್ದೂಲ ರುಂಡ !

ಗಣೇಶ : ಮಿಂದು ಬಾ ನನ ತಾಯಿ ಶುಭದೆ ಸಿಂಧೂರೆ
ನೋಡಿ ಕೊಳ್ಳುವೆನವರ ಯಾರೆ ಬಂದಾರೆ !
ತಡೆಯುವೆನು ತುಡುಕುವೆನು ನೆತ್ತಿ ಮೆಟ್ಟುವೆನು
ದುಡುಕಿದರೆ ರುಂಡವನು ಚೆಂಡಾಡಿ ತಹೆನು
ವಿನಯಕ್ಕೆ ಮಣಿಯುವೆನು ಸದ್ಗುಣವ ಪೂಜಿಸುವೆ
ನಿಮ್ಮ ತಲೆಗೆಂದಿಗೂ ಹೂವ ತರುವೆ ಮಾತೆ
ಹೂವ ತರುವೆ !

(ಗಣಪತಿಯು ಪಾರ್ವತಿಯನ್ನತ್ತ ಬೀಳ್ಕೊಟ್ಟು ಬೀಜಿಮ್ಸನಲ್ಲಿ ಗಣಪ ನರ್ತಿಸುವನು. ಅಷ್ಟರಲ್ಲಿ ಶಿವನ ಆಗಮನ: ಶಿವನೂ ಸಹ ಅವನೊಡನೆ ನರ್ತಿಸಿ ಪಾರ್ವತಿಯ ಅಂತಃಪುರದೊಳಗೆ ಪ್ರವೇಶಿಸಲು ಉದ್ಯುಕ್ತನಾಗುವನು. ಅಷ್ಟರಲ್ಲಿ ಗಣಪ ತಡೆಯುವನು)

ಶಿವ : ಯಾರು ನೀನು ಪೋರ ?
ಬಾಗಿಲು ಕಾವಲ್‌ಗಾರ !
ನನ್ನ ತಡೆವ ಸೊಕ್ಕೆ ನಿನಗೆ
ಸರಿದು ನಿಲ್ಲೋ ದೂರ !

ಗಣೇಶ : ಯಾರಿವನು ಉದ್ಧಟನು ಸೊಕ್ಕಿನೀ ಶಾರ್ದೂಲ
ಇರಲಿ,
ಪೂಜ್ಯ ಪರದೇಶಿಗಳೆ,
ಅಮ್ಮನಿಗೆ ಏಕಾಂತ ಸ್ನಾನಗೈಯುವಳು
ಅವಳಾಜ್ಞೆಯಾಗಿಹುದು ಬಿಡೆ ಒಳಗೆ ಪುಗಲು !

ಶಿವ : ಬಿಡದಿದ್ದರೇನಂತೆ ನಾ ನಡೆದೆ ನಡೆವೆ
ಬಾಗಿಲೀ ಕುನ್ನಿಯದು ಬೆದರಿಕೆಯೆ ನನಗೆ !

ಗಣೇಶ : ಗಳುಹದಿರೊ ಎಲೆ ಮುದಿಯ ಬಾಯ್ಗೆ ಬಂದಂತೆ !
ತಪ್ಪಿದರೆ ನಿನಗಹುದು ತಕ್ಕ ಶಾಸ್ತ್ರಿ
ನೀನೀಗ ತೆಪ್ಪಗೆ ತೊಲಗುವುದು ಸ್ವಸ್ತಿ !

ಶಿವ : ಹ್ಹಾ ! ನನಗೆ ಅವಹೇಳನವೆ !!
ಎಲವೆಲವೊ ಪೋರ
ಇದೋ ನಿನಗಿದೇ ಕಡೆಯ ಮರ್ಯಾದೆ !

(ಶೂಲದಿಂದ ಅವನ ಶಿರಚ್ಛೇದನ ಮಾಡುವನು. ಗಣಪ ನೇಪಥ್ಯದಲ್ಲಿ ಬೀಳುವನು. ರಂಗ ಚಣಕಾಲ ಮೌನ, ಅನಂತರ ನೇಪಥ್ಯದಿಂದ ರೋದಿಸುತ್ತಾ ಪಾರ್ವತಿ ಛೇದನಗೊಂಡ ಶಿರಸ್ಸನ್ನು ಹಿಡಿದು ದುಃಖಿಸುತ್ತಾ ಪ್ರವೇಶಿಸುವಳು)

ಪಾರ್ವತಿ : ಪಡೆದೆನೇ ಇದಕಾಗಿ
ಬಯಕೆ ಬಸುರನು ನುಂಗಿ
ವ್ರತ ತಪಾನುಷ್ಠಾನ
ಗೈದೆನೇ ಈ ಬಗೆಯ ಬಲಿಗೆ.
ಕಂದನಂದವ ನೋಡಿ ಕನಸು ಕಂಡಿದ್ದೆ
ಅವನಿಂತು ಮಡಿದಿರಲು ಬಾಳು ಬೇಡಾಯ್ತು
ಶಿವ ನಿನಗೆ ಕರುಣೆಯೇ ಇಲ್ಲದೇ ಹೋಯ್ತೇ !
ಕರುಳ ಕುಡಿಯನೆ ಕಡಿದೆ ; ಬಾಳುವೆನು ಹೇಗೆ ?

(ಶಿರಸ್ಸಿನೊಡನೆಯೇ ಶಿವನ ಪಾದದಡಿ ಬೀಳುವಳು, ಶಿವ ಅವಳನ್ನು ಹಿಡಿದು ಮೇಲೆತ್ತುತ್ತಾ)

ಶಿವ : ಪಾರ್ವತಿ,
ದುಡುಕಿದೆನು ಕ್ಷಮಿಸೆನ್ನ, ಕ್ಷಮೆ ಸರ್ವಮಂಗಲೆಯೆ
ಅಳಲದಿರು ಅಳಲದಿರು ಮಗ ಮಡಿದನೆಂದು
ಶರಣರನು ಮರಣದಲಿ ಕಾಣಬಹುದಂತೆ !
ಋತದಿಚ್ಛೆ ಬಲ್ಲೆವೆ ! ಎಲ್ಲ ಶುಭವಹುದು
ಕೇಳು ಮಂಗಲೆ ಕೇಳು, ಸೂರ್ಯದೇವನ
ವರಪ್ರಸಾದದಿ ಮೆರೆವ ರಕ್ಕಸನುಂಟು
ಲೋಕ ಕಂಟಕನವನು ಹೆಸರು ಸಿಂಧುದೈತ್ಯ
ದೇವ ದಾನವರಲ್ಲಿ ಮಾನವರು ಮನುಗಳಲಿ
ನಾಗಲೋಕದ ಜೀವಿ, ಪಶುಪಕ್ಷಿ ಕೀಟದಲಿ
ಮರಣವಾಗದ ವರವ ಪಡೆದಿಹನು ಪಾಪಿ !
ಅವನನ್ನು ಕೊಲ್ಲುವೊಡೆ ಒಂದುಪಾಯವು ಉಂಟು !
ಕೇಳು, ನಿನ್ನೀ ಕುವರನರಿದ ಶಿರವನು ತೆಗೆದು
ಇಂದೆ ಯುದ್ಧದಿ ತರಿದ ಆ ಗಜಾಸುರನೆಂಬ
ರಕ್ಕಸನ ರುಂಡವನು ಮೇಲಿರಿಸೆ,
ವಿಶ್ವ ಜಗದಲ್ಲಿರದ ಮಾನವನ ಮೈ, ತಲೆ ಮಾತ್ರ ಆನೆ
ಅಂತಿರುವ ವಿಚಿತ್ರ ವ್ಯಕ್ತಿಯಿಂದಾ
ರಕ್ಕಸನ ವಧೆ ಸಾಧ್ಯವಹುದು !
ಸಿಂಧು ದೈತ್ಯನ ನಾಶ ಇವನಿಂದ ಸಾಧ್ಯ
ಈ ಗಜಾನನನಿಂದಷ್ಟೆ ಸಾಧ್ಯ !
ಇವನು ಪ್ರಾಕೃತನಲ್ಲ ಪರತರದ ತೇಜ
ಸಚ್ಚಿದಾನಂದ ಘನ ಓಹ್ ! ಪರಾತ್ಪರ ಶಕ್ತಿ
ತಿಳಿ ನೀನು ಮಂಗಳೆ ಇಂದಿವನ ಜನನ
ದೈತ್ಯತೆಯ ಮರ್ದಿಸಲು ಭಾದ್ರಪದ ಶುದ್ಧ
ಚತುರ್ಥಿ ಈ ಶುಭದಿನ ಸಿಂಹ ಸುಲಗ್ನ ಸಂಲಗ್ನದಲ್ಲಿ
ಪ್ರತಿ ವರುಷ ಲೋಕಕ್ಕೆ ಅವತರಿಸಿ ಮಂಗಲವ
ದಯೆಗೈದು ಬರುವನೌ !
ಈಗ ಹೇಳೆಲೆ ಗೌರಿ
ಮಾಹಾತ್ಮರಾ ಮರಣ ಲೋಕ ಕಲ್ಯಾಣಕ್ಕೆ !
ಒಂದೆಡೆಯ ನಷ್ಟ ಬೇರೆಡೆಯ ಲಾಭಕ್ಕೆ
ಲೋಕಸಂಗ್ರಹ ಕಾರ್ಯ ನಿನ್ನಿಂದಲಾಗುತಿದೆ
ನೀನಿತ್ತ ಈ ಪುಣ್ಯ ಪುರುಷನಿಂದಾಗಲಿದೆ ! ಶುಭಮಕ್ಕೆ

ನರ್ತಕಿಯರು: (ನಾಲ್ವರೂ ಪ್ರವೇಶಿಸಿ)
ಗಜಮುಖನೆ ಗಣಪತಿಯೆ ಭುಜಗಭೂಷಣನೆ
ಶಶಿ ಸೂರ್ಯ ಪ್ರಭೆಯುಂಡ ಪರತರದ ತೇಜನೇ ॥
ಕರ್ಣ ಕಂಡಲ ಕಡಗ ಮಂಡಲ ಮಹೋದಯನೆ
ದುಂಡು ಮಾಣಿಕ ಮಕುಟ ಧರಿಸಿದವನೇ
ವಕ್ರತುಂಡನೇ------ನಕ್ಷತ್ರ ತಿಲಕನೆ
ರಕ್ಷಿಸು ಜಗವನ್ನು ಮೀನಾಕ್ಷಿಸುತನೇ
(ನರ್ತನ ಮುಗಿಯುತ್ತಿದ್ದಂತೆಯೇ ನಟ ನಟಿಯರ ಪ್ರವೇಶ)

ನಟಿ : ಜಯ ಜಯ ಗಜಾನನ
ಜಯ ದೈತ್ಯ ಭಂಜನ ।

ನಟ : ಲೆಲೆಲೇ ಏನೇ ಇದು ನಿನ್ನ ನಾಟಕ ?

ನಟಿ : ಮುಗಿಯಿತಲ್ಲ ನಾಟಕ, ಹಾಡಿದೆನು ಮಂಗಳ
ಅಂಕಪರದೆ ಬಿದ್ದ ಮೇಲೆ ಭರತನಾಟ್ಯ ಮೇಳ !

ನಟ : ಅಯ್ಯೋ ನಿನ್ನ ತಲೆಗೆ !
ಅಂಕುರಾರ್ಪಣ ವೇಳೆ ಮಂಗಳವ ಹಾಡುವುದೆ ?
ಕೇಳು, ಇದು ಇನ್ನು ಆರಂಭ, ನಾಟ್ಯ ಪ್ರವೇಶ !
ಮುಂದಿಹುದು ಗಣಪತಿಯ ಕಾರ್ಯವೈಖರಿ ತೋಷ
ನೋಡಲ್ಲಿ ಕುಳಿತಿಹನು ರಸ ಋಷಿ ವ್ಯಾಸ
ಭಾರತವ ಬರೆಸಿದನು ತಳೆ ಮಂದಹಾಸ !

(ಛಾಯಾರೂಪದಲ್ಲಿ ವ್ಯಾಸ ಹಾಡುತ್ತಿರುವ ಗಣಪ ಬರೆಯುತ್ತಿರುವ ದೃಶ್ಯ ಗೋಚರಿಸಬೇಕು)

ವ್ಯಾಸಋಷಿ ಹೇಳಿದನು
ನಾ ಹಾಡಿದಂತೆ ಕಂಠ ಓಡಲುಬೇಕು
ನೀರು ಹರಿದಂತೆ, ಬೆಳಕು ಸರಿದಂತೆ
ಆ ಮಹಾಭಾರತದ ರಚನೆಯಾಗಲು ಬೇಕು
ಎಂದ ಮೂರ್ತಿ ಗಣಪ ಒಡ್ಡಿದನು ಒಗಟೆ
ರಚನೆ ಎಡೆ ಎಡೆಯಲ್ಲಿ ಬಿಡಿಸಿ ಹೇಳಲು ಬೇಕು
ಅರ್ಥ ವ್ಯಾಚ್ಯಾರ್ಥ ವ್ಯಂಗ್ಯಾರ್ಥ ವ್ಯಂಜಿಸಿದ
ಧ್ವನಿಪೂರ್ಣ ಅರ್ಥ !
ಇಂಥ ರಸಒಸರುವರ್ಥ ತಾಣಗಳಲ್ಲಿ ಚಣಕಾಲ ತಂಗಿದ್ದು
ನಡೆದ ಪುಣ್ಯಾತ್ಮ ಗಜವದನ ಗಂಭೀರ ನೀರಾಂಜನ !
(ಛಾಯಾದೃಶ್ಯ ಮುಗಿದ ಮೇಲೆ ರಂಗ ಬೆಳಕಾದಾಗ)

**ನಟಿ** : ಗಣೇಶ ಬಂದ ಹೊಟ್ಟೆ ಮೇಲೆ ಗಂಧ ಕಾಯ್ಕಡುಬು ತಿಂದ
ಚಿಕ್ಕೆರೇಲಿ ಬಿದ್ದ ದೊಡ್ಡಕೆರೇಲೆದ್ದ
ಹ್ಹ ಹ್ಹ ಹ್ಹ ಹ್ಹ ಹ್ಹಾ
ಗಣೇಶ ಗಪ್‌ಚಿಪ್
ಮೊರದ ಕಿವಿ ರಪ್ ರಪ್
ಕಿವಿಗಿಂತ ಮೂಗು
ಕಾಲಿಗೆ ಭಾರ ಹೊಟ್ಟೆ
ಹ್ಹ ಹ್ಹ ಹ್ಹ ಹ್ಹ ಹ್ಹಾ
ಹೊಟ್ಟೆ ಡುಬ್ಬಣ್ಣಾ ಕೈಕಾಲ್ ಸಣ್ಣಣ್ಣಾ !
ಡೊಳ್ಳೊಟ್ಟೆ ಗಣಪಗೆ ಕಡುಬು ಗಾಡಿಗಟ್ಲೆ
ಸುಂಡಿಲೀ ಸರದಾರಗೆ ಕುಟುಂ ಕುಟುಂ ಕಡ್ಲೆ
ಗಣಪ್ಪ ಗಣಪ್ಪಾ !
ಹ ಹ್ಹ ಹ್ಹ ಹ್ಹ ಹ್ಹಾ

**ನಟ** : ಸಾಕು ನಿಲ್ಲಿಸೇ ನಿನ್ನ ಪರಿಹಾಸದಾಟವ
ಚಂದ್ರನಿಗಾದ ಗತಿಯೇ ನಿನಗೂ ಆದೀತು !
(ನಟಿ ಸ್ತಂಭೀಭೂತಳಾಗುವಳು)
ಏನಾಯ್ತು ಗೊತ್ತಾ !
ಚೌತಿ ಚಂದ್ರ ಸತ್ತಾ !
ನಿನ್ನ ಹಾಗೆ ಹಾಡಿಕೊಂಡು ಗೇಲಿಮಾಡಿದ
ಗಣಪ್ಪ ಅವನಿಗೆ ಶಾಪಕೊಟ್ಟ ತಡೀಲಾರದ !
ಯಾರೇ ಆಗ್ಲಿ ಚೌತಿ ಚಂದ್ರ ನೋಡಿದ್ರಾಯ್ತು
ವರ್ಷ ಇಡೀ ದೂರಿಗ್ಗುರಿ ಆಗ್ಲಿ ಅಂತಾಯ್ತು

ಇದೆಲ್ಲ ಕಂಡು ಮಾರೀಚಮುನಿ ಸಾರಿಹೇಳಿದ್ರು–
ಮಾರೀಚಮುನಿ ಛಾಯಾರೂಪಿಯಾಗಿ ನಿಂತು)

**ಮಾರೀಚ** : ಗಜ ಮುಖನು ಯುಗಾವತಾರಿ, ಚರಾಚರ ಜಗತ್ತಿಗೆ
ಮೂಲಕಾರಣನು, ಇಪ್ಪತ್ತೈದು ತತ್ವಗಳಿಂದ ಕೂಡಿದವನು.
ಕೃತಯುಗದಲ್ಲಿ ಸಿಂಹಾರೂಢನಾಗಿ ದಶಭುಜಗಳಿಂದ
ಶೋಭಿಸಿದ, ಅಂದು ಅವನಿಗೆ ವಿನಾಯಕ ಎಂದು
ನಾಮಕರಣವಾಯಿತು. ತ್ರೇತೆಯಲ್ಲಿ ಷಡ್‌ಭುಜಯುಕ್ತನೂ
ಶ್ವೇತವರ್ಣನೂ ಮಯೂರ ವಾಹನನೂ ಆಗಿ ಮಯೂರೇಶ್ವರನೆಂಬ
ಹೆಸರಿನಿಂದ ಪ್ರಸಿದ್ಧನಾದ. ದ್ವಾಪರದಲ್ಲಿ ರಕ್ತವರ್ಣ
ಚತುರ್ಭುಜ ಸಂಪನ್ನ, ಮೂಷಕವಾಹನನು ಗಜಾನನ
ಖ್ಯಾತಿಪಡೆದ. ಕಲಿಯುಗದಲ್ಲಿ ಕುದುರೆಯೇರಿ
ಧೂಮ್ರ ಕೇತುವೆನಿಸಿದ
(ಛಾಯಾ ದೃಶ್ಯ ಮಾಯವಾಗುವುದು)

**ನಟ** : ರೇಗಿಸಬೇಡಿ ಗಣಪ್ಪನ್ನ ಧ್ಯಾನಮಾಡ್ರಿ
ಒಳ್ಳೆ ಬುದ್ಧಿ ಕೊಡ್ಲೋ ಅಂತಾ ಬೇಡಿಕೊಳ್ಳಿ

**ಇಬ್ಬರೂ :** ದೇವದೇವನೆ ಶಿವ ಸುಪ್ರೀತನೆ !
ಸಕಲ ಲೋಕಹಿತ ಸಾಧಕನೇ
ವಿಶ್ವಪೂಜಿತನೆ ವಿಶ್ವಾಂತರಾತ್ಮನೆ !
ಶಾಂತಾರ್ಕಕೋಟಿ ಪ್ರಭಾಪುಂಜನೇ । ಶರಣು ಗಣಪ ನಿನಗೆ.

## ದೃಶ್ಯ :2

### ಹಿನ್ನೆಲೆಯ ಧ್ವನಿ :

ಹಿಂದೆ ತ್ರೇತಾಯುಗದಲ್ಲಿ ಲಂಕಾಧಿಪತಿ ರಾವಣೇಶ್ವರನ ಮಹಾಮಾತೆ ಕೈಕಸೆ ಸಮುದ್ರ ತೀರದಲ್ಲಿ ಮರಳಿನಲ್ಲಿ ಲಿಂಗಮಾಡಿ ಪೂಜಿಸ ತೊಡಗಿದಳು. ಆದರೆ ಅದು ಸಮುದ್ರದ ಅಲೆಗಳಿಂದ ಕೊಚ್ಚಿಹೋಯಿತು. ಮತ್ತೆ ಮತ್ತೆ ಮಾಡಿದಳು. ಮಾಡಿದ ಮರಳಲಿಂಗ ಕರಗಿ ಹೋಯಿತು. ಹೀಗೇ ನಡೆಯಿತು ಅನೇಕ ಸಲ. ಕೈಕಸೆಯ ದುಃಖಕ್ಕೆ ಕೊನೆ ಇಲ್ಲವಾಯ್ತು. ಅವಳ ಮಗ ರಾವಣ ವಿಷಯ ತಿಳಿದು – ಇದಕ್ಕೇಕಮ್ಮ ಚಿಂತೆ, ಮರಳಲಿಂಗವೇಕೆ ? ಸಾಕ್ಷಾತ್ ಪರಶಿವನ ಆತ್ಮಲಿಂಗವನ್ನೇ ತಂದು ನಿನಗೊಪ್ಪಿಸುವೆ ಎಂದು ಭರವಸೆ ಇತ್ತು ಹೊರಟ. ಘೋರತಮ ತಪಸ್ಸಿನಿಂದ ಶಿವನನ್ನೊಲಿಸಿ ಅವನ ಆತ್ಮಲಿಂಗವನ್ನು ಪಡೆದು ಕೈಲಾಸದಿಂದ ಭೂತಳಕ್ಕೆ ಇಳಿದ. ಪರಶಿವನು ತನ್ನಾತ್ಮಲಿಂಗವನನ್ನೀವ ವೇಳೆ ಎಚ್ಚರಿಸಿದ್ದ ಈ ಲಿಂಗ ಭೂಸ್ಪರ್ಶವಾದರೆ ಅದು ಅಲ್ಲಿಯೇ ನೆಲೆ ನಿಲ್ಲುವುದು ಎಂದು. ಆ ಎಚ್ಚರವನ್ನು ಸ್ವೀಕರಿಸಿದ ರಾವಣ ಲಂಕೆಯತ್ತ ಧಾವಿಸಿದ. ಆಗ....

ರಾವಣ : ಭಲೆ ಭಲೇ ನನಗಿಂತ ಭಕ್ತರಾರೊ
ಶಿವ ಶಿವಾ ನನಗಿಂತ ಶಿವಭಕ್ತರಾರೋ ॥
ಶಿವನಾತ್ಮಲಿಂಗವನು ಅಂಗೈಲಿ ಹಿಡಿದಿರುವೆ
ಕೈಲಾಸವೇ ಭುವಿಗೆ ಬಂದುದಾಯ್ತು
ಮೃಣ್ಮಯದ ಭೂಮಿಯನು ಚಿನ್ಮಯಂಗೊಳಿಸಿದೆನೊ
ಈ ಭೂಮಿ ಕೈಲಾಸವಾಗಿಸಿಹೆನೋ ।
ತಾಯಿಗಿಂತಲು ಮಿಗಿಲು ದೇವರೇ ಇಲ್ಲ
ಒಂದು ಜನ್ಮದ ಋಣವ ಹತ್ತು ಜನ್ಮದಿ ನಾವು ತೀರಿಸಲು ಸಲ್ಲ
ಅವಳ ಹರ್ಷವೆ ಶುಭದ ಆಶೀರ್ವಾದ ನಮಗೆಲ್ಲ
ಆತ್ಮಲಿಂಗವನಿತ್ತು ಆನಂದಪಡಿಸುವೆನು ಆದೆ ನನಗೆ ಬೆಲ್ಲ !
(ನರ್ತಿಸುತ್ತಾ ನಿರ್ಗಮಿಸುವನು).

**ಹಿನ್ನೆಲೆಯ ಧ್ವನಿ :**

ಆತ್ಮಲಿಂಗವೇ ಹೋದಮೇಲೆ ಕೈಲಾಸವೆಲ್ಲಿ ! ದೇವತೆಗಳು ಗಜಾನನನನ್ನು ಬೇಡಿಕೊಂಡರು, ವಟು ವೇಷಧಾರಿಯಾಗಿ ಭೂಮಿಗಿಳಿದ ಗಣಪ.

ಆ ವೇಳೆಗೆ ರಾವಣ ಗೋಕರ್ಣದ ಕಡಲ ತಡಿಯಲ್ಲಿ ನಡೆಯುತ್ತಿದ್ದ. ಸಮುದ್ರ ಮೆಚ್ಚಾಯಿತು. ಸ್ನಾನಕ್ಕೆ ಮನವಾಯಿತು. ಅಷ್ಟರಲ್ಲಿ ದನಗಾಹಿ ಗಣಪ ಕಣ್ಣಿಗೆ ಬಿದ್ದ.

ಗಣಪ : ಗಂಗೆಗೌರಿ ತುಂಗಭದ್ರೆ ಎಲ್ಲ ಬನ್ನಿರೇ
ಕಾಡಲ್ಲೆಲ್ಲ ಮೇವು ಮೇದು ನೀರು ಕುಡಿಯಿರ್ರೇ
ಕುವ್ವೇ ಬಾ ಬಾ
ಅಂಬಾ ಬಾ ಬಾ
ಹೊಂಗೆ ನೆರಳು ಗಂಗೆ ನೀರು ತಂಪಿನ್ತಾಣ
ಕುಂತು ನಿಂತು ಮಾತನಾಡಿ ಕಾಲಕಳೆಯೋಣ
ಗಂಗೆ ಗೌರಿ ತುಂಗಭದ್ರೆ ಎಲ್ಲ ಬನ್ನಿರೇ
ಕಾಡಲ್ಲೆಲ್ಲ ಮೇವು ಮೇದು ನೀರು ಕುಡಿಯಿರ್ರೇ
ಕುವ್ವೇ ಬಾ ಬಾ !
ಅಂಬಾ ಬಾ ಬಾ ! (ಪೇಜ್ ನಂ. 46 ಮತ್ತು 47 ಟೈಪ್ ಆಗಿಲ್ಲ)

ದೃಶ್ಯ : 3

ನಟಿ : ಅಬ್ಬಬ್ಬ ! ಗಣಪ್ಪನ ಕತೆ ಬಹಳ ಐತೆ
ಹೇಳ್ತೀಯೇನೋ ನಟ ಇದನ್ ಮತ್ತೆ ಮತ್ತೆ ?

ನಟ : ಕೇಳು ನಟೀ ಕೇಳೆ ಸಖೀ
ಕೇಳು ಗಣಪ ಲೀಲೆ
ಜಾಣ್ಮೆಯಲ್ಲಿ ಇದಿರೆ ಇಲ್ಲ
ಸೈರಣೆಯಲ್ಲಿ ಸಮರೆ ಇಲ್ಲ
ಮಾತಾಪಿತೃ ಭಕ್ತಿಯಲ್ಲಿ ಅದ್ವಿತೀಯನಹನು
ಗಜಾನನನು ಭಾವದಲ್ಲಿ ದೇವನಾಗಿ ಮೆರೆವನು !
ಅಂದು . . . . . .

(ಕೈಲಾಸದರ್ಶನ ; ಶಿವಶಿವೆಯರ ಉಪಸ್ಥಿತಿ. ಎಡಬಲಗಳಲ್ಲಿ ಮುಗಿದು ಮೇಲೆತ್ತಿದ ಕೈಯವರಾಗಿ ಗಣೇಶ ಮತ್ತು ಷಣ್ಮುಖರು. ಇಡೀ ರಂಗ ಗಂಭೀರ ಘೋಷಣೆ ಮಾಡುತ್ತದೆ)

ಓಂ ನಮಃ ಶಿವಾಯ
ಓಂ ನಮಃ ಶಿವಾಯ
ಓಂ ನಮಃ ಶಿವಾಯ
ಶಿವಾಯ ಭದ್ರಾಯ ಶುಭ ಶಂಕರಾಯ
ಗೌರೀ ಪ್ರಿಯಾಯ ವೃಷಭೇಶ್ವರ ವಾಹನಾಯ
ಗಂಗಾಧರಾಯ ರಜನೀಶ ಕಲಾಧರಾಯ
ಗೀತ ಪ್ರಿಯಾಯ ಕಮಲಾಸನ ಪೂಜಿತಾಯ
ಪುಣ್ಯಾಯ ಪುಣ್ಯ ಚರಿತಾಯ
ಓಂ ನಮಃ ಶಿವಾಯ !

(ಭಕ್ತಿ ಪೂರ್ಣ ಧ್ಯಾನಾನಂತರ ಇಬ್ಬರೂ ಜಗನ್ಮಾತಾಪಿತರಿಗೆ ದೀರ್ಘದಂಡ ನಮಸ್ಕಾರ ಮಾಡುವರು. ಪಾರ್ವತಿ ಇಬ್ಬರನ್ನೂ ಹಿಡಿದೆತ್ತಿ ಮುದ್ದಾಡಿ ಶಿವನೆಡೆಗೆ ಕರೆದೊಯ್ಯುವಳು.)

ಪಾರ್ವತಿ : ಬನ್ನಿ ಬನ್ನಿ ಮಕ್ಕಳೆ
ಚೊಕ್ಕ ಚಿನ್ನದೊಕ್ಕಲೆ
ಅಕ್ಕರೆ ಆನಂದ ತಂದ
ಸಕ್ಕರೆ ಸಿಹಿ ಸವಿಗಳೇ ॥
ಬಾ ಗಣಪ, ಬಾ ಷಣ್ಮುಖ

ಷಣ್ಮುಖ : ಅಮ್ಮಾ, ನಾವಿಬ್ಬರೂ ಪಂಥ ಹೂಡಿಹೆವಮ್ಮ. ಕೇಳು–
ಲೋಕಾಲೋಕಂಗಳನೆಲ್ಲ ಸೌರವ್ಯೂಹವನ್ನೆಲ್ಲೆಲ್ಲ
ಜ್ಯೋತಿರ್ವಲಯದ ಆಚೆಗೆ ಇರುವಾ
ಸಮಸ್ತ ತಾರಾ ನೀಹಾರಿಕೆಗಳು
ದ್ಯುಲೋಕ ದ್ಯಾವಾ ಪೃಥವಿಗಳು
ಸುತ್ತಿ ಸುತ್ತಿ ಕ್ಷಣಮಾತ್ರದಲಿ
ಮತ್ತೆ ಇದೇ ಈ ನೆಲೆಯಲ್ಲಿ
ಯಾರು ಮೊದಲು ಗುರಿ ಸೇರುವರೋ
ಅವರೇ ಪಂಥವ ಗೆದ್ದವರು
ಅವರೇ ವಿಜಯಕೆ ಭಾಜನರು ॥

ಗಣೇಶ : ಸಕಲಕು ಮಾತಾ ಪಿತರಾಗಿರುವ
ಲೀಲಾ ಜಗಕತಿ ಕಾರಣರಿರುವ
ಈ ಶಿವ ಶಿವೆಯರ ಸಾನ್ನಿಧ್ಯದಲಿ
ನಿಮ್ಮಯ ಚಿನ್ಮಯ ಪದತಲದಲ್ಲಿ
ಯಾರು ಮೊದಲು ಬಳಿ ಸಾರುವರೋ
ಅವರೇ ಪಂಥವ ಗೆದ್ದವರು
ಅವರೇ ವಿಜಯಕೆ ಭಾಜನರು ॥

ಇಬ್ಬರೂ : ಜಯವಾಗಲಿ ಎಂದು ಹರಸಿರಿ ನೀವು
ವಿಜಯವೆಂದು ಸೊಲ್ಲಿಸಿರೀ ನೀವು ॥

ಶಿವ – ಪಾರ್ವತಿ :
ಬನ್ನಿ ಕಂದಮ್ಮಗಳೆ ಹೋಗಿ ಬನ್ನಿ
ಶುಭಮಕ್ಕೆ ಜಯಮಕ್ಕೆ ಹೋಗಿ ಬನ್ನಿ ॥
ಇಳೆಯೊಳಗೆ ಕೊಳೆ ತೊಳೆದು ಬೆಳೆ ಹರಿಸಿ ಬನ್ನಿ
ಅರಿವು ನಗೆ ಮೊಳೆ ಮೊಳೆದು ಕಳೆ ತುಂಬಿ ಬನ್ನಿ ॥
ಮಂಗಳ ಮಹೋದಯದ ಹೊಸ ಬೆಳಕು ತನ್ನಿ
ತಿಂಗಳಿನ ತಿಳಿನಗೆಯ ತಿಳಿವುಗಳ ತನ್ನಿ ॥

(ಷಣ್ಮುಖನು ಶೀಘ್ರಗತಿಯಲ್ಲಿ ಓಡುವನು. ಗಣಪನು ಅಲ್ಲಿಯೇ ಭಕ್ತಿ ಭಾವುಕನಾಗಿ ನಿಂತು ಹಾಡಿ ನರ್ತಿಸುವನು, ಶಿವ ಶಿವೆಯರು ಯೋಗ ನಿದ್ರಾಮುದ್ರಿತರಾಗುವರು).

ನಮೋ ನಮೋ ಶ್ರೀ ಗಂಗಾಧರನೆ
ಗೌರೀ ಮನೋವಿಹಾರಿ ॥
ಗಂಗಾಸಲಿಲ ತರಂಗಾಚ್ಛಾದಿತ
ಬಳಸಿ ಬ್ರಹ್ಮಚಾರಿ ॥
ಯೋಗ ಸಮಾಧಿಯ ಯೋಗೀಶ್ವರನೆ
ಆತ್ಮರತನೆ ಅಧ್ಯಾತ್ಮ ಋಷಿ !
ಲೀಲೆಯ ಮಿಗೆ ನೀ ಉಮಾಪತೀ
ಲೀಲೆ ತಪ್ಪೆ ಸ್ವಾಯಂಭು ಯತೀ ॥
ತಂದೆ ತಾಯರಿಗೆ ಮಿಗಿಲಹರಿಲ್ಲ
ವಿಶ್ವವ ಧರಿಸಿಹ ಯಶವೆ
ವಿಶ್ವದೇಹಿಗಳು ವಿಶ್ವಾತ್ಮರುಗಳು
ಅವರ ಪ್ರದಕ್ಷಿಣೆಗೊಳುವೆ
ಅವರ ಪ್ರದಕ್ಷಿಣೆಗೊಳುವೆ
ಅವರ ಪ್ರದಕ್ಷಿಣೆಗೊಳುವೆ !

(ಮೂರುಬಾರಿ ಶಿವಶಿವೆಯರನ್ನು ಪ್ರದಕ್ಷಿಣೆ ಬರುವನು, ಅಷ್ಟರಲ್ಲಿ ಷಣ್ಮುಖ ಆಗಮಿಸಿ)

ಷಣ್ಮುಖ : ಅಹಹಾ ಅಹಹಾ ಅಹ್ಹಾ ಆಹ್ಹಾ !
ಒಹೊ ಹೋ ಒಹೊಹೋ ಒಹ್ಹೋ ಒಹ್ಹೋ !
ಗೆಲವಿನ ನಲವಿನ ಪಯಣವಿಹಾರಿ
ನಾನೇ ವಿಶ್ವ ಸಂಚಾರಿ
ಮುಗಿಲಿನ ಹೊಗೆಯಲಿ ನಗೆಯನು ಬೀರಿ
ನಿಂದೆನಿದೋ ಗುರಿಸೇರಿ
ಪರ್ಯಟನದ ಈ ಪಂಥದಲಿ
ಸ್ಪರ್ಧೆಯ ಗೆದ್ದವ ನಾನು
ಬಂದೆನು ಬಂದೆನು ಬಂದೇ ಬಂದೆನು
ಒಂದೇ ನಿಟ್ಟಿನ ಓಟದಲಿ !
ಕಣ್ಣುಮುಚ್ಚಿ ತೆರೆವಷ್ಟರಲಿ
ಕ್ರಮಿಸಿದೆನೆಲ್ಲಾ ಲೋಕ
ಅಣ್ಣನಿಗೂ ಮುಂ ಗಮಿಸಿದೆನು
ಗಾಳಿಯಲಿ ನಾ ಬೇಗ ॥
ಅಣ್ಣಾ, ಗಣಪ್ಪಾ
ನಾನು ಗೆದ್ದೆ ನೀನು ಸೋತೆ
ಜಾಣ ನಾನು ತಿಳಿಯಿತೇ
ಸಾಹಸಿ ನಾನು ತಿಳಿಯಿತೇ !

ಗಣೇಶ : ಗರುವ ಬೇಡ, ಓ ಕುಮಾರ
ಗೆಲುವು ನಿನಗೆ ದಕ್ಕದೋ ॥
ಲೋಕ ಲೋಕಗಳನು ತಮ್ಮ
ಗರ್ಭದಲ್ಲಿ ತಳೆದಿರುವರು
ಈ ಮಾತಾ ಪಿತರ ನಾನು
ಬಳಸಿ ಬಂದು ನಿಂದೆನೋ ?
ನನ್ನ ನಿಲವೆ ಜಾಣ್ಮೆ ಗೆಲವು
ನಿನ್ನದಲ್ಲವೋ ॥
ನಿನ್ನದಹುದು ವ್ಯರ್ಥ ಪಯಣ
ಬರಿದೆ ಬಾಹ್ಯ ಸಾಧನ !
ತತ್ತ್ವ ತುಂಗ ಶೃಂಗದಲ್ಲಿ
ಜ್ಞಾನ ಭಾವದಂಜನ ॥

ಷಣ್ಮುಖ : ಹ್ಹಾ ! ಹೌದೇನು ? ಅಮ್ಮ.....ಅಪ್ಪಾಜೀ (ಬೀಳುವನು)

ಪಾರ್ವತಿ : ಏಳು ಏಳೇಳು ಕಂದ
ಏಳು ಸ್ವಾಮಿ ಕುವರನೆ
ನಿನ್ನ ಶ್ರಮವು ವ್ಯರ್ಥವಲ್ಲ
ಲೋಕಕೆ ಕಲ್ಯಾಣವು ॥

ಶಿವ : ಗಣಪ ಷಣ್ಮುಖರಿವರು
ತತ್ತ್ವದ್ವಯರು :
ಗಣಪ ಜ್ಞಾನಕೆ ಪಡಿಯು
ಷಣ್ಮುಖನು ಕ್ರಿಯೆಗೆ
ಕ್ರಿಯೆ ಜ್ಞಾನಗಳು ಕೊಡೆ
ಭಾವಕ್ಕೆ ಬೆಳಕು !

ಪಾರ್ವತಿ : ಜಡವು ಚೇತನವೆಂಬ ಎರಡು ತತ್ತ್ವಗಳುಂಟು
ಸ್ಥಾವರಾ ಜಂಗಮಗಳಹರು ಅವರು

ಒಂದು ಕ್ರಿಯೆ, ಜ್ಞಾನವದು ಮತ್ತೊಂದು
ಎರಡು ಸೇರಿದರೇನೇ ಕಾರ್ಯಸಿದ್ಧಿ !
ಕಂದಮ್ಮಗಳೆ ಕೇಳಿ –
ಆರಳಿದು ಮೂರಾಗಿ ಮೂರಳಿದು ಎರಡಾಗಿ
ಎರಡಳಿದು ಒಂದಾಗಿ ನಿಲ್ಲಬೇಕು
ಇದುವೆ ತತ್ತ್ವ ರಹಸ್ಯ ಇದೆ ಸೃಷ್ಟಿ ಮರ್ಮ
ಋಷಿಕವಿಯ ದರ್ಶನವು ಬೆಳಗಬೇಕು.

**ನರ್ತಕಿಯರೂ ಸೇರಿ ಗಣೇಶ – ಷಣ್ಮುಖರು :**

ಜಯ ನಮಃ ಪಾರ್ವತೀ ಪತೇ ಹರ ಹರ ಮಹಾದೇವಾ ।

ಹಾಡು : ಜಯ ಜಯ ಶಂಕರ ಜಯ ಅಭಯಂಕರ
ಜಯ ಜಯ ಜಯಹೇ ಸರ್ವೇಶ್ವರಾ
ಜಯ ಶಿತಿಕಂಠನೆ ಜಯ ಯತಿ ಶ್ರೇಷ್ಠನೆ
ಜಯ ಜಯ ಜಹಯೇ ಶಶಿಶೇಖರಾ ॥
ಜಯ ಜಯ ಶಂಕರ
ಜಯ ಶಿವ ಶಂಕರ
ಜೈ ಜೈ ಜೈ.....

**ದೃಶ್ಯ 4**

ನಟ : ಎಂಥ ಜ್ಞಾನಿ ನಮ್ಮ ಗಣಪ ಈಗ ತಿಳಿಯಿತೇ
ಏನೆ ಸಖೀ ಮಾತೇ ಇಲ್ಲ ಬಾಯಿ ಬತ್ತಿ ಹೋಯಿತೇ ?

ನಟಿ : ಎನು ಮಹಿಮೆಯೊ ಸೂತ್ರಧಾರ
ಎಂಥಾ ಮಹಿಮೆಯೊ ಕರ್ಣಪೂರ
ಕೇಳಿ ನಲಿದೆನೊ ಭಾಸ್ಕರ
ಹೇಳು ನಡೆದುದ ವಿಸ್ತರ

ನಟ : ಜೃಂಭಾದಿ ದುಂಧುರ ಧೂಮ್ರಾಕ್ಷ ಮೂಷಿಕ
ಭ್ರಮರೀ ಪತಂಗ ಅಶ್ವಾಸುರ
ಕಮಲಾಸುರ ವ್ಯಾಘ್ರ ಶಲಭಾಸುರ
ಕೂಟಾಸುರ ಮತ್ತೆ ಉಷ್ಟ್ರಾಸುರ
ಛಾಯಸುರ ಕಮಠ ತಲ್ಪಾಸುರ
ಇಂಥರೆನಿತೋ ನೂರಾರು ದೈತ್ಯರನು ಮುರಿದಿಟ್ಟ
ದಿಟ್ಟ ಧೀರನು ಸ್ವಾಮಿ ನಮ್ಮೀ ಗಣೇಶ್ವರಾ !

**– ದೃಶ್ಯ ಬದಲಾವಣೆ –**

(ಗಣೇಶ ಶಿವಲಿಂಗದೆದುರು ಕುಳಿತು ಪೂಜಿಸುತ್ತಿದ್ದಾನೆ. ಅಲ್ಲಿಗೆ ವಯ್ಯಾರದಿಂದ ಆಗಮಿಸುತ್ತಾಳೆ ಜೃಂಬಾ ಎಂಬ ರಾಕ್ಷಸಿ....)

ಜೃಂಬೆ : (ಸುಂದರ ವೇಷದಲ್ಲಿ ಬಂದು)
ಶೃಂಗಾರ ಸುಕುಮಾರ ಸುವಿಶಾಲನೆ
ಬಂಗಾರ ಬಹುಗುಣದ ಸಾಕಾರನೆ ॥
ಅಂಗಾಂಗದೊಳಗೆಲ್ಲ ನೂತನ ಸ್ಪಂದನ
ಭಂಗಗೊಳಿಸಿದನೊ ಆ ಕಾಮ !
ಮನದೊಳಗೆ ಏನೇನೊ ಎಂಥದೋ ಪುಲಕ
ಶಾಂತವಾಗಿಸು ಬಾರೊ ಓ ವಿನಾಯಕ ॥ 1 ॥
ಕಾಮಕಲಾಧರ ಶ್ರೀಮಂತನೆ
ಕಾಮಿನಿಯರ ಮನವ ಕೆಣಕುವವನೆ
ಮೋಹಿನಿ ಬಂದೆನೊ ಮೋಹನಾಕಾರ

ಚುಂಬಿಸಿ ಸುರತದ ಸುಖದೋರೋ
(ಕಾಮಕ್ರೀಡೆಗೆ ಗಣಪನನ್ನು ಹಿಡಿದು ಎಳೆದಾಡುವಳು)

ಗಣೇಶ : (ಕಿಡಿ ಕಿಡಿಯಾಗಿ)
ಫಡಫಡಾ ಹುಡಿಗೈವೆ ಉದ್ದಂಡೆ ಭಂಡೆ
ಮೈ ಖಂಡ ಶತಖಂಡ ಮಾಡುವೆನು ಚಂಡೆ ॥

(ಬೀಜಿಮ್‌ನಲ್ಲಿ ಇಬ್ಬರದೂ ನರ್ತನ. ಅನಂತರ ಗಣೇಶ ಅವಳನ್ನು ಒದೆಯುವನು ಕೂಡಲೇ ಆ ಸುಂದರಾಂಗಿ ರಾಕ್ಷಸಿ ಆಗುವಳು)

–ದ್ವಂದ್ವಯುದ್ಧ ಆರಂಭ –

(ಧಿಮಿ ತಿಕಿಟ ಧಿಮಿತಿಕಿಟ ಧಿಗ್ಗ ಧಿಮಿತಿಕಿಟ ಈ ಧಾಟಿಯಲ್ಲಿ ವಾದ್ಯಗಳ ಮೊಳಗು ಭೀಕರ ಕಾಳಗ ಪರಿಣಾಮ ರಕ್ಕಸಿಯ ಮರಣ ನರ್ತಕಿಯರ ಆಗಮನ)

**ನರ್ತಕಿಯರು :**

ಜಯಗಣೇಶ ಜಯಗಣೇಶ ಜಯಗಣೇಶನೆ
ಜಯವು ನಿನಗೆ ವಿಘ್ನೇಶನೆ ಸರ್ವಶಕ್ತನೆ ॥
ಜಯ ಗಣೇಶಾ
ಜಯ ಗಣೇಶಾ

ನಟ : ನಟಿ ನಟಿ ಬಾರೆ ನಾಟ್ಯವನಾಡೆ
ಪಟುತರ ಚಾತುರ್ಯ ನೀ ತೋರೆ ॥
ಆನಂದಂ ಮಹದಾನಂದಂ
ಆನಂದಂ ಬ್ರಹ್ಮಾನಂದಂ
ಆನಂದದಾಗರ ಜಗವೆಲ್ಲಾ ॥

ನಟಿ : ನಟ ನಟಾ ಓ ನಟಾ
ಅಂಥದೇನೋ ಸಡಗರ
ನಿನ್ನ ನಟನೆ ಮುಜಗರ ॥
ಇರಲಿ ನಟ ತಿಳಿಯ ಹೇಳೊ ಕಥೆಯ ವೈಖರ
ಗಣಪನೇನು ಗೈದ ಮುಂದೆ ಹೇಳು ಸುಂದರ ॥

ನಟ : ಏನು ಗೈ ? ಮದುವೆಯಾದ, ಅದರ ಹಿಂದೆ ಮಕ್ಕಳು !
ಇದೇ ತಾನೆ ಸುಂದರಿ ಸಂಸಾರ ಚಕ್ರ ತಿರುಗಲು !

ನಟಿ : ಆಂದರೆ ಗಣೇಶನಿಗೆ ಮದುವೆಯೇ ?
ಗಾದೆ ಸತ್ಯವಾಯಿತು !

ನಟ : ಹಾಗಲ್ಲ ಕೇಳು : ಮದುವೆಯಾಯಿತು
ಒಬ್ಬರಲ್ಲ ಇಬ್ಬರು
ಪರಬ್ರಹ್ಮ ಕುವರಿಯರು
ಸಿದ್ಧಿ ಮತ್ತು ಬುದ್ಧಿ
ತಂದೆ ಶಿವಗೆ ಇದ್ದಹಾಗೆ
ಗಂಗೆ ಗೌರಿ ಜತೆಗೆ ಹಾಗೆ
ಗಣಪ ಸ್ವಾಮಿಗುಂಟು ಕೇಳು
ಸಿದ್ಧಿ ಮತ್ತು ಬುದ್ಧಿ – ಅವರು
ಲೋಕದಾ ಪ್ರಸಿದ್ಧಿ !
ಮತ್ತೆ ಮಕ್ಕಳಿಬ್ಬರು :
ಕ್ಷೇಮ ಮತ್ತು ಲಾಭ
ಗಣಪನನ್ನು ಧೇನಿಸಿದರೆ
ಕ್ಷೇಮ ಲಾಭ ಪ್ರಾಪ್ತಿ

ಸರ್ವರಿಗೂ ಶುಭವಹುದು
ಮಹಾಗಣಪ ಸ್ವಸ್ತಿ !

**ದೃಶ್ಯ ಬದಲಾವಣೆ**

(ಗಣಪನ ಉಪಸ್ಥಿತಿ. ಅವನ ಎಡಬಲದಲ್ಲಿ ಸಿದ್ಧಿ ಮತ್ತು ಬುದ್ಧಿ ಪತ್ನಿಯರು ಅವರ ತೊಡೆಗಳ ಮೇಲೆ ಕ್ಷೇಮ ಮತ್ತು ಲಾಭ ಎಂಬಿಬ್ಬರು ಮಕ್ಕಳು ಮಂಗಳ ವಾದ್ಯ, ಪುಷ್ಪವೃಷ್ಟಿ ಇತ್ಯಾದಿಗಳ ನಡುವೆ ಜಯಘೋಷ. ಅತ್ಯಂತ ವೈಭವದ ನೋಟ ಇದಾಗಿರಬೇಕು)

(ರಂಗವೆಲ್ಲಾ ನರ್ತಿಸುವುದು)

ಮಂಗಲ

ಜಯ ನಿನಗೆ ಬೆನಕನೆ
ಜಯ ಕನಕ ದೇಹಿಯೆ
ಜಯ ಸಾಂಬಶಿವ ಪುತ್ರ
ಜಯ ಗೌರಿ ಕುವರಾ ॥

ಜಯ ಲಂಬಕರ್ಣನೇ
ಜಯ ಲಂಬ ಉದರನೆ
ಜಯ ಕಂಬುಕಂಧರ
ಜಯ ಚಂದನಾರ್ಚಿತನೆ ॥
ಜಯ ಏಕದಂತ
ಜಯ ಮೂಷಿಕಾಸನ
ಜಯ ನಿನಗೆ ವಿಘ್ನೇಶ
ಜಯವಹೊ ವಿನಾಯಕ ॥

ಜಯ ಜಯ ಗಣೇಶ
ಜಯ ಗುಣಗಣೇಶ
ಜಯ ಜಯ ಗಣೇಶ
ಜಯ ಗುಣ ಗಣೇಶ
ಜೈ ಜೈ ಜೈ
ಜೈ ಜೈ ಜೈ

–ಶುಭಂ–

# ಸಿಂಧುರಾಸುರ

## ಪಾತ್ರಗಳು

ಗಣೇಶ
ಸಿಂಧುರಾಸುರ
ವಾಣಿ
ಮೇನಕೆ
ಬ್ರಹ್ಮ
ಋಷಿಗಳು
ದೇವತೆಗಳು
ರಾಕ್ಷಸರು
ಇತ್ಯಾದಿ

**"ಓಂ ಗಣಾಧಿಪತಯೇ ನಮಃ"**

**ಬಂಧುಗಳೇ,**

ಸಾಮಾನ್ಯವಾಗಿ ಮಾನವ ದ್ವಂದ್ವ ಗುಣಗಳ ಸುಂದರ ಸಮ್ಮಿಶ್ರಣ. ಅವನಲ್ಲಿ ದೇವತ್ವವೂ ಇದೆ ದೈತ್ಯತೆಯೂ ಇದೆ. ಆದರೆ ಅವನಲ್ಲಿನ ದೇವತ್ವ ಸದಾ ವೃದ್ಧಿಯಾಗಬೇಕು. ಅದಕ್ಕೆ ಮೂಲಬಿಂದು ಮಾನವತೆ ! ಆ ಮಾನವೀಯತೆಯ ಮೂಲಕ ದೇವತ್ವವನ್ನು ಬೆಳೆಸಿಕೊಳ್ಳಬೇಕು. ಅದನ್ನುಳಿದು ದೈತ್ಯತೆಗೆ ಧೂಪಹಾಕಿದರೆ ಅವನು ಸಾಕ್ಷಾತ್ ದೆವ್ವವೇ ಆಗಿಬಿಡುತ್ತಾನೆ. ಈ ತತ್ತದ ಪ್ರತಿಪಾದನೆಗೆ ನಿಂತ ನಿದರ್ಶನಗಲೋ ಎಂಬಂತೆ ನಮ್ಮ ಪ್ರಾಚೀನ ಪುರಾಣಗಳಿವೆ. ಪುರಾಣಗಳು ಮಾನವಾವತಾರ ಪೂರ್ವದ ಪ್ರತಿಮೆಗಳು ! ಅಂತಹ ಶ್ರೇಷ್ಠ ಸಂಸ್ಕೃತಿಯ ಪ್ರತ್ಯಕ್ಷ ಪ್ರದರ್ಶನ ಈ 'ಸಿಂಧುರಾಸುರ ವಧೆ!"

ಸಕಲ ವಿಘ್ನ ನಿವಾರಕನಾದ ವಿಘ್ನೇಶ್ವರನು ಸಿಂಧುರಾಸುರನನ್ನು ಸಂಹರಿಸಿ, ಲೋಕ ಕಲ್ಯಾಣಗೈದ ಪುಣ್ಯಕಥೆ ಈ ಸಿಂಧುರಾಸುರ ವಧೆ.

ಬನ್ನಿ, ಸಿಂಧುರಾಸುರನ ತಪಸ್ಸಿನ
ವೈಖರಿಯ ನೋಡ ಬನ್ನಿ......

**ನೋಟ :** 1

**ದಟ್ಟ ಅಡವಿ**

(ಸಿಂಧುರಾಸುರನು ಮುಗಿದಕ್ಕೈ ಮೇಲೆತ್ತಿದ ತೋಳಿನವನಾಗಿ ಒಂಟಿಕಾಲಲ್ಲಿ ನಿಂತು ಬ್ರಹ್ಮನನ್ನು ಕುರಿತು ತಪಸ್ಸು ಮಾಡುತ್ತಿರುತ್ತಾನೆ)

ಸಿಂಧು : ಓಂ ನಮೋ ಬ್ರಹ್ಮದೇವ
ಓಂ ನಮೋ ಬ್ರಹ್ಮದೇವ
ಓಂ ನಮೋ ಬ್ರಹ್ಮದೇವಾ॥
ನಮಸ್ತ್ರಿಮೂರ್ತಯೇ ತುಭ್ಯಂ
ಪ್ರಾಕ್‌ಸೃಷ್ಟೇಃ ಕೇವಲಾತ್ಮನೇ
ಗುಣತ್ರಯ ವಿಭಾಗಯ
ಪಶ್ಚಾತ್ ಭೇದಮುಪೇಯುಷೇ ॥
ಓಂ ನಮೋ ಬ್ರಹ್ಮದೇವ
ಓಂ ನಮೋ ಬ್ರಹ್ಮದೇವಾ
ಆತ್ಮಾನಮಾತ್ಮನಾ ವೇತ್ಸಿ
ಸೃಜಸ್ಯಾತ್ಮಾನಮಾತ್ಮನಾ
ಆತ್ಮಾನಾ ಕೃತಿನಾ ಚ ತ್ವಮಾತ್ಮನ್ಯೇವ
ಪ್ರಲೀಯಸೇ ॥
ಓಂ ನಮೋ ಬ್ರಹ್ಮದೇವಾ
ಓಂ ನಮೋ ಬ್ರಹ್ಮದೇವಾ
ಓಂ ನಮೋ ಬ್ರಹ್ಮದೇವಾ
ದ್ರವಃ ಸಂಘಾತಕಠಿಣ ।
ಸ್ಥೂಲಃ ಸೂಕ್ಷೋ ಲಘುರ್ಗುರು ಃ
ವ್ಯಕ್ತೋ ವ್ಯಕ್ತೇತರಶ್ಚಾಸಿ
ಪ್ರಾಕಾಮ್ಯಂ ತೇ ವಿಭೂತಿಷು ॥
ಓಂ ನಮೋ ಬ್ರಹ್ಮದೇವಾ
ಓಂ ನಮೋ ಬ್ರಹ್ಮದೇವಾ
ಓಂ ನಮೋ ಬ್ರಹ್ಮದೇವಾ sss॥

**ವಾಣಿ :** ದೇವಾನುದೇವತೆಗಳೇ, ಮನುಮಹಾಮುನಿಗಳೇ, ನಾಗಲೋಕದ ಸಕಲ ಭೋಗಿ ಬಂಧುಗಳೇ ನೋಡಿದಿರಾ, ಎಂತಹ ಘೋರತಮ ತಪಸ್ಸು ಆ ಸಿಂಧುರಾಸುರನದು. ಅತ್ಯದ್ಭುತ, ಅತ್ಯಪೂರ್ವ. ಅವನ ತಪಃ ಪ್ರಭಾವದ ತೀವ್ರತೆಗೆ ಭೂಮಿ ನಡುಗಿತು ! ಸಪ್ತ ಸಾಗರಗಳು ಕುದಿದೆದ್ದುವು ! ನಭೋ ಮಂಡಲದ ನಕ್ಷತ್ರಗಳು ಅಕ್ಷತೆಯ ಕಾಳುಗಳಾಗಿ ಪಳಪಳನೆ ಭೂಮಿಗುದುರಿದುವು ! ದೇವಲೋಕವೂ ತಲ್ಲಣಿಸಿತು ಇದನರಿತ ದೇವೇಂದ್ರ

ಕೂಡಲೇ ತನ್ನ ಆಸ್ಥಾನ ನರ್ತಕಿ, ನಾಟ್ಯ ಮಯೂರಿ, ಚೆಲುವಿನ ಚಿಲುಮೆ ಮೇನಕೆಯನ್ನು ಭೂಲೋಕಕ್ಕೆ ಕಳುಹಿಸುತ್ತಾನೆ ಆ ರಕ್ಕಸನ ತಪ್ಪಸ್ಸನ್ನು ಭಂಗಗೊಳಿಸಲೆಂದು.

**ಮೇನಕೆ :** ಸರ್ವಾಂಗ ಸುಕುಮಾರ ಮನಮೋಹನ
ಬೃಂದಾರಕ ವಂದ್ಯ ಅಭಿನಂದನಾ
ಸಿಂಧುರಾಸುರನೇ ಸೌಂದರ್ಯ ಸಾಗರವೆ ॥ ಪ ॥
ಸುಂದರ ಸುಸ್ವಪ್ನ ಮಂದ ಮಾರುತವೆ
ಆನಂದದೊಲವಿಂದ ಆಡುಬಾರೊ ನವಿಲೇ
ಚಂದ ಚಕ್ಕಂದಕೆ ಮೇನಕೆ ಬಂದಿರುವೆ ॥ 1 ॥
– ಬೀಜಿಮ್ ಬರಲಿ –

ನೀ ನಡೆವ ಹಾದಿಯಲಿ ಹೂವಾಗಿ ನಾ ಸುರಿವೆ
ನಡೆ ಮುಡಿಯ ಹಾಸಾಗಿ ನಾ ಮಲಗುವೆ
ನಿನ್ನಯಾ ನಡಿಗೆಗೇ ಮಿಡಿವುದೋ ನನ್ನೆದೆ
ಮೀಸಲೀ ಕುಸುಮವ ಮುಡಿ ಬಾರೊ ॥ 2 ॥

**ವಾಣಿ :** ಮೇನಕೆಯ ನೃತ್ಯ ಹೇಗಿದ್ದರೇನು ? ಅವಳ ಚೆಲುವು ಚೆಲ್ಲಾಟ ಸೂರೆಯಾದರೇನು ? ಸಿಂಧುರಾಸುರನ ತಪೋಮುದ್ರೆಯನ್ನು ವಿಚಲಿತಗೊಳಿಸಲಾಗಲಿಲ್ಲ. ಅವನ ತಪೋ ಮುದ್ರಿತ ನೇತ್ರದೆದುರು ಮೇನಕೆಯ ಹಾವ ಭಾವ ವಿನ್ಯಾಸಗಳೆಲ್ಲವೂ ವ್ಯರ್ಥವಾದುವು. ಬಂದ ದಾರಿಗೆ ಸುಂಕವಿಲ್ಲವೆಂದು ನಿರಾಶಳಾಗಿ ದೇವಲೋಕಕ್ಕೆ ತೆರಳಿದಳು. ಆದರೆ ಸಿಂಧುರಾಸುರನ ತಪಸ್ಸು ಅವ್ಯಾಹತವಾಗಿ ಸಾಗಿತು. ಅದರ ವರ್ಣನೆಗೆ. ಮಾತು ಸೋತು ಹೋಗುತ್ತವೆ. ಅದು ತನ್ನ ಪ್ರಕರ್ಷಾವಸ್ಥೆಯ ಪರಾಕಾಷ್ಠೆ ಮುಟ್ಟಿದಾಗ, ಬ್ರಹ್ಮದೇವನು ಬೆರಗಾಗಿ ಸಿಂಧುರಾಸುರನಿಗೆ ತನ್ನ ದಿವ್ಯ ದರ್ಶನವಿತ್ತು !

**ಬ್ರಹ್ಮ :** ಮಗು, ಸಿಂಧುರಾಸುರ, ಮಂದಾರ ಹೂವಿನಂತಿರುವ
ಈ ನಿನ್ನ ದೇಹವನ್ನು ತಪಸ್ಯೆಗೆ ಗುರಿಮಾಡಿ
ವೃಥಾ ಸವೆಸಬೇಡ, ಕೇಳು ಕಂದ......

**ಸಿಂಧು :** ನಮೋ ಬ್ರಹ್ಮದೇವಾ
ನಮೋ ಬ್ರಹ್ಮದೇವಾ
ಓಂ ನಮೋ ಬ್ರಹ್ಮದೇವ
(ತಪೋಮುದ್ರೆಯಲ್ಲೇ ನಿರತನಾಗಿರುತ್ತಾನೆ)
(ಕಣ್ತೆರೆದು ನೋಡಿ)

ಆಃಆ ! ಬ್ರಹ್ಮದೇವ, ಆದಿದೇವ ಮಹಾದೇವ !
ಜಗತ್ಪಿತನೆ, ಜಗದಾದಿ ಮೂಲವೆ !
ಇಷ್ಟು ವರ್ಷಗಳ ಮೇಲೆ, ನಿನ್ನ ಕಂದನ ಮೇಲೆ
ಕರುಣೆ ಬಂತೇ ತಂದೆ ?

ಬ್ರಹ್ಮ : ಯಾವುದಕ್ಕೂ ಕಾಲ ಕೂಡಿಬರಬೇಕು ಮಗನೆ !

ಸಿಂಧು : ಹಾಗಾದರೆ...ಇನ್ನೂ ಕಾಲಕೂಡಿ ಬಂದಿಲ್ಲವೆಂಬುದು
ನಿನ್ನ ಅಭಿಪ್ರಾಯವೆ ?

ಬ್ರಹ್ಮ : ಹಾಗೇನಿಲ್ಲ, ಕಾಲಕೂಡಿ ಬಂದದ್ದರಿಂದಲೇ ನಾನಿಲ್ಲಿಗೆ ಬಂದದ್ದು. ಸಿಂಧುರಾಸುರಾ, ನಾನು ಸರ್ವತಂತ್ರ ಸ್ವತಂತ್ರನಿದ್ದರೂ ಸ್ವೇಚ್ಛಾಚಾರಿಯಲ್ಲ ಸ್ವರ್ವಶಕ್ತನಿದ್ದರೂ ನಿಯತಿಯನ್ನು ಮೀರುವ ಹಕ್ಕು ನನಗಿಲ್ಲ. ನಾನೊರ್ವನೇ ಅಲ್ಲ. ನನ್ನಂತೆ ಎಲ್ಲರೂ, ಈ ವಿಶ್ವದ ಸಚರಾಚರಗಳೂ ಆ ನಿಯತಿಗೆ ಬದ್ಧರು ಸಿಂದೂರ !

ಸಿಂಧು : ಇರಬಹುದು, ಆದರೆ ನನಗೆ ನನ್ನವೇ ಆದ ಕೆಲವು ಬದ್ಧತೆಗಳಿವೆಯಲ್ಲಾ ಬ್ರಹ್ಮದೇವ !

ಬ್ರಹ್ಮ : ಯಾವುವು ಹೇಳು ? ಹೇಳುವ ಮೊದಲು ಈ ಉಗ್ರತಮ ತಪಸ್ಸನ್ನು ಸಾಕುಮಾಡು.

ಸಿಂಧು : ಆದಾಗದು ತಂದೆ, ನೀನು ಭರವಸೆ ಕೊಟ್ಟರೆ ಮಾತ್ರ ನನ್ನ ತಪಸ್ಸು ಶಾಂತವಾಗಬಲ್ಲದು.

ಬ್ರಹ್ಮ : ಏನದು ? ನಿನ್ನ ಇಷ್ಟಾರ್ಥವೇನು ಹೇಳು ?

ಸಿಂಧು : ಯಾರಿಂದಲೂ, ಯಾವುದರಿಂದಲೂ ನನಗೆ ಮರಣ ಪ್ರಾಪ್ತವಾಗದಂತೆ ವರವನ್ನು ನೀಡು !

ಬ್ರಹ್ಮ : ಅದಾಗದು !.....ಅಂತೆಯೇ ಅದು ಒಳಿತಲ್ಲ ಸಿಂಧುರ !

ನಾನು ಮೊದಲೇ ಹೇಳಿದಂತೆ ಅದು ನಿಯತಿಗೆ ಮೀರಿದ್ದು !

ಸಿಂಧು : ಅಂದರೆ ?

ಬ್ರಹ್ಮ : ಅಂದರೆ ಯಾವುದಕ್ಕೆ ಹುಟ್ಟು ಎಂಬುದಿದೆಯೋ ಅದಕ್ಕೆ ಸಾವು ಎಂಬುದು ಕಟ್ಟಿಟ್ಟ ಬುತ್ತಿ ! ಆದರಿಂದ ಪಾರಾಗಲು ಯಾರಿಗೂ ಸಾಧ್ಯವಿಲ್ಲ. ಕೇಳು ಅಸುರ ಕೇಸರಿ, ಹುಟ್ಟು ಆಕಸ್ಮಿಕ, ಮರಣ ಅನಿವಾರ್ಯ !

ಸಿಂಧು : ಅನಿವಾರ್ಯವೀರ್ಯನಾದ ನನಗೆ ಅನಿವಾರ್ಯತೆಯ ನಿರ್ಬಂಧವೇಕೆ ಪದ್ಮಸಂಭವಾ ! ನನ್ನ ಬೇಡಿಕೆ ನಿನಗೆ ಒಪ್ಪಿತವಲ್ಲದಿದ್ದರೆ, ಇದೋ ನಿನ್ನನ್ನೇ ಕುರಿತು ಮತ್ತೆ ತಪಸ್ಸನ್ನಾಚರಿಸುವೆ !

ಬ್ರಹ್ಮ : ಮತ್ತೆ ಆ ಪ್ರಯತ್ನ ಬೇಡ..ಕೇಳು ನಿನಗೆ ಯಾವ ವಸ್ತುಗಳಿಂದ, ಯಾವ ಪ್ರಾಣಿಗಳಿಂದ ಯಾವುದೇ ಆಯುಧ ವಿಶೇಷಗಳಿಂದ ಮರಣ ಪ್ರಾಪ್ತವಾಗಬಾರದು ಎಂದಿದೆ ? ಹೇಳು.

ಸಿಂಧು : ಸುರ, ನರ, ಉರಗ, ದೇವ, ದಾನವ, ಯಕ್ಷ, ಕಿನ್ನರ ಕಿಂಪುರುಷರಾದಿಯಾಗಿ ನಿಸರ್ಗದತ್ತವಾದ ಅಂದರೆ ಸ್ವಾಭಾವಿಕವಾಗಿ ಪ್ರಕೃತಿಯಲ್ಲಿ ಹೇಗೆ ಹುಟ್ಟಿ ಬೆಳೆದಿರುತ್ತವೆಯೋ ಹಾಗೆ ಇರುವಂಥ ಪಶುಪಕ್ಷಿ ಮೊದಲಾದ ಪ್ರಾಣಿಗಳಿಂದ....

ಬ್ರಹ್ಮ : ಅರ್ಥವಾಯಿತು....ಆ ಮೇಲೆ ?

ಸಿಂಧು : ಆ ಮೇಲೆ....ಸ್ಪಷ್ಟ ನಿರ್ದಿಷ್ಟ ಯಾವುದೇ ಆಯುಧದಿಂದ.....

ಬ್ರಹ್ಮ : ಮರಣವಾಗದಂತೆ ವರ....? ಅಲ್ಲವೆ ? ಚೆನ್ನಾಗಿದೆ. ಸಿಂಧುರಾಸುರ, 'ಯಾರಿಂದಲೂ ಯಾವುದರಿಂದಲೂ ಮರಣ ಪ್ರಾಪ್ತವಾಗದಂತೆ ವರ ಕೊಡು'– ಎಂದು ನೀನು ಮೊದಲು ಕೇಳಿದೆಯಲ್ಲ ಅದಕ್ಕೆ ಈ ಎರಡನೆಯ ಬೇಡಿಕೆ ವ್ಯಾಖ್ಯಾನ ಅಥವಾ ವಿವರಣೆ ಇದ್ದಂತಿದೆ. ಅಳಿಯ ಅಲ್ಲ ಮಗಳ ಗಂಡ !

ಹ ಹ್ಹ ಹ್ಹ ಹ್ಹಾ (ನಗುವನು)

ಸಿಂಧು : ಬ್ರಹ್ಮದೇವ, ನಿನಗೆ ನಗೆಯಾಗಿ ಕಾಣಬಹುದು !
ಆದರೆ ನನಗೆ ತುಂಬಾ ಗಂಭೀರವಾದ ವಿಷಯ ಮರೆಯದಿರು !

ಬ್ರಹ್ಮ : ಆಗಲಿ ಮಹರಾಯ ! ಮಾತು ಕೊಟ್ಟಮೇಲೆ ಅದರಂತೆ ನಡೆದುಕೊಳ್ಳುವುದು ಧರ್ಮ !

ಸಿಂಧು : ಇಷ್ಟಾರ್ಥ ನೆರವೇರುವಂತೆ ವರ ಬೇಡುವುದು ತಪೋಮಗ್ನನಾದ ಭಕ್ತನ ಧರ್ಮ !

ಬ್ರಹ್ಮ : ಸತ್ಯ, ಅದರೆ ಧರ್ಮಸೂಕ್ಷ್ಮವನರಿತ ನಿನಗೆ ಸೃಷ್ಟಿ ಸ್ಥಿತಿ ಲಯಗಳ ಅರ್ಥ ಬಿತ್ತರಿಸುವ ಅವಶ್ಯಕತೆ....

ಸಿಂಧು : ಇಲ್ಲ......ಇಲ್ಲ.....ಇಲ್ಲ....!

ಬ್ರಹ್ಮ : ಹಾಗಾದರೆ...!

ಸಿಂಧು : ಹಗಲಲ್ಲ–ಇರುಳಲ್ಲ, ಒಳಗಲ್ಲ –ಹೊರಗಲ್ಲ, ಲೋಹದಾಯುಧವಲ್ಲ – ಶಸ್ತ್ರಾಸ್ತ್ರ ಸಿಂಜಿನಿಯಲ್ಲ, ದೇವನಲ್ಲ, ದಾನವನಲ್ಲ, ಪ್ರಪಂಚದ ಪ್ರಾಣಿ ಯಾವುದರಿಂದಲೂ ಅಲ್ಲ.... ಅವುಗಳಿಂದ ನನಗೆ ಮರಣ ಸಂಭವ ಸಾಧ್ಯವೇ ಇಲ್ಲ ಅಂಥ ವರ ಕೊಡು ದೇವಾ !

ಬ್ರಹ್ಮ : ತಥಾಸ್ತು !
ಸಿಂಧುರಾಸುರ, ಬಿಟ್ಟ ಬಾಣ, ಕೊಟ್ಟ ಮಾತು ಎರಡೂ ಒಂದೇ ! ಅದನ್ನು ಹಿಂತಿರುಗಿ ಪಡೆಯಲಾಗುವುದಿಲ್ಲ. ಇದಕ್ಕೆ ತಪ್ಪಿ ನಡೆಯಬರುವುದಿಲ್ಲ ಅಂತೆಯೇ ಆಗಲಿ !

ಸಿಂಧು : ಭಲೇ ಬ್ರಹ್ಮದೇವ, ಈ ವಿಶ್ವದಲ್ಲಿ ಸತ್ಯವಂತನೆಂಬವನಿದ್ದರೆ, ಅವನು ನೀನೆ !

ಬ್ರಹ್ಮ : ಈ ವಿಶ್ವಜಗತ್ತಿನಲ್ಲಿ ಅಸ್ತ್ರಕ್ಕೆ ಪ್ರತ್ಯಸ್ತ್ರವೊಂದು ಇದ್ದೇ ಇರುತ್ತದೆ. ಒಂದು ಬುದ್ಧಿ ಚಾಪೆಯ ಕೆಳಗೆ ನುಸುಳಿದರೆ, ಮತ್ತೊಂದು ಚದುರಬಿಲ್ಲೆಯ ಕೆಳಗೆ ತೂರಿಕೊಳ್ಳುತ್ತೆ.
ಸೂಕ್ಷ್ಮಕ್ಕೆ ಸೂಕ್ಷವನ್ನು ನಿರ್ಮಿಸುವುದು ಜಗತ್ತಿನ ಜಾಯಮಾನ ! ಆದ್ದರಿಂದ ಏನಾಗಬೇಕೋ ಅದು ಆಗಿಯೇ ತೀರುತ್ತದೆ.

ಸಿಂಧು : ಹೌದು, ಏನಾಗಬೇಕೋ ಆದಾಗದಿರದು....

ಬ್ರಹ್ಮ : ಅದೇ ನಿಯತಿ, ಅದೇ ಋತ, ಅದೇ ವಿಧಿ...!

ಸಿಂಧು : ಬ್ರಹ್ಮನಾದ ನೀನು ಬರೆದ ಹಣೆಯ ಬರಹವು ಕೂಡ...?
(ಇಬ್ಬರೂ ನಗುವರು)

(ಬ್ರಹ್ಮ ಅಂತರ್ಧಾನಾಗುವನು ಸಿಂಧುರಾಸುರನು ಆರ್ಭಟಿಸುತ್ತ ಗದೆ ತಿರುಹುತ್ತಾ ಬಿರುಗಾಳಿಯಂತೆ ನಿರ್ಗಮಿಸುವನು)

## ಯಜ್ಞಶಾಲೆ

### ನೋಟ : 2

(ತರಂಗಿಣಿಯ ತೀರದ ಯಜ್ಞಶಾಲೆಯಲ್ಲಿ ಧಾತೃ, ಉಗ್ಗಾತ್ವ್ ಹೋತೃ ಅದ್ವರ್ಯು ಮೊದಲಾದವರ ಸಮಾವೇಶ, ಋತ್ವಿಜರಿಂದ ವೇದಘೋಷ ಪುಟಿಯುತ್ತಿರುವುದು)

(ಬಿರುಗಾಳಿ, ಗುಡುಗು, ಸಿಡಿಲು ಸಮೇತ ಸಿಂಧುರಾಸುರನ ಪ್ರವೇಶ)

ಸಿಂಧು : ಹ ಹ್ಹ ಹ್ಹ ಹ್ಹ ಹಾ !
ವೇದ ಜಡರೇ, ಮಾರುದ್ದದ ಗಡ್ಡಬಿಟ್ಟ
ಜಡ್ಡು ಜೋಗಿಗಳೇ,
ನಿಮ್ಮ ಹುಟ್ಟಳಿಸುವೆನು, ಕಾರ್ಯವನು ಕೆಡಿಸುವೆನು.
ಯಜ್ಞವೇದಿಕೆಯನ್ನು ಇಲ್ಲೆ ಗಿಜಿಗಿಜಿಮಾಡಿ
ತುಪ್ಪಕ್ಕೆ ಬದಲಾಗಿ ನೆತ್ತರನು ಸುರಿಯುವೆನು,
ದರ್ಭೆ ಸಮಿಧೆಗೆ ಬದಲು ಬೆರಳು ಮೂಳೆಗಳನ್ನು
ಯಜ್ಞಕುಂಡದಲೆಸೆವೆ, ದೇವ ದೇವತೆಗಳಿಗೆ
ಈಯವೀ ಹವಿಸನ್ನು ನಾನೆ ಭಕ್ಷಿಸುವೆ !
ನೋಡುತಿರಿ, ಜೋಗಿಗಳೆ, ಕುಳಿತಲ್ಲೆ ನೋಡುತಿರಿ,
ಖಂಡ ಖಂಡದ ಮಾಂಸ ದುಂಡೆಗಳ ಕಡಿಕಡಿದು
ಅಹುತಿಯನೀಯುವೆನು !
ನಿಮ್ಮ ಯಾಗದ ಬಲವೆ ದೇವತೆಗಳೆಲ್ಲ ಬಲ !
ಅದನು ಹುಟ್ಟಡಗಿಸುವೆ !
ಇದೊ ಬಂದೆ....ಇದೊ ಬಂದೆ !

ಋಷಿಗಳು : ಅಯ್ಯೋ ! ಅಯ್ಯಯ್ಯೋ ! ಯಜ್ಞಕ್ಕೆ ವಿಘ್ನ ಬಂತೆ !
ಸಕಲ ಸದ್ಭಾವನೆಗೆ ಬೆಂಕಿಕೊಟ್ಟಾಯ್ತೆ?.....
ಅಯ್ಯಾ, ದೈತ್ಯಕುಲ ಚಕ್ರವರ್ತಿ, ನಮ್ಮನು ಕಾಪಾಡು
ನಾವು ಶರಣಾಗತರು ನಮ್ಮನ್ನು ರಕ್ಷಿಸು !

ಸಿಂಧು : ಹೇಳಿದಂತೆ ಕೇಳುವಿರೊ...?

ಋಷಿಗಳು : ಆಗಲಿ, ಆಗಲಿ, ಹಾಕಿದ ಗೆರೆ ದಾಟುವುದಿಲ್ಲ !

ಸಿಂಧು : ಯಜ್ಞಗಳ ದೂರವಿಡಿ, ದೇವತೆಗಳೆಲ್ಲರನು
ಕಡಲಲ್ಲಿ ಅದ್ದಿಬಿಡಿ. ನಾನೆ ದೇವರು ನಿಮಗೆ...!
ನಾನೆ....ನಾನೆ. ಈ ಸಿಂಧುರಾಜನೇ
ನಿಮ್ಮ ಭಾಗದ ದೈವ; ನಿತ್ಯವೂ ಪೂಜಿಸಿರಿ.
ಶುಭವನ್ನು ಕೋರುತಿರಿ !

ಋಷಿಗಳು : ಆಗಬಹುದು....ಆಗಬಹುದು !

ಸಿಂಧು : ಹೂಂ.....ಆರಂಭವಾಗಲಿ....

ಋಷಿಗಳು : (ಆಶೀರ್ವಚನ ಮಂತ್ರ ಪಠಿಸುವರು)
ರಾಜಾಯ ರಾಜ ಪ್ರಸಹ್ಯ ಸಾಯನೇ ! ನಮೋ ವೈಶ್ರವಣಾಯ ಕೂರ್ಮಹೇ....

### ನೋಟ : 3

### ಋಷ್ಯಾಶ್ರಮ

(ಋಷಿಗಳು ದೇವತೆಗಳು ಬ್ರಹ್ಮನನ್ನು ಕುರಿತು ಪ್ರಾರ್ಥಿಸುತ್ತಿರುವರು)

ಶ್ಲೋಕ :

ಓಂ ನಮೋ ಭಗವತೇ ಬ್ರಹ್ಮದೇವಾಯ
ಹಿರಣ್ಯಗರ್ಭೋ ಪ್ರಕೃತಿ ಸ್ವರೂಪಾ
ಜಗದಾದಿರನಾದಿಸ್ತ್ವಂ ಜಗದೀಶೋ ನಿರೀಶ್ವರಃ
ಪರಾತ್ಪರ ತೇಜರೂಪಾಯ ಪರಬ್ರಹ್ಮ ನಮೋ ನಮಃ ॥

ಹಾಡು : ನಮೋ ಬ್ರಹ್ಮದೇವ ನಮೋ ದಿವ್ಯಭಾವ
ನಮೋ ಸತ್ಯತೇಜ ನಮೋ ಭಕ್ತ ಕಾವ ॥
ನಮೋ ವಿಶ್ವರೂಪ ನಮೋ ವಿಶ್ವದೇಹಿ
ನಮೋ ಸೃಷ್ಟಿ ಮೂಲ ನಮೋ ಅದಿನಾಥ ॥
ಪಿತೃ ಗಳಿಗೆ ಪಿತನೂ ನೀನೆ ದೇವರಿಗೆ ದೇವ ನೀನೆ
ಪರಕ್ಕೆ ಪರತತ್ತ್ವ ನೀನೇ ಸಾಕ್ಷಾತ್ ವಿಧಾತ ನೀನೆ ॥
ಹವ್ಯ ನೀನೆ ಹೋತೃ ನೀನೆ ಭೋಜ್ಯ ನೀನೆ ಭೋಕ್ತೃ ನೀನೆ ॥
ವೇದ್ಯ ನೀನೆ ವೇದಿ ನೀನೆ ಧ್ಯಾನ ನೀನೆ ಧ್ಯೇಯ ನೀನೆ ॥
ಕವಿಪಿತಾಮಹನೆ, ರಕ್ಷಿಸು, ರಕ್ಷಿಸು.

ಬ್ರಹ್ಮ : ಮನು ಮಹಾಂಧಾತರೆ, ಇಂದ್ರಾದಿದೇವತೆಗಳೇ
ನಿಮ್ಮ ಮೊರೆ ಕೇಳಿ ಬಂದಿರುವೆ
ತೊಂದರೆಗಳೇನೆಂದು ತಿಳಿಯ ಹೇಳುವಿರಾ ?

ಎಲ್ಲರೂ : ಓ ಹಿರಣ್ಯಗರ್ಭ
ಸಿಂಧುರಾಸುರನಿಂದ ನಮಗಿಲ್ಲ ಉಳಿಗಾಲ !
ನೀನಿತ್ತ ವರದಿಂದ ಆಗಿಹನು ಶೂಲ !

ಬ್ರಹ್ಮ : ಸೇನೆ ನುಗ್ಗಿದ ಮೇಲೆ ಕೋಟೆ ಬಾಗಿಲು ಮುಚ್ಚಿ ಫಲವೇನು ?
ಮಕ್ಕಳೇ
ಅಳಲದಿರಿ, ಬಳಲದಿರಿ, ನಾನಿತ್ತ ವರದಲ್ಲಿ
ಗುಟ್ಟೊಂದನಿಟ್ಟಹೆನು ಕೇಳಿ.
ಜೀವಲೋಕದಲಿರದ ವೈಚಿತ್ರ್ಯ ತಮ ಜೀವಿ
ಅವನ ಅಂತ್ಯದ ಹೇತು ಎಂದುಸುರಿ ಕಳುಹಿದೆನು.
ಅದರಿಂದೆ, ಸತ್ಯ ಗಣಪತಿ ಬಳಿಗೆ ನೀವೀಗ ನಡೆಯಿರಿ
ಅವನು ಮಾನವನಲ್ಲ, ಆನೆಯಾ ಅಲ್ಲ !
ಎರಡು ರೂಹೂ ಅಲ್ಲ ಯಾವುದೂ ತಾನಲ್ಲ !
ಅವನ ಕೋರೆಯ ಹಲ್ಲು ಲೋಹನಿರ್ಮಿತವಲ್ಲ !
ಅವನಿಂದ ಸಿಂಧುರನ ಸಂಹೃತಿಯು ಸಾಧ್ಯ !
ಅವನೆ ನಿಮಗೆಲ್ಲರಿಗು ಸಕಲ ಶುಭವೇದ್ಯ !
ಶುಭಮಕ್ಕೆ ಜಯಮಕ್ಕೆ ಹೋಗಿಬನ್ನಿ !

**ನೋಟ : 4**

**ದೇವಾಲಯ**

(ಎಲ್ಲರೂ ಗಣೇಶನನ್ನು ಸ್ತುತಿಸುತ್ತಿರುವರು)

ಶ್ಲೋಕ : ಓಂ ಗಣೇಶ್ವರೋ ಗಣಕ್ರೀಡೋ ಗಣನಾಥೋ ಗಣಾಧಿಪ ಃ
ಏಕದಂಷ್ಟ್ರೋ ವಕ್ರತುಂಡೋ ಗಜವಕ್ತ್ರೋ ಮಹೋದರ ಃ ॥ 1 ॥
ಲಂಬೋದರೋ ಧೂಮ್ರವರ್ಣೋ ವಿಕಟೋ ವಿಘ್ನನಾಯಕಃ
ಸುಮುಖೋ ಧುರ್ಮುಖೋ ಬುದ್ಧೋ ವಿಘ್ನರಾಜೋ
ಗಜಾನನ ಃ ॥ 2 ॥
ನಮೋ ನಮೋ ಸುರವರ ಪೂಜಿತಾಂಘ್ರಯೇ
ನಮೋ ನಮೋ ನಿರುಪಮ ಮಂಗಳಾತ್ಮನೇ
ನಮೋ ನಮೋ ವಿಪುಳ ಪದೈಕ ಸಿದ್ಧಯೇ
ನಮೋ ನಮಃ ಕರಿಕಲಭಾನನಾಯ ತೇ ॥

ವಂದೇ ಸಿದ್ಧಿಂ ವಿನಾಯಕಂ ಸುರನುತಂ ಗಣಾನಾಂ ಸತಿಂ
ವಂದೇ ಸ್ವಾಶ್ರಿತವತ್ಸಲಂ ಗಣಮುಖಂ ವಂದೇ ಗುರೂಣಾಂ
ಗುರುಂ

ವಂದೇ ವಿಘ್ನತಮೋನುದಂ ಸಿತರುಚಂ ವಂದೇ ಕಲಾನಾಂ ನಿಧಿಂ
ವಂದೇ ಸರ್ವಜ್ಞಂ ಶುಭಕರಂ ವಂದೇ ಕವೀನಾಂ ಕವಿಂ ॥

**ಹಾಡು :** **ವಿನಾಯಕ**

ಶ್ರೀ ಸಿದ್ಧಿ ಪ್ರದಾಯಕ ॥ ವಿನಾಯಕ ॥
ಶುದ್ಧಾಂತರಂಗನೆ ಸ್ಕಂದಾಗ್ರ ಜನ್ಯನೆ
ಬುದ್ಧಿ ಪ್ರಿಯನೆ ಓ ವಿಘ್ನ ನಿವಾರಕ ॥ ಅನು. ಪ ॥
ಗೌರಿ ಕುಮಾರನೆ ಗಾನವಿನೋದನೆ
ಗಂಗಾಧರ ಸುತ ನತಜನ ಪೂಜ್ಯನೆ
ಲಂಬೋದರನೇ ಬಿಂಬ ಪ್ರದೀಪನೆ
ಶಂಭುರ್ಲಂಬss ಕರ್ಣಾ ಕುಹರನೆ ॥ 1 ॥
ಈಶ ಸ್ವರೂಪಿಯೆ ಕ್ಲೇಶವ ನೀಗೋ
ಭಕ್ಷಣೆ ನಡೆದಿದೆ ಸಿಂಧು ರಾಸುರನಿಂದೆ
ವಿಶ್ವರೂಪನೇ ವಿಶ್ವೋತ್ತೀರ್ಣನೆ
ರಕ್ಷಿಸು ರಕ್ಷಿಸು ಮೂಷಕವಾಹನ ॥ 2 ॥
ನೀ ಬಿಟ್ಟರೆ ಗತಿ
ಬೇರಿಲ್ಲ ಗಣಪತಿ !
ಆರ್ತರಾಗಿ ನಾವ್
ಬೇಡುವೆವೂ ॥
ದುಷ್ಟ ಶಿಕ್ಷಕ
ಶಿಷ್ಟ ಪಾಲಕ
ಕಾವುದು ಕಾವುದು
ಕಾವುದು ದೇವಾ ॥

**ವಾಣಿ :** ಮನು ಮುನಿಗಳೇ ದೇವತೆಗಳೇ
ಚಿಂತಿಸಬೇಡಿ ಸಕಲ ವಿಘ್ನ ನಿವಾರಣೆ ಮಾಡಲಿದ್ದಾನೆ.
ನಿಮ್ಮೆಲ್ಲರ ವಿಘ್ನಗಳನ್ನು ನಿವಾರಣೆ ಮಾಡಲಿದ್ದಾನೆ.
ನಾಳೆಯೇ ಲೋಕಕಂಟಕನಾದ ಸಿಂಧುರಾಸುರನ ಸಂಹಾರ
ಶ್ರೀ ಸತ್ಯ ಗಣಪತಿಯಿಂದ ಧೈರ್ಯದಿಂದಿರಿ.
ನಿಮಗೆಲ್ಲ ಶುಭವಿರಲಿ !

ಎಲ್ಲರೂ : ವಿಘ್ನರಾಜನಿಗೆ
ಜಯವಾಗಲಿ ಜಯವಾಗಲಿ ಜಯವಾಗಲಿ !

**ನೋಟ : 5**

**ರಾಜಬೀದಿ**

(ರಾಕ್ಷಸರ ತಂಡವೊಂದು ಋಷಿಗಳು ಮತ್ತು ದೇವತೆಗಳನ್ನು ಹಿಡಿದು ಎಳೆದಾಡಿ ಹಿಂಸಿಸುತ್ತಿರುವ ದೃಶ್ಯ, ಸಿಂಧುರ ಅವರ ಕುಣಿತ ಮೆರೆತಗಳಿಗೆ ಕೇಕೆ ಹಾಕಿಕೊಂಡು ಚಪ್ಪಾಳೆ ತಟ್ಟಿ ಕುಣಿಯುತ್ತಾನೆ)

ರಕ್ಷಸರು : ಅಬ್ಬರದುಬ್ಬರ ಬೊಬ್ಬುಳಿ ಕಡಲು
ತಬ್ಬಿಬ್ಬಾಗಿದೆ ಭೂದೇವಿ ಮಡಿಲು
ಕುಯ್ಯೋ ಮರ್ರೋ ದೇವ್ಗಳ ಗೋಳು
ತಿನ್ನಲು ಬೇಕು ಮುನಿಗಳ ಕರುಳು ॥
ಹ ಹ್ಹಾ ಹ ಹ್ಹ ಹ್ಹಾ ಹ
ಹ ಹ್ಹಾ ಹ ಹ್ಹ ಹ್ಹಾ ಹ !!
(ಬೇರೆ ಧಾಟಿಯಲ್ಲಿ)

ಸಿಂಧುರಾಸುರ ಬಾರೋ ಸಿಂಹಾಸನವೇರೊ
ನಮ್ಮೆಲ್ಲ ರಾಶೀ ಕಿರಣವೆ ಬಾರೊ

ಎಲ್ಲ ದೇವತೆಗಳು ತಲೆಮೆಟ್ಟು ಬಾರೊ
ಜಯ ಕೋರುವೆವಯ್ಯ ನಿನಗೆ ಸರಿ ಯಾರೋ ॥
ಜೈ ಜೈ ಜೈ ಜೈ ಜೈ ಜೈ ಜೈ ಜೈ ಜೈ ಜೈ ಜೈ ಜೈ
ಸಿಂಧುರಾಸುರನಿಗೆ ಜೈ ಜೈ ಜೈ ಜೈ ಜೈ ಜೈ !

ಸಿಂಧು : ಚಂಡಾ, ಗೊಡ್ಡಾಟವೇಕೆ ?
ಸಳೆದು ತಾ ಇಂದ್ರನನು
ಇಲ್ಲಿಯೇ ಮುಗಿಸುವೆನು
ಅವನ ಇಬ್ಬಗಿ ಮಾಡಿ ತೋರಣದ ಕಟ್ಟುವೆನು !
(ಚಂಡನು ದೇವೇಂದ್ರನನ್ನು ಹಿಡಿದು ತರುವನು
ಅಷ್ಟರಲ್ಲಿ ಗಣಪತಿಯ ಪ್ರದೇಶ)

ಗಣೇಶ : ನಿಲ್ಲು ಚಂಡಾ, ನಿಲ್ಲು !
ಇಂದ್ರನನ್ನು ಸೀಳುವುದು ಸುಲಭವೆಂದರಿಯದಿರಿ !
ಓ ಸಿಂಧುರಾಸುರಾ
ಇಂದ್ರನಿಬ್ಬಗಿ ಮಾಡಿ ತೋರಣವ ಕಟ್ಟುವೆಯಾ ?
ಮೂರ್ಖ, ಸಿಗಿಯಲಿಕೆ ಅವನೇನು ಬಾಳೆನಾರಲ್ಲ !
ಬೊಗಳೆ ಮಾತಂತಿರಲಿ, ದೌಷ್ಟ್ಯಕ್ಕೆ ಕೊನೆಯಿರಲಿ
ಇಂದೆ ಮುಗಿಸುವೆ ನಿನ್ನ ಬಾರೊ ಸಿಂಧುರ !

ಸಿಂಧು : ಹ್ಞೆ ! ನನ್ನ ಮುಗಿಸುವುದೆ !
ಲೋ ಡೊಳ್ಳು ಹೊಟ್ಟೆಯ ಗಣಪ
ಇಲಿಯ ವಾಹನವಾಗೆ ನಾನು ಮೂಷಕಾಸುರನಲ್ಲ !
ಶುದ್ಧ ಸಿದ್ಧಿಯ ಪಡೆದ ಸಿಂಧುರಾಸುರ ನಾನು ತಿಳಿಯಿತೇ ?

ಗಣೇಶ : ತಿಳಿಯಿತು.. ನೀನು ಸಿದ್ಧಿಯನು ಪಡೆದವನು, ದಿಟ್ಟ,
ಆದರೆ ಶುದ್ಧಾತ್ಮನಲ್ಲ ! ನೀನೊಂದು ಪಾಪಕೂಪ !
ನಿನ್ನ ಪಾಪದ ಪಾತ್ರೆ ತುಂಬಿ ಬಂದಿದೆ ದೈತ್ಯ !

ಸಿಂಧು : ನಾನಜೇಯನೊ ಗಣಪ !
ಸಾವೆಂಬುದೆನಗಿಲ್ಲ
ಅಜ್ಜನೆನಗಿತ್ತಿಹನು ದಿವ್ಯ ವರವ !
ದೇವದಾನವರಿಂದ ಜೀತಕೋಟಿಗಳಿಂದ
ಮರ್ತ್ಯ ಮಾನವರಿಂದ ಯಾರಿಂದಲೂ ನನಗೆ
ಮರಣವಿಲ್ಲ !

ಗಣೇಶ : ದಿಟ್ಟ ನುಡಿದೆ ಸಿಂಧುರಾ
ನೀನು ಪೇಳ್ದವರಿಂದ ನಿನಗಿಲ್ಲ ಮರಣ ದಿಟ !
ಆದರಿದೊ ನನ್ನಿಂದ ನಿನಗಹುದು ಇಂದೆ ಜೀವಮುಕ್ತಿ !

ಸಿಂಧು : ಅದು ಹೇಗೋ ? ನಿನೋರ್ವ ದೇವತೆ !

ಗಣೇಶ : ಅದೇ ಗುಟ್ಟು ಅದೆ ಒಗಟು !
ನಾನು ದೇವತೆಯಹುದು ಆನೆ ಮುಖಹೊತ್ತವನು.
ಮಾನವನ ಮುಂಡವನು ಪಡೆದ ಮಾನವನಹುದು !
ಅದರಿಂದೆ ಲೋಕಸತ್ಯದ ಜೀವಿ ನಾನಲ್ಲ ಸಿಂಧುರ
ಕೊಲ್ಲುವ ಆಯುಧ ಉಂಟು ಅದೇ ನನ್ನ ಈ ದಾಡೆ !

ಸಿಂಧು : ಅಯ್ಯಯ್ಯೋ, ಎನಗರಿಯದಾಯ್ತೇ !
ಒಗಟೆ ರೂಪದ ಮರವ ಕೊಟ್ಟನೇ ಆ ಮುದಿಯ !
ಲೋ ಬೊಮ್ಮ, ಮುದಿಗೊಡ್ಡು, ಜಡದೇಹಿ
ಮೋಸ ಮಾಡಿದೆಯಾ ? ನೀನೆ ಮೊದಲಾಹುತಿಯೊ ನನಗೆ

(ಮುಂದೆ ನುಗ್ಗಲು ಯತ್ನಿಸುವನು. ಗಣೇಶ ತಡೆದು)

ಗಣೇಶ : ಸಿಂಧುರಾ, ಹೆಜ್ಜೆ ಇಡದಿರು ಮುಂದೆ, ನಿನ್ನ ಬಾಳಿನ ನೂಲು ಸವಿದು ಸಣ್ಣಾಗಿಹುದು ಯುದ್ಧಕ್ಕೆ ಸಿದ್ಧನಾಗು !

ಸಿಂಧು : ಆಯಿತು....ನಡೆಯಲೀ ಯುದ್ಧ !

(ಹೋರಾಟ ಚಣಕಾಲ. ಗಣಪ ತನ್ನ ದಾಡೆಯಿಂದ ತಿವಿದು ಸಿಂಧುರನನ್ನು ಕೊಲ್ಲುವನು)

ಗಣೇಶ : ಘೋರ್ಗರೆವ ಬಿರುಗಾಳಿಯಬ್ಬರವು ಕೂಡ
ಕಾಲ ಬಂದಾಗ ತಾ ಶಾಂತವಾಗುವುದು
ಸಪ್ತಸಾಗರದುರುಬೆ ತೆಪ್ಪಗಾಗುವುದು
ಲೋಕ ಕಂಟಕನಾದ ಸಿಂಧುರಾಸುರನಿಲ್ಲಿ
ಹೆಣವಾಗಿ ಮಲಗಿಹನು !
ಶಾಂತವಾಗಲಿ ಪೃಥ್ವಿ, ಶಾಂತವಾಗಲಿ ವಿಶ್ವ
ಶಾಂತವಾಗಲಿ ಎಲ್ಲ ನೀಹಾರಿಕಾ ಲೋಕ.
ತಪಗೈವ ತವಸಿಗಳೆ, ವರವೀವ ಸುಮನಸರೆ,
ತಪ್ಪು ಮಾಡದೆ ಇರುವ ಅಪ್ಪಗಳೆ ಇಲ್ಲ
ಬ್ರಹ್ಮನೂ ಒಮ್ಮೊಮ್ಮೆ ತಪ್ಪು ಮಾಡುವನು
ಒಂದು ನುಡಿ ನೆನಪಿರಲಿ
ಎಂದಿಗೂ ಕೆಟ್ಟುದಕೆ ಪ್ರೋತ್ಸಾಹ ಕೊಡಬೇಡಿ !
ಅಪಾತ್ರವನ್ನು ಗೌರವಿಸುವುದು,
ಸಪ್ಪಾತ್ರವನ್ನು ತಿರಸ್ಕರಿಸಿದ್ದಕ್ಕಿಂತಲೂ ಅಪಾಯ !
ಆದ್ದರಿಂದ ಎಂದಿಗೂ ಪಾಪಕ್ಕೆ ಪ್ರೋತ್ಸಾಹ ಬೇಡ.
ನಿಮಗೆಲ್ಲ ಒಳಿತಕ್ಕೆ. . . .ಶುಭವೊಂದೆ ನೆಲೆಸಿದೆ!

ಎಲ್ಲರೂ : ಧನ್ಯರಾದೆವು ದೇವ, ಕರುಣ ಪ್ರಭಾವ
ಕರಿವದನ ನಿನಗಿದೋ ನಮ್ಮ ನಮನ

ಹಾಡು : ದೇವ ದೇವ ಜಯ ಗೌರೀತನಯಾ
ಭಕ್ತ ಹೃದಯ ಸಂಸ್ಕಾರಿ
ಜೀವ ಜೀವ ಸಂಜೀವ ಬಿಂದುವೇ
ಭಾವ ವಿಪಿನ ಸಂಚಾರೀ ॥
ದುಷ್ಟ ಶಿಕ್ಷಕನೆ ಶಿಷ್ಟ ಪಾಲಕನೆ
ಇಷ್ಟಾರ್ಥವೀವ ಗಣಪ
ಅಷ್ಟಾಷಷ್ಠಿ ಪುಣ್ಯಾಂಶ ಫಲಿಸಲಿ
ಎಂದು ಹರಸೊ ದಿವಪ !

ಜಯ ಜಯ ಜಯ ಜಯ ಜಯ ಜಯ ಗಣನಾಯಕ
ಜಯ ಜಯ ಜಯ ಜಯ ಜಯ ಸಿದ್ದಿವಿನಾಯಕ
ಜಯ ಜಯ ಜಯ ಹೇ ಲಾಸ್ಯವಿಲೋಲ !
ಜಯ ಜಯ ಸಿದ್ಧಿ ಬುದ್ಧಿ ಪ್ರವಾಳ ॥

# ಬಲಿ – ದಾನ

## ಪಾತ್ರವರ್ಗ

ವಾಮನ

ವಿಶ್ವರೂಪ ದರ್ಶನ ಮೂರ್ತಿ

ಬಲಿ ಚಕ್ರವರ್ತಿ

ವಿಂಧ್ಯಾವಳಿ

ಶುಕ್ರಾಚಾರ್ಯ

ಯಕ್ಷ

ಯಕ್ಷಿ

ಋತ್ವಿಜರು (ನಾಲ್ವರು)

ಮೇಳ.

ನೃತ್ಯ :

ಶ್ರೀಮತಿ ಮಂಜುಳಾ ಪರಮೇಶ್

ಸಂಗೀತ :

ಬಿ.ಆರ್. ಹೇಮತ್

ನಿರ್ದೇಶನ :

ಶ್ರೀಮತಿ ಪದ್ಮ ಹೇಮಂತ್.

# ಅಡವಿಯ ಒಂದೆಡೆ

(ಮಂಜುಮುಚ್ಚಿದ ಅಡವಿಯಲ್ಲಿ ಹಕ್ಕಿಗಳು ಮಂಜುಳಗಾನ ಅದರ ಕೊಡೆ ಅಗಲಿದ ಯಕ್ಷ ಯಕ್ಷಿಣಿಯರರ ಕೂಗು ಕರೆ. ಈ ವಿಲಾಸಿಗಳು ಒಬ್ಬರನ್ನೊಬ್ಬರು ಅಗಲಿ ಅರಸುತ್ತಿರುವರು)

ಯಕ್ಷಿ : ಓ ಯಕ್ಷಾ.......! ಯಕ್ಷ ಓ ಬಾರಾ !!

ಯಕ್ಷ : ಓ ಯಕ್ಷಿ.....ಯಕ್ಷಿ ಓ ಬಾರೇ.....
ಯಕ್ಷಿ ಬಾರೆ ಚೈತ್ರಾಕ್ಷಿ ಬಾರೆ
ನಕ್ಷತ್ರ ಲೋಕದಿಂದ
ಅಕ್ಷಯಳು ನೀನು ರಕ್ಷಿಸಲು ಬಾರೆ
ತಾರಾಕ್ಷಿ ಮೋದದಿಂದ
ಆಕಾಶದಲ್ಲಿ ಸಂಕಾಶಮಾದ
ಬಿಳಿ ಮುಗಿಲ ತೇರನೇರಿ
ರಸಯಾನಗೈವ ಸುರಕನ್ಯೆ ಬಾರೆ
ಅನುರಾಗ ರಾಗ ಹಾಡಿ
ತೆಂಗಾಳಿಯಲ್ಲಿ ಬಾನಾಡಿ ಆಡಿ
ಗರಿಗೆದರಿ ಅಲೆಯುವಂತೆ
ತೇಲಾಡಿ ಬಾರೆ ಓಲಾಡಿ ಬಾರೆ
ಬಾರೆನ್ನ ಬಯಕೆ ತೀರೆ
ಮಘ ಮಘಿಸುತೆಲ್ಲ ತಿರೆ ತುಂಬು ಬಾರೆ
ಮಂದಾರ ಗಂಧ ಸದನೆ !

(ಹಿನ್ನೆಲೆಯಲ್ಲಿ ಸಂಗೀತ ಅಲೆ ಅಲೆಯಾಗಿ ತೇಲುತ್ತಿರುವಾಗಲೇ ನರ್ತಿಸುತ್ತಾ ಪರಸ್ಪರ ಭೇಟಿಯಾಗಿ)

ಯಕ್ಷಿ : ಏನಿದೇನಿದು ಯಕ್ಷ
ಏನೆಂಥ ಮರೆವೊ ನಿನದು !
ನಕ್ಷತ್ರ ಲೋಕ ಬಿಟ್ಟು
ರೂಕ್ಷತೆಯ ಭುವಿಗೆ ತಂದೆ
ಗಿಡ ಮುಳ್ಳು ಕಲ್ಲು ತುಳಿದು
ಅಂಗಾಲು ಸವೆದು ಹೋಯ್ತು !
ಹೂದಳದ ಹಾದಿ ಹಾಸು
ಬರಿ ನೆನಪಿನೊಂದು ಕೂಸು !
ಕರೆ ತಂದೆ ಏಕೋ ನನ್ನ
ಹೇಳೆನ್ನ ಕೊರಳ ಚಿನ್ನ
ಇಲ್ಲಿರುವುದೇನೂ ಇಂದು
ಸಡಗರದ ಸ್ವರ್ಣ ಬಿಂದು
ಹೇಳಲ್ಲ ಹೊಸತು ಏನು
ಭೂಲೋಕದೊಸಗೆ ಏನೊ?

ಯಕ್ಷ : ಚೆಲುವಿನ ಚಿಲುಮೆಯೆ ಬೆಳ್ಳಿಯ ಬೆಡಗಿಯೆ
ಭಾರತ ದೇಶವನೀಕ್ಷಿಸು ಬಾ
ವರುಷದ ಹರುಷದ ದಿವ್ಯ ದೀಪಾವಳಿ
ಹಬ್ಬದ ಒಸಗೆಯ ನೋಡಲು ಬಾ
ಎಲ್ಲೆಡೆ ಎಲ್ಲೆಡೆ ಕಂಗಳು ಹರಿದೆಡೆ
ಝುಗಝುಗ ಝುಗಿಸುವ ದೀವಳಿಗೆ
ಕೋಟಿ ಕೋಟಿ ಶತಕೋಟಿ ಹಣತೆಗಳ
ಬೆಳಕಿನ ಜಾತ್ರೆಯ ಮೆರವಣಿಗೆ !

ಕತ್ತಲ ಬಳ್ಳಿಯು ಹೂ ಬಿಟ್ಟಿತೊ ಎನೆ
ದೀಪದ ಕುಡಿಗಳು ಮಿನುಗುತಿವೆ
ಬೆಳಕಿನ ಹೊಳೆ ಹರಿದಾಡುವ ನೆಲವಿದು
ಚಿಕ್ಕಿಯ ಬಾನಸು ನಾಚಿಸಿದೆ !

–ಯಕ್ಷಿ ಅಲ್ಲಿ ನೋಡು : (ಯುವಕ ಯುವತಿಯರು ಮತ್ತು ಮಕ್ಕಳ ಮೇಳ ದೀಪ ಹಿಡಿದು ಪಟಾಕಿ ಸುಡುತ್ತಾ)

ಮೇಳ : ಬನ್ನಿ ಬನ್ನಿ
ಬೆಳಕ ತನ್ನಿ ॥
ಬೆಳಕ ಬಿತ್ತಿ
ಬೆಳಕ ಚೆಲ್ಲಿ ॥
ಬೆಳಕಿನೆಳೆಯ
ಬಳ್ಳಿ ಬೆಳೆದು
ಬೆಳಕನುಂಡು
ಬೆಳಕ ಕುಡಿದು
ಹಾಡಿನಲಿಯುವ
ಪಾಡಿ ಬೆಳೆಯುವ ॥

(ವಚನ ಧಾಟಿಯಲ್ಲಿ)
ಬಾಣ ಬಿರುಸು ಸುರುಸುರು ಬತ್ತಿ
ಜಾಗರವಾಡುವ ಭೂ ಚಕ್ರ
ಅಲ್ಲೇ ಗಗನದಿ ಕಿಡಿಗಳ ಸೂಸುವ
ರಾಕೆಟ್ ರೌಡಿಯ ಆ ವಕ್ರ
ಆನೆಯ ದಪ್ಪದ ಆನೆ ಪಟಾಕಿ
ಕುದುರೆಯ ಗುರುತಿನ ಸಣ್ಣ ಪಟಾಕಿ
ತಂತಿ ಮತಾಪು
ಆ್ಯಟಂ ಬಾಂಬು
ಹೂಮಳೆಗರೆಯುವ
ಮದ್ದಿನ ಬಾಲ !
ಢಂ ಢಂ ಢಂ ಎನೆ
ಸಿಡಿಯುವ ಜಾಲ
ನುಡಿಸುವ ಬನ್ನಿ
ಸಿಡಿಸುವ ಬನ್ನಿ ॥

(ಹಾಡು)
ವರುಷದ ಹರುಷದ ದೀವಳಿಗೆಯೆ ಬಾ
ಬೆಳಕನು ತುಂಬುತ ಮನೆ ಮನೆಗೆ
ನಂದೆನ ಚಂದನ ತಾರಾಲೋಕದ
ಸೌರಭ ಸೂಸುತ ಎದೆ ಎದೆಗೆ ॥
ಬೆಳಕಿನ ಚೆಲುಮೆಯೆ ಪದ್ಮಪ್ರಣತಿಯೆ
ಇಳೆಯಂಗಳವನು ಬೆಳಗಿಸು ಬಾ
ತಿಳಿವಿನ ಹೊಳೆಯನು ಹರಿಸುತೆ ಬಾ
ದೀವಳಿಗೆಯ ನವ ತೇಜವೆ ಬಾ ॥

ಯಕ್ಷಿ : ಯಕ್ಷ,
ನಿನ್ನೆಯೆ ಗತಿಸಿತು ನರಕ ಚತುರ್ದಶಿ
ನಾಳೆಯೆ ಬರಲಿದೆ ಬಲಿಪಾಡ್ಯಮಿಯು
ಇಂದಿದೊ ತುಂಬಿದೆ ಕತ್ತಲಮಾಸ್ಯೆಯು

ದಿನ ಮೂರನ ವೈಶಿಷ್ಟ್ಯವಿದೇನೊ?
ಹಬ್ಬದ ದಿಬ್ಬಣದರ್ಥವದೇನೊ?

ಯಕ್ಷ : ನಿನ್ನೆಯ ದಿನದದು ನರಕಾಸುರ ವಧೆ
ಕೃಷ್ಣನ ಅವತಾರ !
ನಾಳೆಯ ಶುಭದಲಿ ಬಲಿಚಕ್ರಿಯ ಸುಧೆ
ವಾಮನ ಅವತಾರ
ಎರಡನು ಬೆಸೆಯುವ ಈ ದಿನ ಸೇತುವೆ
ಲೋಕದ ಉದ್ಧಾರ !

ಮೇಳ : ನೆತ್ತಿಯ ಮೆಟ್ಟಿದನೊ
ಶ್ರೀಹರಿ
ನೆತ್ತಿಯ ಮೆಟ್ಟಿದನು ॥
ವಾಮನ ರೂಪದಿ ದಾನವ ಬೇಡಿ
ಮೂರಡಿ ನೆಲವನು ನಡೆಮುಡಿ ಮಾಡಿ
ದಿವ್ಯಾಮೋದದಿ ದಿವದೆಡೆ ಬೆಳೆದು
ಭೂವ್ಯೋಮಂಗಳ ಎರಡಡಿ ಅಳೆದು
ಮೂರನೆಯಡಿಯಲಿ ಬಲಿಯನು ತುಳಿದು
ನೆತ್ತಿಯ ಮೆಟ್ಟಿದನೊ
ಬಲಿಯನು
ಪೂಜ್ಯನ ಮಾಡಿದನು ॥

ಯಕ್ಷ : ಆಶ್ವಯುಜ ಶುದ್ಧದಲಿ ಪ್ರತಿಪದೆಯ ದಿನದಂದು
ವಿಶ್ವಾತ್ಮನಾದವಗೆ ಪೂಜೆ ಸಲುವಂದು
ಮೂರು ದಿನಗಳ ಹಬ್ಬ ಮೂರು ಪಾದದ ನೆನಹು
ಮೂರು ಲೋಕಗಳಳೆದ ಸಂಕೇತವು
ಬಲಿಚಕ್ರವರ್ತಿಯವ ದರ್ಪಿಷ್ಠ ಪ್ರಭುವರನು
ಪ್ರಹ್ಲಾದನೆಂಬವಗೆ ಮೊಮ್ಮಗನು ತಾನು
ವೀರ ವಿರೋಚನನ ಸತ್ಪುತ್ರನವನು
ಖ್ಯಾತ ಬಾಣಾಸುರಗೆ ತಂದೆಯವನು
ದೈತ್ಯ ಗುರು ಆ ಶುಕ್ರ ಆಚಾರ್ಯನಿಗೆ ಶಿಷ್ಯ
ವನಿತೆ ವಿಂಧ್ಯಾವಳಿಗೆ ಪತಿಯು ಅವನು
ಪತ್ನಿ ಪಾತಿವ್ರತ್ಯ ಗುರುವಿನಾಶೀರ್ವಾದ
ಬೆಳಸಿದವು ಅವನಲ್ಲಿ ಹಮ್ಮುಬಿಮ್ಮು !
ದೈತ್ಯೇಂದ್ರ ಬಲಿ ಚಕ್ರವರ್ತಿ ತಾನೊಮ್ಮೆ
ವೈಹಾಸವೆಂದೆಂಬ ವೈಮಾನವೇರಿ
ದೇವೇಂದ್ರನೊಡನೆ ತಾ ಹೋರಾಟವನು ಮಾಡಿ
ಹೆಣವಾಗಿ ಉರುಳಿದನು ರಣರಂಗದಲ್ಲಿ

ಯಕ್ಷಿ : ಅಯ್ಯೋ ಪಾಪ ! ಆಮೇಲೆ

ಯಕ್ಷ : ಆಚಾರ್ಯ ಶುಕ್ರನಿಂ ಸಪ್ರಾಣಗೊಂಡು
ವಿಶ್ವಜಿತ್ ಯಾಗವನು ವಿಧ್ಯುಕ್ತಗೈದು
ಅಗ್ನಿದೇವನ ಕೃಪೆಗೆ ಪಾತ್ರನಾದ !
ಅಶ್ವ ರಥ ಧ್ವಜಗಳನು ಅವನಿಂದ ಪಡೆದ
ದಿವ್ಯ ಧನುವೊಂದನ್ನು ಅಕ್ಷಯ ತೂಣೀರವನು
ತಾತ ಪ್ರಹ್ಲಾದನಿಂದ ಪಡೆದ
ಯುದ್ಧವನು ಘೋಷಿಸಿದ ಸುರಪತಿಯ ಮೇಲೆ

ಹೋರಾಟ ಹೋರಾಟ ಘೋರ ಹೋರಾಟ
ದೈತ್ಯೇಂದ್ರ ದೇವೇಂದ್ರ ದ್ವಂದ್ವ ಹೋರಾಟ
(ದೇವೇಂದ್ರ ಬಲೀಂದ್ರರ ಯುದ್ಧಾಭಿನಯ ತೋರುವುದು)
ಇಂದ್ರನನು ಸೋಲಿಸುತೆ ದೇವರಸನಾದ
ಸ್ವರ್ಗ ಸಾಮ್ರಾಜ್ಯಕ್ಕೆ ಒಡೆಯನಾದ !
ಮೇಳ : ಶ್ರೀಹರಿ ಜನಿಸಿದನೋ । ಅದಿತಿಯ
ಗರ್ಭದಲುದಿಸಿದನೊ ॥
ಕುಬ್ಜ ಪದಾಬ್ಜದ ತೇಜೋಮೂರ್ತಿಯು
ವಾಮನನೆನಿಸಿದನು ॥
ದುಷ್ಟರ ಶಿಕ್ಷಕನೊ ವಿಷ್ಣುವು
ಶಿಷ್ಟರ ಪಾಲಕನೊ
ಕಶ್ಯಪ ಬ್ರಹ್ಮನ ಶಿಶು ಮಗನಾಗಿ
ಬಾಲಕ ಬೆಳಗಿದನು ॥
ಯಕ್ಷ : (ಗದ್ಯ) ಬಲಿ ಹುಟ್ಟಿನಿಂದ ರಾಕ್ಷಸ
ಭಾವನೆಯಲಿ ಸಾತ್ವಿಕ.
ದೇವಲೋಕದೊಡೆಯನಾದ ಕೂಡಲೇ
ಅಶ್ವಮೇಧ ಯಾಗವನ್ನು ಹಮ್ಮಿಕೊಂಡನು.
(ಪದ್ಯ) ನರ್ಮದೆಯ ತೀರದಲ್ಲಿ ಯಜ್ಞಶಾಲೆಯ ರಚಿಸಿ
ಅಂಕುರಾರ್ಪಣಗೈದು ನಾಂದಿ ನಿರಿಸಿ
ಧಾತೃ ಹೋತೃ ಉದ್ಗಾತೃ ಬ್ರಹ್ಮರನು
ಆಧ್ವರ್ಯು ಋತ್ವಿಜರನಾಹ್ವಾನಿಸಿ
ಪಂಚಾಗ್ನಿ ಪುಂಜದಲಿ ಆಜ್ಯ ಸಮಿತನ್ನಿತ್ತು
ಪೂಜ್ಯನೆಂದೆನಿಸಿದನು ಬಲಿಚಕ್ರವರ್ತಿ
(– ಒಂದು ಬದಿಯಲ್ಲಿ ಯಜ್ಞವೇದಿಕೆ. ಕಂಕಣ ಕಟ್ಟಿಸಿಕೊಂಡು ಕುಳಿತಿರುವ ಬಲಿ ಅಲ್ಲಿ ಯಜಮಾನ. ಹೋಮಕುಂಡದ ಸುತ್ತ ಋತ್ವಿಜರು ಅವರಿಂದ ಮಂತ್ರಪಠಣ)
(ಲಾವಣಿ) ದೇವದೇವರನು ಜಾನಿಸಿ ಅರ್ಚಿಸಿ
ಹವಿರ್ಭಾಗವನು ಪೂರೈಸಿ
ದಾನದಕ್ಷಿಣೆಯ ಒಟ್ಟಿಕೊಟ್ಟು
ತಾ ಭೂತ ಕೋಟಿಯನು ತಣಿಸಿದನು
ಬೇಡುವರಿಲ್ಲೆಂದೆನಿಸಿದನು !
ಅವಭೃತ ಸ್ನಾನವ ಚಕ್ರಿಯು ಮುಗಿಸಿ
ಲೌಕಿಕಾಗ್ನಿ ಚೈತ್ಯಾಗ್ನಿಯ ಬೆರೆಸಿ
ಪೂರ್ಣಾಹುತಿಗಣಿ ಮಾಡುತಲಿರುಲು
ಆಯಿತು ವಾಮನನಾಗಮನ !
ಅಗ್ರಪೂಜೆಗೆ ಇವನೇ ಅರ್ಹನು !
ಆಹ್ವಾನಿತನಂತಾಗಮಿಸಿರುವನು
ಪೂಜೆಯಗೈವೆನು ದಾನವ ಈವೆನು
ಎಂದು ಹಿಗ್ಗಿ ಬಲಿ ಸ್ವಾಗತಿಸಿದನು !
ಮೇಳ : ಸ್ವಾಗತವು ಸ್ವಾಗತವು
ಸ್ವಾಗತವು ವಟುಗೆ ॥
ಸ್ವಾಗತವು ವರ್ಚಸ್ವಿ
ಬ್ರಹ್ಮವಟು ಪೂಜ್ಯನಿಗೆ ॥ ಸ್ವಾಗತವು ॥
ವಾಮನಗೆ ಭೀಮನಿಗೆ

ಸೋಮನಿಗೆ ಸೌಮ್ಯನಿಗೆ
ತೇಜಸ್ವಿ ಭಾಸ್ಕರಗೆ
ಓಜಸ್ವಿ ಶ್ರೀಶನಿಗೆ ॥ ಸ್ವಾಗತವು ॥

ಕೊಡೆ ಹಿಡಿದು ಮಡಿಯುಟ್ಟು
ಮುಡಿಯ ಹಿಂಬದಿಕಟ್ಟಿ
ಯಜ್ಞೋಪವೀತವನು ಧರಿಸಿದವಗೇ
ದರ್ಭೆಹಿಡಿದರ್ಭಕಗೆ
ಶುಭ್ರ ಶುಭ ಪ್ರಾಂಜಲಗೆ
ತರುಣ ತುಲಸಿಯ ಹಾರ
ನೇರ್ಪಡಿಸಿದವಗೇ ॥ ಸ್ವಾಗತವು ॥

(ಹಾಡು ಹರಿಯುತ್ತಾ ನರ್ತನ ನಡೆಯುತ್ತಾ ಇರುವಾಗಲೇ ವಾಮನನನ್ನು ಬಲಿಚಕ್ರವರ್ತಿಯು ಪೀಠದ ಮೇಲೆ ಕೂರಿಸಿ, ಅರ್ಘ್ಯಪಾದ್ಯಗಳಿತ್ತು ಪುಷ್ಪವೃಷ್ಟಿಗೈದು ವಿಂಧ್ಯಾವಳಿಯೊಡನೆ ದೀರ್ಘದಂಡ ನಮಸ್ಕಾರ ಮಾಡುವನು)

ಬಲಿ : ಓ ದಿವ್ಯ ತೇಜಸವೆ, ನಿನ್ನ ದರುಶನದಿಂದ
ನಾ ಧನ್ಯನಾದೆ ನಾ ಮಾನ್ಯನಾದೆ !
ಪಾವನವು ನನ್ನ ಕುಡಿ, ಪಾವನವು ಮೇಧಿನಿ
ಯಜ್ಞ ಸಾಫಲ್ಯಕ್ಕೆ ಹೇತುವಾದಿರಿ ನೀವು
ಮನದಿಚ್ಛೆ ಹೊರಬರಲಿ ; ಬೆಸನ ನೆರವೇರಿಸಲು
ದಾಸನಿದ್ದೊ, ಗುರುದೇವ, ಸಿದ್ಧನಿಹೆನು !

ವಾಮನ : ಬಲಿಚಕ್ರವರ್ತಿ, ಕಾರ್ಯಾರ್ಥಿ ನಾನು
ಬೇಡಿದುದ ನೀಡುವೆಯಾ

ಬಲಿ : ಪಾದದಲಿ ತೋರಿದುದ ಶಿರದಲ್ಲಿ ಧರಿಸುವೆನು !
ಬೆಸಸಿ ಗುರುವರ್ಯಾ

ವಾಮನ : ನನ್ನ ಬೇಡಿಕೆ ತುಂಬ ಅಲ್ಪವಿಹುದು !

ಬಲಿ : ಬಲಿಯ ದಾನಕ್ಕೆಂದೂ ಅಲ್ಪತ್ವ ಬರದಿರಲಿ !

ವಾಮನ : ಅಲ್ಪವೊ ಕಲ್ಪವೊ !
ಒಂದನೂ ನಾನರಿಯೆ ! ಏತಕೆನೆ,
ಭಿಕ್ಷುಕಗೆ ತಿನಿಸನ್ನು ಆಯ್ದುಕೊಳ್ಳುವ
ಹಕ್ಕು – ಅಧಿಕಾರಗಳು ಇಲ್ಲ !
ಅಲ್ಲವೇ ಚಕ್ರವರ್ತಿ ?

ಬಲಿ : ಶಾಂತಂ ಪಾಪಂ ! ಶಾಂತಂ ಪಾಪಂ !
ಮುನಿವರನೆ, ಮಂಗಳನೆ
ನನ್ನದೆಂಬುದು ಇಲ್ಲಿ ಯಾವುದೂ ಇಲ್ಲ
ನಿನ್ನದೇ ಎಲ್ಲ
ನೀನಿತ್ತುದದನೆತ್ತಿ ಮತ್ತೆ ನಿನಗೇ ಇತ್ತು
ಧನ್ಯನಹೆನು ! ನಾ ಮಾನ್ಯನಹೆನು !

ವಾಮನ : ಅಂತಾದರೆ......ಅಂತಾದರೆ
ನನಗೆ ಬೇಕಿದೆ ಚಕ್ರಿ ಮೂರು ಪಾದದ ಭೂಮಿ
ಕೊಡಲಾಪೆಯಾ ?

ಬಲಿ : ಹ ಹ್ಹಹ್ಹಹ್ಹಾ...! ಹುಹ್ಹುಹ್ಹುಹ್ಹುಹ್ಹು !

ವಾಮನ : ನಗೆಯೇಕೆ ದೈತ್ಯೇಂದ್ರ ? ತ್ರಿಲೋಕಾಧಿಪತಿ ನೀನು
ಮೂರಡಿಯ ನೆಲಕೊಡಲು ಕಷ್ಟವೆನಿಸಿತೆ ಹೇಳು !

ಬಲಿ : ಅಯ್ಯೋ ಬಡಪಾಯಿ ಬ್ರಾಹ್ಮಣಾ !
ಕಲ್ಪವೃಕ್ಷವ ಕಾಡಿ ಕೌಪೀನ ಬೇಡಿದೊಲು

ನಿನ್ನ ಪಾಡಾಯ್ತೀಗ...!
ನೀನೆಷ್ಟು ಕುಳ್ಳನೋ, ಅಷ್ಟೇ ಕುರುಡು ನಿನ್ನ ಬುದ್ಧಿ !
ಭೂಮಂಡಲವ ಬೇಡಿದರು ಆನಂದದಿಂ ಕೊಡುತಿದ್ದೆ
ಮೂರಡಿಯ ಬೇಡಿ ನನಗಪಮಾನಗೈಯುತಿಹೆ !
ನನ್ನ ಘನತೆಗೆ ನೀನೆ ಕುಂದುಂಟುಮಾಡಿರುವೆ !

ವಾಮನ : ಚಕ್ರವರ್ತಿ, ಆಸೆ ಆಕಾಶದಷ್ಟು ಅಗಲವಂತೆ
ಭೂಮಿಯಷ್ಟು ಬಲವಂತೆ, ಬಯಲಂತೆ !
ಮೊದಲೆ ಹೇಳಿದ ರೀತಿ ನಾನು ಅಲ್ಪ ತೃಪ್ತ !
ಕೊಡುವ ಮನವಿದ್ದರೆ ಕೊಟ್ಟು ಬಿಡು
ಮೂರಡಿಯ ನೆಲನಿಂದು ಧಾರೆಯೆರೆದು !

ಬಲಿ : ನಿನ್ನ ಹುಚ್ಚಿಗೆ ನನ್ನಲ್ಲಿ ಮದ್ದಿಲ್ಲ ವಾಮನ ಮೂರ್ತಿ
ಇದೋ ಈ ಯಜ್ಞಶಾಲೆಯಲಿ ಉಪಸ್ಥಿತರಿರುವ
ಸಕಲ ದೇವತೆಗಳ ಸಾಕ್ಷಿಯಾಗಿ
ನಿನಗೆ ಮೂರಡಿ ನೆಲವ ದಾನವಿತ್ತಿಹೆನು !

ಶುಕ್ರ : (ನೇಪಥ್ಯದಿಂದಲೇ ಕೂಗಿಕೊಳ್ಳುತ್ತಾ ಪ್ರವೇಶಿಸುವನು)
ತಡೆ ನಿಲ್ಲು ಬಲಿಚಕ್ರವರ್ತಿ
ವಾಗ್ದಾನಗೈಯದಿರು, ದಾನ ಬೇಡಿಕೆಯಲ್ಲಿ
ದ್ರೋಹವಿಹುದು !

ಬಲಿ : ಕಾಲಮೀರಿತು ಗುರುವೆ !
ಮಾತು ತುಟಿ ಮೀರಿ ಹೊರಹೋದುದಾಯ್ತು !

ಶುಕ್ರಾ : ಹೋದರೇನಂತೆ, ಮತ್ತೆ ಹಿಂದಕ್ಕೆ ಪಡೆಯಬಹುದಲ್ಲ !

ಬಲಿ : ಅದು ಸಲ್ಲ, ಗುರುಪಿತನೆ, ಈ ಬಲಿಚಕ್ರವರ್ತಿಯು
ಎಂದಿಗೂ ವಚನ ಭ್ರಷ್ಟನಾಗಬಾರದು ! ಅಲ್ಲವೇ ?

ಶುಕ್ರಾ : ಬಲಿ...........ಬಲಿ.....ಬಲೀ.....
ಇವನು ವಾಮನನಲ್ಲ ಮಾನವನೂ ಅಲ್ಲ !
ಕಪಟನಾಟಕ ಸೂತ್ರಧಾರಿಯಯ್ಯಾ !
ದೇವತೆಗಳೆಲ್ಲರನು ರಕ್ಷಿಸುವ ಸಲುವಾಗಿ
ನಿನ್ನ ಬಲಿಕೊಡಲು ಬಂದಿಹನು ಬಲಿ!
ಈ ಛದ್ಮವೇಷನ ಬೇಗ ಹೊರಗಟ್ಟಿ ದೂಡಿಬಿಡು !

ಬಲಿ : ಶುಕ್ರಾಚಾರ್ಯ ಗುರುವರರೆ,
ನೀವು ದೈತ್ಯಕುಲ ಗುರುಗಳು,
ನನ್ನಾರಾಧ್ಯ ದೈವ !
ನಿಮ್ಮ ಶಿಷ್ಯನ ಹರಸಿ ಕಾಪಾಡಬೇಕು
ಸತ್ಯವಂತನ ಮಾಡಿ ನಿಲಿಸಬೇಕು.

ಶುಕ್ರಾ : ಈ ಶುಕ್ರಾ ಚಾರ್ಯನ ಪ್ರಿಯ ನೀನಾದ್ದರಿಂದಲೇ
ಅನಾಹುತವ ತಡೆಯಲು ಒಳಿತ ನುಡಿದೆ !
ನಿನಗಪಥ್ಯವಾದಲ್ಲಿ ಅನುಭವಿಸು
ತಡೆಯಲಿಕೆ ನಾನಾರು ?

ಬಲಿ : ಸತ್ಯ ನುಡಿದಿರಿ ತಂದೆ!
ಏನಾಗಬೇಕೋ ಅದು ಆಗದಿರದು !
ಸತ್ಯವೆಂದಿಗು ನಿಲಲಿ
ಧರ್ಮವದು ಬಾಳಲಿ
ಋತವು ಗೆಲಲಿ !

ವಿಂಧ್ಯಾವಳಿ, ಕನಕ ಕಳಶವ ತಾರ
ದಾನ ಧಾರೆಯನೆರೆದು ಧನ್ಯರಾಗೋಣ
(ತುಂಬಿದ ಕಳಶ ತರುವಳು ವಾಮನನ ಕೈ ಮೇಲೆ ಧಾರೆಯೆರೆಯುವರು)
ವಟುವೆ ವಾಮನ ಮೂರ್ತಿ
ನಿನ್ನಿಚ್ಛೆ ಸಲುವವೊಲು
ಬಲಿಚಕ್ರವರ್ತಿಯಿದೊ ಅರ್ಧಾಂಗಿಯೊಡಗೂಡಿ
ಮೂರಡಿಯ ನೆಲನಿಂದು ಆತ್ಮಸಂತೋಷದಲಿ
ಧಾರೆಯೆರೆದೀಯುತಿಹನ್ ಸ್ವೀಕರಿಸು ತಂದೆ
ಕೃಪೆಮಾಡಿ ಸ್ವೀಕರಿಸಿ, ನಮ್ಮನಾಶೀರ್ವದಿಸಿ.
(ವಾಮನ ಮೂರ್ತಿ ಮುಗಿಲೆತ್ತರ ಬೆಳೆಯುವನು....)

ವಿಂಧ್ಯಾ : ಏನಿದೀ ಅಚ್ಚರಿಯು ! ಸ್ವಾಮಿ,
ವಾಮನ ಮೂರ್ತಿ ಬೆಳೆದು ಬೆಳೆದೇ ಬೆಳೆದ
ಮುಗಿಲ ಮನೆವರೆಗೆ !

ಬಲಿ : ಅಹುದು ವಿಂಧ್ಯಾವಳಿ
ಕೌಸ್ತುಭರತ್ನ ಸುಶೋಭಿತ ಶ್ರೀ ಚಕ್ರಧಾರಿ
ಗದಾ ಪರಿಘವ ಹಿಡಿದ ಪಾಶಪಾಣಿ
ವಿಶ್ವಾತ್ಮವಿಶ್ವದೇಹಿ.

(ಹಾಡು) ಕಂಡೆ ಹರಿಯ ಕಂಡೆ
ದೇವಾಧಿ ದೇವನ ದಿವ್ಯಪ್ರಭಾವನ
ಕಂಡೆ ಹರಿಯ ಕಂಡೆ ॥

ಶಂಖ ಚಕ್ರ ಗದೆ ಶಾರ್ಙ್ಗವ ಧರಿಸಿದ
ಪಂಕಜ ವದನನ ಸೂರ್ಯನ ಮುಡಿದನ
ರತ್ನ ಕಿರೀಟದ ತೇಜೋರೂಪನ
ಕನಕಾಂಬರಧರ ಕೌಸ್ತುಭಹಾರನ ॥ ಕಂಡೆ ॥

ನಖದೊಳು ಶಕ್ರನ ಮುಖದೊಳು ಬ್ರಹ್ಮನ
ಶಿಖಿಯೊಳು ತಾರಾಗಣಧರನ
ರೋಮರೋಮದಲಿ ಭೂತಲ ಪಾತಾಳ
ನಾಭಿಯ ಸುಳಿಯಲಿ ನಭವಿರಿಸಿದನ ॥ ಕಂಡೆ ॥

ವ್ಯೋಮ ವ್ಯಾಪಿಯ ನಾ ಕಂಡೆ
ವಿಶ್ವದೇಹಿ ವಿಶ್ವಾತ್ಮನ ಕಂಡೆ
ವಿಶ್ವಮೋಹಿ ವಿಶ್ವೇಶನ ಕಂಡೆ
ವಿಶ್ವತೋ ಚಕ್ಷು ವಿಶ್ವತೋ ಬಾಹು
ವಿಶ್ವತೋ ಪಾದ ಭಗವಂತನ ॥ ಕಂಡೆ ॥

ಸಿರಿ ಲೋಲ ಗಿರಿಧರನ ಶ್ರೀಹರಿಯ ಕಂಡೆ
ಪರಮ ಪುರುಷೋತ್ತಮನ ಸತ್ಯಸೂರ್ಯನ ಕಂಡೆ
ನಿತ್ಯ ಸತ್ಯನ ಕಂಡೆ ನಾರಾಯಣನ ಕಂಡೆ ॥

ಕಂಡೆ ಹರಿಯ ಕಂಡೆ
ದೇವಾಧಿದೇವನ ದಿವ್ಯ ಪ್ರಭಾವನ
ಕಂಡೇ ಹರಿಯ ಕಂಡೇ ॥

(ತ್ರಿವಿಕ್ರಮ ರೂಪದ ಭೂಮಚಿತ್ರ)

ಬಲಿ : ವಿಂಧ್ಯಾವಳಿ,
ಗಗನ ಮಂಡಲವಳೆದ ಶ್ರೀಹರಿಯ ಪಾದವನು
ದೇವತೆಗಳೊಡವೆವರೆದು ತೀರ್ಥದಲಿ ತೊಳೆಯೆ

ದೇವಗಂಗೆಯು ಜನಿಸಿ ಭೋರ್ಗರೆದು ಹರಿದಿಹಳು
ನೋಡು ನೋಡದೋ ದೇವಿ ಪುಣ್ಯಗಂಗೋತ್ರಿ !

ವಿಂಧ್ಯಾ : ಗಂಗೆಯಲಿ ಮಿಂದಿಹೆವು ಮಂದಾರ ಮುಡಿದಿಹೆವು
ವಾಮನನ ರೂಪದಲಿ ಉದ್ಧರಿಸ ಬಂದಿಹನು
ಹೃದಯ ಮಂದಿರದಲ್ಲಿ ಬಂಧಿಸಿಹೆವು
ಸ್ವಾಮಿ, ಎರಡು ಪಾದಗಳಲ್ಲಿ ಭೂವ್ಯೋಮವಾಯ್ತು
ಮೂರನೆಯ ಶ್ರೀಪಾದಕೆಡೆಯೆಲ್ಲಿದೆ ?

ಬಲಿ : ಇಲ್ಲಿದೆ ! ....ಇಲ್ಲಿದೆ ಈ ಬಲಿಯ ಮುಡಿಯಲ್ಲಿದೆ !

ವಿಂಧ್ಯಾ : ಹ್ಹಾ !

ಬಲಿ : ವಿಶ್ವಾಂತರಾಳದಾ ಓ ದಿವ್ಯಾ ಚೇತನವೆ
ನನ್ನ ನೆತ್ತಿಯ ಮೆಟ್ಟು
ತುಳೀ ತುಳೀ ತುಳಿ
ಹತ್ತಿ ತುಳೀ, ಒತ್ತಿ ತುಳೀ !
ನಾನು ಎಂಬುದಳಿಯಲಿ
ನೀನು ಮಾತ್ರ ಉಳಿಯಲಿ
ಕವಿಯ ವಾಣಿ ನಿಲ್ಲಲಿ !

(ಬಲಿಯ ತಲೆಯ ಮೇಲೆ ವಾಮನ ಮೂರ್ತಿ ಪಾದವಿರಿಸುವನು ಬಲಿ ಪಾದವನ್ನಪ್ಪಿ ಆನಂದ ಪುಲಕಿತನಾಗುವನು)

ಮೇಳ : ನೆತ್ತಿಯ ಮೆಟ್ಟಿದನೊ
ಶ್ರೀಹರಿ
ನೆತ್ತಿಯ ಮೆಟ್ಟಿದನೋ ॥
ವಾಮನ ರೂಪದಿ ದಾನವ ಬೇಡಿ
ಮೂರಡಿ ನೆಲವನು ನಡೆಮುಡಿಮಾಡಿ
ದಿವ್ಯಾಮೋದದಿ ದಿವದೆಡೆ ಬೆಳೆದು
ಭೂವ್ಯೋಮಂಗಳ ಎರಡಡಿ ಅಳೆದು
ಮೂರನೆಯಡಿಯಲಿ ಬಲಿಯನು ತುಳಿದು
ಮೆಟ್ಟಿದನೋ ಶ್ರೀ ಹರಿ
ನೆತ್ತಿಯ ಮೆಟ್ಟಿದನೋ ॥

ವಾಮನ : ಧನ್ಯಕ್ರಿ ನೀ ಬಲಿಚಕ್ರಿ
ಧನ್ಯನೈ ನೀನು
ನೀನಿರುವೆ ಭಕ್ತಿಮೇರು
ಸದ್ಭಾವ ಶತ ಶೃಂಗ !
ಬಲಿಚಕ್ರವರ್ತಿ,
ನಾನೆಷ್ಟು ತುಳಿದೆ ನೋ
ನೀನಷ್ಟು ಬೆಳೆದಿರುವೆ !
ಲೋಗರಿಗೆ ಪೂಜ್ಯನಾದೆ !

ಆಶ್ವಯುಜ ಶುದ್ಧದಲಿ
ಪಾಡ್ಯಮಿಯ ದಿನದಂದು
ಜನ ನಿನ್ನ ಸ್ಮರಿಸುತ್ತ ಹಬ್ಬವಾಚರಿಸಲಿ !
ಸತ್ಯವ್ರತ, ಮುಂದೆ ಬಹ ಸಾವರ್ಣಿ
ಮನ್ವಂತರದಲಂದು ನಿನಗೆ ದೇವೇಂದ್ರ ಪಟ್ಟ
ಅದುವರೆಗೆ 'ಸುತಲ' ದಡಿ ಲೋಕದಲಿ
ಪ್ರಭುವಾಗಿ ಬಾಳು ಬದುಕು !

ಬಲಿಚಕ್ರವರ್ತಿ, ಇಂದಿನಿಂ ನೀನಾದೆ
ಸಪ್ತ ಚಿರಂಜೀವಿಗಳಲೊಬ್ಬ ಚಿರಂಜೀವ !

ಶುಭವಿರಲಿ
ಗೆಲವಿರಲಿ
ಮಂಗಳವು ಕೂಡಿರಲಿ
ಲೋಕ ಕಲ್ಯಾಣವಿದು
ನಿತ್ಯವಿರಲಿ !

ಮೇಳ : (ಹಾಡಿನೊಡನೆ ಎಲ್ಲರೂ ನರ್ತಿಸುವರು)

ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯ ಜಯ ಗೀತಾಂಜಲಿ

ಆಶ್ವೀಜದ ಈ ಪ್ರತಿಪದೆಯಂದು
ಶ್ರೀಹರಿ ಭಕುತನ ನೆನೆನೆನೆದು
ಬಲಿಯನು ಪೂಜಿಸಿ ಒಲಿಸುವ ದೈವವ
ದೀವಳಿಗೆಯ ಈ ಜ್ಯೋತಿವೊಲು ॥

**ಶುಭಂ**

# ರೇಣುಕ ಪರಂಜ್ಯೋತಿ

## ಪಾತ್ರವರ್ಗ

**ಶಿವ**

**ಗಿರಿಜೆ**

**ರೇಣುಕರು**

**ಅಗಸ್ತ್ಯ**

**ವಿಭೀಷಣ**

**ಮಾತಂಗ**

**ಮಾತಂಗಿ**

**ಹಾಗೂ–ಸತ್ಯಂ, ಶಿವಂ, ಸುಂದರಂ, ಉಷೆ, ನಿಶೆ, ಸೂರ್ಯ, ಚಂದ್ರ, ಇಂದ್ರ, ಭೂದೇವಿ, ಪೂಷನ್, ಮರುತ, ಪುರುಷ, ರುದ್ರ, ಭದ್ರೆ, ನಿವೇದಕರು, ಇತ್ಯಾದಿ–**

ಮೊದಲು ಪ್ರದರ್ಶಿಸಿದವರು : **ಸಂಗೀತ ಭಾರತಿ ಕಲಾವಿದರು**

ವಿಜಯನಗರ, ಬೆಂಗಳೂರು,

ಸಂಗೀತ ನಿರ್ದೇಶನ ಮತ್ತು ಹಿನ್ನೆಲೆ ಗಾಯನ :

**ವಿದ್ವಾನ್ ಶ್ರೀ ಎಸ್.ಆರ್.ಆರಾಧ್ಯ ಮತ್ತು ಹೇಮಂತ**

ನೃತ್ಯ ನಿರ್ದೇಶನ :

**ಸಂಗೀತ ವಿದುಷಿ ಮತ್ತು ಭರತನಾಟ್ಯ ಪ್ರವೀಣೆ, ನಾಟ್ಯ ಸರಸ್ವತಿ ಬಿ.ಆರ್. ಮಂಜುಳಾ ಪರಮೇಶ್, ಎಂ.ಎ**

# ಪ್ರಸ್ತಾವನೆ

ಜಗದ್ರಂಗದಲ್ಲಿ ಧರ್ಮ ಸಂಸ್ಥಾಪನೆ ಆದದ್ದು ರಾಜದಂಡವಿಡಿದವರಿಂದಲ್ಲ, ಯೋಗದಂಡ ಹಿಡಿದವರಿಂದ. ಸಂಸ್ಕೃತಿಯ ಸಂರಕ್ಷಣೆ ಮತ್ತು ಸಂವರ್ಧನೆಯಲ್ಲೂ ಅವರದು ಸಿಂಹಪಾಲು. ಸನಾತನ ಭಾರತೀಯ ಸಂಸ್ಕೃತಿಯ ಸಂದರ್ಭದಲ್ಲಿ ಋಷಿ ಮುನಿಗಳ ಪಾತ್ರ ತುಂಬಾ ಮಹತ್ವದ್ದು. ಮಾನವನ ಬದುಕು ಬಂಗಾರವಾಗಲೆಂದು ಸಂಹಿತೆಗಳನ್ನು ಸೃಷ್ಟಿಸಿದ್ದುಂಟು, ಶಿವತತ್ತ್ವಗಳನ್ನು ಸಂವಹಿಸಿದ್ದುಂಟು. ಲೋಕ ಕಲ್ಯಾಣಕ್ಕಾಗಿ ಅವಿಶ್ರಾಂತವಾಗಿ ದುಡಿದ ದಾರ್ಶನಿಕರ ವಿರಳ ಪಂಕ್ತಿಯಲ್ಲಿ ಬರುವ ಮೊದಲ ಹೆಸರು ಜಗದ್ಗುರು ರೇಣುಕ ಭಗವತ್ಪಾದರದು.

ಜಗದಾಚಾರ್ಯರಾದ ಶ್ರೀ ರೇಣುಕರು ಯುಗಯುಗಕ್ಕೂ ಅವತಾರವೆತ್ತುವರೆಂದು ಪ್ರತೀತಿ. ಅವತಾರವೆತ್ತ ಮಾತ್ರದಿಂದಲೇ ಅವರು ಮಹಾತ್ಮರೆನಿಸಿಲ್ಲ. ಅವರು ಮನುಕುಲಕ್ಕೆ ಸಲ್ಲಿಸಿದ ನಿರಂತರ ಸೇವೆಯಿಂದಾಗಿ ಶ್ರೇಷ್ಠರೆನಿಸಿದ್ದಾರೆ. ಸದ್ಯೋಜಾತ ಮುಖೋದ್ಭುತರಾಗಿದ್ದರೂ ಮರ್ತ್ಯವನ್ನು ಮರೆತವರಲ್ಲ. ಸದಾ ಲೋಕಸಂಗ್ರಹ ಕಾರ್ಯದಲ್ಲಿ ನಿರತರಾಗಿದ್ದ ಅವರು ಅಸ್ಪೃಶ್ಯರೆನಿಸಿದ್ದ ಅಗಸ್ತ್ಯರ ಉದ್ಧಾರ, ಹೆದ್ದಾರಿ ದರೋಡೆಕೋರ ಮತಂಗನ ಪರಿವರ್ತನೆಗೈದ ಮಹಾತ್ಮರು.

ಈ ಮಹಾತ್ಮರು ಬಂದು ಹೋಗಿ ಈಗಾಗಲೇ ಅನಂತ ಮನ್ವಂತರಗಳು ಉರುಳಿವೆ. ಆದರೂ ಅವರು ತೋರಿದ ಆದರ್ಶಗಳು, ನೀಡಿದ ಮಾರ್ಗದರ್ಶನಗಳು ನಮ್ಮ ಕಣ್ಣೆದುರಿಗೆ ಇಂದಿಗೂ ಬೆಳಗುತ್ತಿವೆ. ಮಾನವ ಕುಲಕ್ಕೆ ದಾರಿದೀಪಗಳಾಗಿವೆ. ಅವರು ಅವತರಿಸಿದ ದಿನವಾದ ಇಂದು ನಮ್ಮ ಸ್ಮೃತಿಪಟಲದ ಮೇಲೆ ಜಗದ್ಗುರು ಶ್ರೀ ರೇಣುಕಾಚಾರ್ಯರ ಭವ್ಯ ಮಹಾಮೂರ್ತಿಯನ್ನು ಮೂಡಿಸಿಕೊಳ್ಳೋಣ. ಅವರ ಅನುಷ್ಠಾನದ ಒಂದೆರಡು ದೃಶ್ಯಗಳನ್ನು ಈ ನೃತ್ಯರೂಪಕದಲ್ಲಿ ಕಂಡು ಆನಂದಿಸೋಣ. ಆ ಮಹಾಮೂರ್ತಿಯ ದಿವ್ಯ ಜೀವನದ ಪುಣ್ಯ ಸಲಿಲದಲ್ಲಿ ಮಿಂದು ನಾವೂ ಪುನೀತರಾಗೋಣ. (ದೇವದಾರು ತುಂಡುಗಳ ಮೇಲೆ ಅರ್ಧ ನಿಮೀಲಿತ ನೇತ್ರನಾಗಿ ಶಿವ ತಪೋಮಗ್ನನಾಗಿದ್ದಾನೆ. ಅವನಡಿಗೆ ಮುಡಿ ಚಾಚಿ ದೀರ್ಘದಂಡ ನಮಸ್ಕಾರಾತಾರೆಯಾಗಿದ್ದಾಳೆ. ಗಿರಿಜೆ.....ರಂಗದಲ್ಲಿ ನಿಧಾನವಾಗಿ ಪ್ರಭಾತ ಸಮಯದ ಅರುಣ ಕಿರಣವೊಂದು ಎಡೆಯಾಡುತ್ತದೆ. ಕಮಲ ದಳದೆರೆದು ಅರಳಿದಂತೆ ಶಿವೆ ನಿಧಾನವಾಗಿ ಮೇಲೇಳುತ್ತಾಳೆ. ಹಾವಭಾವವಿನ್ಯಾಸಗಳೊಂದಿಗೆ ಅಭಿನಯಿಸತೊಡಗುತ್ತಾಳೆ.)

ಹಾಡು : ಉದಯರಾಗದ ಕೂಡೆ ಹೂವರಳಿ ನಗುವಂತೆ
ಮಡಿಲಿನಲಿ ಪವಡಿಸಿಹ ಹಸುಳೆ ಕಣ್ ತೆರೆವಂತೆ
ಚಂಚು ಸಂಪುಟದೆರೆದು ಕುಕಿಲಿಡುವ ಮರಿಯಂತೆ
ಬನದ ಕಾರಂಜಿಯಲಿ ನೀರನಟಿ ಪುಟಿವಂತೆ
ಏಳು ಗಂಗಾಧರನೆ, ಏಳು ಗೌರೀವರನೆ
ಏಳು ಮಂಗಳಕರನೆ ಏಳಯ್ಯಾ ಏಳೋ !
(ಢಣ್ ಎಂದು ಘಂಟಾನಾದ)
ಚಂದ್ರಚೂಡನೆ ಏಳೊ, ಇಂದ್ರವಂದಿತ ಏಳೊ
ಏಳು ಸರ್ವೇಶ್ವರನೆ ಏಳಯ್ಯಾ ಏಳೊ !
ಢಣ್ ಎಂದು ಘಂಟಾನಾದ)

ಕ್ಷಿತಿಯಲಾಯಿತು ಕ್ಷತಿಯು ಮಾನವನ ಧರ್ಮಕ್ಕೆ
ವಂಚನೆಯ ಮಂಚದಲಿ ಸಂಚು ನಡೆದಿದೆ ಶಿವನೆ
ಅನ್ನ ಹಸಿದಿದೆ ಅಲ್ಲಿ, ನೀರು ಬಾಯಾರಿಹುದು
ದ್ರೋಹದುರ್ಗವನುಡಿಯೆ ಮೇಲೇಳು ತಂದೆ !
(ಢಂ ಢಮ ಢಮ ಢಂ ಎಂದು ನಗಾರಿ ನಾದ)
ಸತ್ಯತೆಯ ಉತ್ಥಾನ ಆಗಬೇಕಿದೆ ಸ್ಥಾಣು
ರುಚಿ ಬೆರೆದ ಮಾನವತೆ ಮೆರೆಯಬೇಕಿದೆ ಧೇನು !
ಅವತರಿಸು, ಅವತರಿಸು ನೀನೆ ಆವಿರ್ಭವಿಸು
ಮನುಜ ರೂಪದಿ ಬಂದು ಋಜುಮಾರ್ಗ ತೋರೋ.....!!
(ಚಳ್ ಚಕ್ ಎಂದು ಝಲ್ಲರಿ ಸದ್ದು)

ಏಳು ಜಟೆ ನಿಟಿಲಾಕ್ಷ' ಏಳು ದಿಕ್ತಟ ಘೋಷ !
ಏಳು ಪಟು ಭಟ ನಾಟ್ಯ ನಟನಾಟ ಲೋಲುಪನೆ
(ಚಡಣ್ ಚಡಣ್ ಎಂದು ಚಂಡೆಯ ಧ್ವನಿ)
ಏಳಯ್ಯಾ ಏಳೋ...ಏಳಯ್ಯಾ ಏಳೋ...!

(ಚಂಡೆ ಮುಂದುವರಿಯುವುದು, ಅದರೊಡನೆಯೇ ತಟಧುಂ ತಟಧುಂ...ಧುಂಧುಂ....ಮೃದಂಗನಾದ, ಭೇರಿ, ಜಾಗಟೆ, ಶಂಖ, ಝುಲ್ಲರಿ, ಸಣ್ಣಮೇಳ. ಕರಡಿವಾದ್ಯ.....ಇವೇ ಮೊದಲಾದ ವಾದ್ಯ ವಿಶೇಷಗಳ ಪ್ರಚಂಡ ನಿರ್ಘೋಷ ! ಈ ಮಹಾಘೋಷ ಕ್ಷೀಣಿಸುತ್ತಿದ್ದಂತೆಯೇ ನಿಶೆಯ ಗರ್ಭದಿಂದೆದ್ದ ಜ್ಯೋತಿ ಕಿರಣದಂತೆ ತುಂಬು ಗಂಭೀರದ ಕಂಠವೊಂದು ಶಬ್ಧಗಳನ್ನು ಪುಟಿಯಿಸುತ್ತದೆ)

ವಚನ : ಭೂಲೋಕದ ಆರ್ತನಾದವೇ ವಾರ್ತೆಯಾಯಿತು !
ತಪೋಮಗ್ನನಾದ ಪರಶಿವನು ಕಣ್ ತೆರೆದನು ;
ಕೋಪಾಗ್ನಿ ಭುಗಿಲ್ ಎಂದು ಹತ್ತಿ ಹೊಗೆಯಾಡಿತು
ಅವನ ಕಣ್ಣುಗಳಲ್ಲಿ ಕಡಲುಗಳು ಉರುಳಿದುವು.
ಕೆಂಡದುಂಡೆಗಳು ಹಾರಿ ಹಾರಿ ಬಿದ್ದುವು !
ಶಿವ ಅಂದು ಸಾಕ್ಷಾತ್ ರುದ್ರನೇ ಆದ !
ಆತ್ಮರತನಾಗಿದ್ದ ಪರಮೇಶ್ವರನು
ತನ್ನ ತಪೋಮುದ್ರೆಯನ್ನೊಡೆದು
ವೇದಿಕೆಯಿಂದ ಕೆಳಕ್ಕೆ ಹಾರಿದ !
ಪಾರ್ವತಿ ಹೌಹಾರಿದಳು; ದೂರ ಸರಿದಳು ;
ಶಿವತಾಂಡವ ದಕ್ಷಯಜ್ಞ ಸಂದರ್ಭವನ್ನು ಸ್ಮರಣೆಗೆ ತಂದಿತು
(ಟಣ ಟಣ ಟಣ ಚಂಡೆ ; ಶಿವ – ತಾಂಡವ)

ಹಾಡು : ತಾಂಡವ ಮೂರ್ತಿಯ ನೃತ್ಯ ವಿಲಾಸಕೆ
ಭೂಮಿಯು ಗಡಗಡ ನಡ ನಡುಗುತ್ತಿರೆ
ಹೆಜ್ಜೆಯ ಇಟ್ಟೆಡೆ ನೆಲ ನೆಗ್ಗುತ್ತಿರೆ
ದಿಕ್ತಟಗಳು ಪಟಪಟಿಸಿ ಹಾರುತಿರೆ
ತಾರಾಲೋಕವೆ ಪಳಪಳನುದುರಲು
ಸಪ್ತ ಸಾಗರವು ಕೊತಕೊತ ಕುದಿಯಲು
ವಿಳಯ ರುದ್ರನವ ಪ್ರಳಯ ಕಪರ್ದಿಯು
ಭೀಕರ ತಾಂಡವನಾಡಿದನಾಗಳೆ !
ನೆತ್ತಿಯ ಗಂಗೆಯು ತುಳು ತುಳುಕಾಡಲು
ಹಿಮಕರ ಶೀಕರ ಚಂದ್ರಮನುರಿಯಲು
ಜಟಾಪಟಲವನು ಬಿಡದಪ್ಪಳಿಸುತೆ
ಪಟುಭಟನಾರ್ಭಟದಿಂದಲೆ ನಟಿಸಿದ
ಒಂದು ಪದಂ ಪಾತಾಳವನೊತ್ತಲ್
ಒಂದು ಪದಂ ಬ್ರಹ್ಮಾಂಡವನೆತ್ತಲ್
ತೋಂ ತೋಂ ತೋಂ  ತೋಂ ತೋಂ ತೋಂ ಎನುತಂ
ಧೀಂ ಧೀಂ ಧೀಂ ಧೀಂ ಧೀಂ ಧೀಂ ಎನುತಂ
ಕುಂಬರ ಗುಂಡನ ತಾಳಕೆ ಕುಣಿದೊಲು
ತಾಂಡವವಾಡಿದನಾಹಾ ರುದ್ರನು !
ಭೀಕರ ಭೈರವನೋ ಹೋ ಭದ್ರನು !!

ವಚನ : ನೃತ್ಯ ತಾಂಡವಕೆ ಬೆಕ್ಕಸಮುತ್ತು
ಯಾವುದೊ ವಿಲಯ, ಯಾವುದೊ ಪ್ರಲಯ
ವಿಶ್ವನಾಶವದು ತಾ ಶತಸಿದ್ಧ
------ಎಂದು ಶಂಕಿಸಿದಳಾ ಜಗದೀಶ್ವರಿ

ಸಾಂತ್ವನಗೊಳಿದಳೈ ಪರಮೇಶ್ವರಿ !

ಗಿರಿಜೆ : ನಗ್ನವಾಯ್ತು ಜಗ, ಉಗ್ರತೆ ಸಾಕೊ
ಏನು ಬೇಕಿದಿಯೊ ಹೇಳೊ ಕಪರ್ದಿ
ಭಗ್ನಮನೋರಥವಾವುದೊ ಶಂಕರ
ಕಳೆಯೊಂದನು ನಾ ಕಳುಹಲೆ ಶೀಘ್ರ !

ವಚನ : ಶಿವೆಯ ಬೇಡಿಕೆಗೆ ಶಿವ ತೃಪ್ತನಾದ
ಆದರೆ....ಅವಳು ತನ್ನ ಚಿತ್‌ಕಳೆಯನ್ನು ಭೂಲೋಕಕ್ಕೆ
ಕಳುಹಿಸುವ ಅಗತ್ಯ ಇಲ್ಲ ಎಂದ !
ಮತ್ತೆ ಹೊಗಳಿದ....

ಶಿವ : ಶಕ್ತಿ ನೀನು, ಜಗದಾದಿ ಶಕ್ತಿಯು ನೀನು
ಶಿವೆಯು ನೀನು ಪರಶಿವೆಯು ನೀನು
ಹೇ ಜಗನ್ಮಾತೆ,
ನೀರಿನಲ್ಲಿ ತಂಪಾಗಿ, ಗಾಳಿಯಲ್ಲಿ ವೇಗವಾಗಿ,
ಸೂರ್ಯನಲ್ಲಿ ತೇಜಸ್ಸಾಗಿ, ಚಂದ್ರನಲ್ಲಿ ಕಾಂತಿಯಾಗಿ,
ನಕ್ಷತ್ರದಲ್ಲಿ ನಗೆಯಾಗಿ, ಹಕ್ಕಿಯ ಕಂಠದಲ್ಲಿ ಹಾಡಾಗಿ,
ಹೂವಿನಲ್ಲಿ ಪರಿಮಳವಾಗಿ, ಕಲ್ಲಿನಲ್ಲಿ ಘನೀಭೂತವಾಗಿ,
ಎಲ್ಲೆಡೆಯೂ, ಎಲ್ಲದರಲ್ಲೂ, ಅಣುರೇಣು ತೃಣಕಾಷ್ಠದಲ್ಲೂ
ನೂತನ ಚೇತನವಾಗಿ ಸ್ಪಂದಿಸುವ ಶಕ್ತಿ ನೀನು !
ನೀನು ಆದಿಶಕ್ತಿ, ಜಗತ್ ಶಕ್ತಿ, ಪರಾತ್ಪರ ಶಕ್ತಿ !
ಹೇ ಜಗದೀಶ್ವರೀ,
ನಿನ್ನ ಅಗತ್ಯ ಈಗಿಲ್ಲ, ಲೋಕ ಕಲ್ಯಾಣಕ್ಕೆ ನನ್ನಂಶ ಸಾಕು !
ಇದೋ ಇಂದೇ ಭೂಲೋಕದಲ್ಲಿ ಶಿವಮತ ಸ್ಥಾಪನೆಯಾಗಲಿ
ಲಿಂಗರೂಪದಲ್ಲಿ ನಾನು ಎಲ್ಲೆಡೆಯೂ ಉದ್ಭವಿಸುತ್ತೇನೆ
ಭರತ ಖಂಡದಲ್ಲಿ ಶ್ರೀಮದ್ ರಂಭಾಪುರಿ, ಉಜ್ಜಯಿನಿ,
ಶ್ರೀಶೈಲ, ವಾರಣಾಸಿ, ಹಿಮವತ್ಕೇದಾರಗಳಲ್ಲಿ, ದ್ರಾವಿಡ
ದೇಶದಲ್ಲಿ, ಕಳಿಂಗದಲ್ಲಿ ಕರುನಾಡಿನಲ್ಲಿ, ವಂಗ ಭೂಮಿಕೆಯಲ್ಲಿ
ಶ್ರೀಲಂಕೆಯಲ್ಲಿ --- ಜ್ಯೋತಿರ್ಲಿಂಗವಾಗಿ ಮೂಡುತ್ತೇನೆ.
ನನ್ನ ಪಂಚಮುಖಗಳಿಂದ ಅವಿರ್ಭವಿಸಿದವರೇ ಪಂಚಾಚಾರ್ಯರು
ವಿಶ್ವವಿಖ್ಯಾತ ವೀರಶೈವ ಮಹಾಮತ ಸಂಸ್ಥಾಪಕರು ;
ಅವರೇ ಆದಿ ಜಗದ್ಗುರುಗಳು ! ಅವರೇ....ಅವರೇ...
ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ,
ವಿಶ್ವಕರ್ಣರುಗಳು---ಅವರು ಕ್ರಮವಾಗಿ

ಶ್ಲೋಕ : ಸದ್ಯೋಜಾತ ಮುಖಮಾಸೀತ್
ರೇಣುಕಾಚಾರ್ಯಾರಾಧ್ಯ ಉದ್ಭವತಿ ॥
ವಾಮದೇವ ಮುಖಮಾಸೀತ್
ದಾರುಕಾಚಾರ್ಯಾರಾಧ್ಯ ಉದ್ಭವತಿ ॥
ಅಘೋರ ಮುಖಮಾಸೀತ್
ಘಂಟಾಕರ್ಣ ಗಣೇಶಾರಾಧ್ಯ ಉದ್ಭವತಿ ॥
ಈಶಾನ ಮುಖಮಾಸೀತ್
ವಿಶ್ವಕಣ ಗಣೇಶಾರಾಧ್ಯ ಉದ್ಭವತಿ ॥
ತತ್ಪುರುಷ ಮುಖಮಾಸೀತ್ ॥
ವಿಶ್ವೇಶ್ವರಾರಾಧ್ಯ ಉದ್ಭವತಿ

(ಹಾಡು ಹರಿಯುವಾಗ ಶಿವ ಪಾರ್ವತಿಯರ ನರ್ತನ ನಡೆಯುವುದು)

ಹಾಡು : (ಲಾಸ್ಯ) : ಶಾಂತಮೂರ್ತಿ ಶಿವ ಕಾಂತಿಯ ಕಳುಹಿದ
ಲಾಸ್ಯಕೆ ಗಿರಿಜೆಯ ತಾ ಭರಸೆಳೆದ ॥
ಶಿವ–ಶಿವೆಯರುಗಳ ಮೋಹಕ ನೃತ್ಯ
ತ್ರಿಜಗನ್ಮಾತಾಪಿತರುಚಿ ನರ್ತನ !
ತೋಳು ತೋಳು ಸೆರೆಹಿಡಿಯಲು ಎಲ್ಲೆಡೆ
ನೇಹವೆ ರೂಹಾಯಿತು ಅಡಿ ಇಟ್ಟೆಡೆ
ತ್ರಿ ಜಗದ್ಗುರು ರೇಣುಕಾರ್ಯರನು ।
ಬುವಿಗೆ ಕಳುಹಿ ತಾವ್ ಗಿರಿಗೈದಿದರು
ಶಿವಶಿವೆಯರು ಕೈಲಾಸ ಸೇರಿದರು.

ದೃಶ್ಯ 2

(ಕತ್ತಲಾದ ರಂಗದ ಮೇಲೆ ಹರಿದು ಬಂದ Spot – Light ಒಂದು, ಮುಗಿದ ಕೈಯವರಾಗಿ ನಿಂತಿರುವ ಸತ್ಯಂ ಶಿವಂ ,ಸುಂದರಂರನ್ನು ಕ್ರಮವಾಗಿ ಹುಡುಕಿ ಪ್ರದರ್ಶಿಸುತ್ತದೆ ತನ್ನ ನಸುಕು ಬೆಳಕು ಚೆಲ್ಲಿ–ಮೂವರೂ ಸ್ತ್ರೀ ರೂಪಧಾರಿಣಿಯರು Spot – Light ಮಾತನಾಡುವವರ ಮೇಲೆ ಅನುಕ್ರಮವಾಗಿ ಬೀರುತ್ತಿರಬೇಕು)

ಶಿವಂ : ವಸ್ತುತಃ ಶಿವಮಯೇ ಹೃದಿಸ್ಫುಟಂ
ಸರ್ವತಃ ಶಿವಮಯಂ ವಿರಾಜತೇ ॥

ಸತ್ಯಂ : ದಿಟಂ, ದೃಷ್ಟಿಯವೊಲಾಯ್ತದು ಸೃಷ್ಟಿ !

ಸುಂದರಂ : ಚಿರಂ ಲಭ್ಯತೇ ರಸಸಿದ್ಧಿ,
ತೃಷಿತಾತ್ಮಕನವರತ ಅಮೃತಾಂಶು ಸುಧುರಂ ॥

ಒಬ್ಬೊಬ್ಬರಾಗಿ : ಸತ್ಯಂ
ಶಿವಂ
ಸುಂದರಂ

ಒಟ್ಟಿಗೆ : ಸಚ್ಚಿದಾನಂದಂ ! ಸಚ್ಚಿದಾನಂದಂ !
ಓಂ ಸಚ್ಚಿದಾನಂದಂ !

(ಒಬ್ಬೊಬ್ಬರಾಗಿ ಸತ್ಯಂ ಶಿವಂ ಸುಂದರಂ ಎಂದು ಒಂದೆರಡು ಬಾರಿ ಉಚ್ಚರಿಸುವರು. Spot – Light ಕ್ರಮವಾಗಿ ಅವರ ಮೇಲೆ ಬೆಳಕು ಚೆಲ್ಲುತ್ತಿರಬೇಕು. ಅನಂತರ ಒಂದೊಂದು ಕ್ರಮವಾಗಿ ನರ್ತನ ಆರಂಭಿಸುತ್ತವೆ)

ಸತ್ಯಂ : ನಾ ಸತ್ಯ ಸತ್ಯ ನಾ ನಿತ್ಯ ಸತ್ಯವು ನಾನು
ಋತ ಚಿತ್ತದಚ್ಚರಿಯ ವೀಕ್ಷಿಸುವ ಸಾಕ್ಷಿ
ನಾ ಸತ್ಯ ನಾ ಸತ್ಯ ನಾನೆ ಸತ್ಯ

ಶಿವಂ : (ಅದೇ Spot – Light ಇವಳ ಮುಖದ ಮೇಲೆ ಬೀಳುವುದು)
ಶಿವ ನಾನು ನಾನು ಶಿವ ಮಂಗಳದ ಅಂಗಳವು
ಧವಳ ದೀಧೀತಿಗೆತ್ತ ಶುದ್ಧ ಸತ್ವ
ನಾನೆ ಶಿವ ನಾನೆ ಶಿವ ನಾನೆ ಶಿವವು !

(Spot – Light ಸುಂದರದ ಮೇಲೆ ಹರಿವುದು)

ಸುಂದರಂ : ನಾನೆ ಸುಂದರ ಶಕ್ತಿ ಬಂಧಾನುರಕ್ತಿ
ವಿಶ್ರಾಂತರಾಳದಾ ಸೌಂದರ್ಯ ಸಾಕಾರೆ
ನಾನೆ ಸುಂದರ ಶಕ್ತಿ, ಸೌಂದರ್ಯ ಶಕ್ತಿ ನಾನು !

(ಹಿನ್ನೆಲೆಯಲ್ಲಿ ಗಂಭೀರವಾಣಿ : ಸತ್ಯಂ ! ಶಿವಂ ! ಸುಂದರಂ ! ಬೆಳಕು ಕ್ರಮವಾಗಿ ಮೂವರ ಮೇಲೂ ಉಚ್ಚರಿಸಿದಂತೆ ಪಸರಿಸುತ್ತದೆ)

ಹಾಡು : ಸತ್ಯ ಶಿವಂ ಸುಂದರಂ
ಸತ್ಯ ಶಿವಂ ಸುಂದರಂ
ಉಷೆ ನಿಶೆಯರಾಸ್ಯದಲಿ ಶಶಿಸೂರ್ಯರೆದೆಯಲ್ಲಿ
ನಕ್ಷತ್ರ ವಕ್ಷದಲಿ ನೀಹಾರಿಕಾತ್ಮದಲಿ ॥

ಸತ್ಯಂ ಶಿವಂ ಸುಂದರಂ
ಸತ್ಯಂ ಶಿವಂ ಸುಂದರಂ
ನೀರಿನಲಿ ನೆಲದಲ್ಲಿ ಅನಿಲ ದ್ರವ್ಯಗಳಲ್ಲಿ
ಅಲ್ಲಿ ಇಲ್ಲಿ ಮತ್ತೆ ಕತ್ತೆತ್ತಿದೆಡೆಯಲ್ಲಿ ॥
ಸತ್ಯಂ ಶಿವಂ ಸುಂದರಂ
ಸತ್ಯಂ ಶಿವಂ ಸುಂದರಂ
ವಿಶ್ವವರ್ಧನೆಯಲ್ಲಿ ವೈಶಿಷ್ಟ್ಯವಿರುವಲ್ಲಿ
ಕವಿಯೆದೆಯ ಗುಡಿಯಲ್ಲಿ ಕಾಣ್ಕೆ ಕನಸುಗಳಲ್ಲಿ.
ಸತ್ಯಂ ಶಿವಂ ಸುಂದರಂ
ಸತ್ಯಂ ಶಿವಂ ಸುಂದರಂ

ಮೂವರೂ : ಸೃಷ್ಟಿ ಸ್ಥಿತಿಲಯಕಾರದಧಿಕಾರ ವಹಿಸಿರುವ
ಬ್ರಹ್ಮ ವಿಷ್ಣು ಮಹೇಶ ರೂಪಿಗಳು ನಾವು !
ತ್ರೈಲೋಕ್ಯ ವ್ಯಾಪಕರು ತ್ರೈಕಾಲ ಜಾಗ್ರತರು
ತೃಪ್ತಿ ಶಮೆ ದಮೆ ಶಾಂತಿ ಬಿತ್ತರಿಪೆವು
ಸತ್ಯಂ ಶಿವಂ ಸುಂದರಂ
ಸತ್ಯಂ ಶಿವಂ ಸುಂದರಂ

ಮೂವರೂ : ಆ ಕಾರ ಉ ಕಾರ ಮ ಕಾರಗಳು ಕೂಡಿ
ಓಂ ಕಾರ ರೂಪಿಗಳು ನಾವ್ ಮೂವರು !

ಹಿನ್ನೆಲೆ (ಶ್ಲೋಕ)
ಓ ಕಾರ ಬಿಂದು ಸಂಯುಕ್ತಂ ನಿತ್ಯಂ ಧ್ಯಾನಂತಿ ಯೋಗಿನಃ
ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋ ನಮಃ ॥

ಮೂವರೂ : ಸತ್ಯ ಶಿವ ಸೌಂದರ್ಯದಧಿದೇವಿಯರು ನಾವು
ನಿತ್ಯ ನವ ನೂನ್ನತೆಯ ಬಿತ್ತರಿಪೆವು
ಹೂವಲ್ಲಿ ಹುಲ್ಲಿನಲಿ ಚಿಗುರು ಚಂದನದಲ್ಲಿ
ಚೈತನ್ಯ ಚಿಲುಮೆಯನು ಪುಟಿಯಿಸುವೆವು !

ಸತ್ಯಂ : ತಿರೆಗಿಂದು ಹೊಸ ಒಸಗೆ ತ್ರಿದಶರಿಗೆ ರಸೆ ಬೆಸುಗೆ
ಆದಿ ರೇಣುಕರಿಂದು ಅವತರಿಪರು
ಸತ್ಯ ಸಾಕ್ಷಾತ್ಕಾರ ಆಗಲಿದೆ ಅವರಿಂದೆ
ಅಲ್ಪತೆಯ ಅಳಿದು ತಾ ಕಲ್ಪ ನಿಲ್ಲುವುದು !

ಸುಂದರಂ : ವಿಶ್ವ ನೈಸರ್ಗಕ್ಕೆ ಹೊಸ ಹರೆಯ ಹೊಸ ಹುರುಪು
ಸೃಷ್ಟಿಸೌಂದರ್ಯಕ್ಕೆ ಹೊಸ ನೇತ್ರ ಬಹುದು
ಆದಿಗುರು ರೇಣುಕರ ಅವತಾರದೋಜೆಯಲಿ
ನವ ನವೋನ್ಮೇಷಶಾಲಿನಿಯಹಳು ಈ ಮೇದಿನಿ !

ಶಿವಂ : ಏಳಿ ಬನ್ನಿರೆ, ನನ್ನ ಸೊಗದ ಸೋದರಿಯರೇ
ವಿಶ್ವದಣುರೇಣುಗಳನೆಚ್ಚರಿಸುವಾ
ಮನುಜರಿಗೆ ದಿವಿಜರಿಗೆ ರೇಣುಕ ಜ್ಯೋತಿಗಳ
ಅವತಾರದಚ್ಚರಿಯ ನಾವು ಘೋಷಿಸುವ !

ಮೂವರೂ : (ನರ್ತಿಸುತ್ತಾ) :
ಬನ್ನಿ ಓ ಗೆಳತಿಯರೆ ಆಡೋಣ ಬನ್ನಿ
ನಿತ್ಯ ಬಾಳಿನ ರಾಗ ಹಾಡೋಣ ಬನ್ನಿ ॥
ವೀಣೆಯಿಂಚರದಂತೆ ಕಣಿಯಾಗಿ ಬನ್ನಿ
ಕಿಂಕಿಣಿಯ ಝಣ ಝಣಕೆ ಕಣವಾಗಿ ಬನ್ನಿ
ಬೆಳಗಿನೊಲು ಬೆಳಬೆಳಗಿ ಹೊಳೆ ಹರಿದು ಬನ್ನಿ

ಚಿಲುಮೆಯೊಲು ಪುಟಿಪುಟಿದು ನರ್ತಿಸುವ ಬನ್ನಿ.   ॥ ಬನ್ನಿ ಓ...॥

ವೀರಶೈವದ ಜ್ಯೋತಿ, ವೀರಶೈವದ ಬೆಳಸು
ಜಗದ ಗುರು ರೇಣುಕರ ಅವತಾರವೆಂದು
ಕೊಲ್ಲಿಪಾಕಿಯ ಲಿಂಗದಿಂದುದಿಸಿ ಬಹರೆಂದು
ವಿಶ್ವ ಧರ್ಮವನಿಂದೆ ಸಾರುವರು ಎಂದು
ಬನ್ನಿ ಓ ಗೆಳತಿಯರೆ ಆಡೋಣ ಬನ್ನಿ
ನಿತ್ಯ ಬಾಳಿನ ರಾಗ ಹಾಡೋಣ ಬನ್ನಿ ॥   ಬನ್ನಿ ಓ...॥

**ದೃಶ್ಯ–3**

**ದ್ಯುಃ ಲೋಕ**

ಇದೊಂದು ಭವ್ಯತಮ ದೃಶ್ಯ – ರಂಗದ ವಿಶಾಲ ವಕ್ಷದಲ್ಲಿ ಅಲ್ಲಲ್ಲಿ ನಿರ್ದೇಶಿತ ಸ್ಥಾನಗಳಲ್ಲಿ ದೇವಾಧಿದೇವತೆಗಳು ಉಪಸ್ಥಿತರಿರುತ್ತಾರೆ.

–ನಕ್ಷತ್ರ ಮಂಡಲದ ನಭೋ ವೈಭವ ಹಿನ್ನೆಲೆಯಲ್ಲಿ – ರಂಗಸಜ್ಜಿಕೆ ವಿನೂತನ ವಿಶಿಷ್ಟ ಹಾಗೂ – ಭವ್ಯತೆಗೆ ಸಾಕ್ಷಿಯಾಗಿರಬೇಕು–

ರಂಗದಿಕ್ಕೆಲಗಳಲ್ಲಿ ಉಷೆ – ಸೂರ್ಯ, ನಿಶೆ–ಚಂದ್ರ, ಲಕ್ಷ್ಮಿ – ವಿಷ್ಣು ಸರಸ್ವತಿ – ಬ್ರಹ್ಮ ಇವರ ಜೋಡಿಗಳು. ಮಧ್ಯದಲ್ಲಿ ದೇವೇಂದ್ರನ ಒಡ್ಡೋಲಗ ; ಇಂದ್ರ – ಇಂದ್ರಾಣಿಯರು, ನರ್ತಕಿಯರು ಇತ್ಯಾದಿ, ಅವರ ಹಿಂದೆ ತುಸು ಎತ್ತರದಲ್ಲಿ ಭೂದೇವಿಯು ಸುತ್ತುತ್ತಿರುವ ಗೋಳದ ಮುಂದೆ ಭಾವಭಂಗಿಯಲ್ಲಿ ನಿಂತಿದ್ದಾಳೆ ಅವಳ ತಲೆಯಮೇಲ್ಬಾಗದ ಅಟ್ಟಣೆಯಲ್ಲಿ ರುದ್ರ – ಭದ್ರೆ (ಭದ್ರಕಾಳಿ)ಯರು ; ಅವರಾಚೆಗಿನ ಅತ್ಯುನ್ನತ ಸ್ತರದಲ್ಲಿ "ಪುರುಷ"– ಅವನೇ ಋತ !

ಆ ನಭೋಂಗಣದ ಎಲ್ಲೆಡೆಯಲ್ಲೂ ಅಲ್ಲಲ್ಲಿ ಅಗ್ನಿ ವರುಣ, ಮರುತ, ಪೂಷನ್ ಮೊದಲಾದ ದ್ಯುಃಲೋಕದ ದೇವತೆಗಳು ಹಾಗೂ ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಚಾಮುಂಡಾ – ಮೊದಲಾದ ಸಪ್ತ ಮಾತೃಕೆಯರು.

ರಂಗ ಕತ್ತಲಲ್ಲಿರುತ್ತದೆ – Spot – Light ಕರೆತಂದಂತೆ ಆಗಮಿಸುತ್ತಾರೆ ಸತ್ಯಂ ಶಿವಂ ಸುಂದರಂ

ಮೂವರೂ : ಏಳಿ ಓ ಎದ್ದೇಳಿ, ಓ ವಿಶ್ವ ಚೇತನಗಳೇ
ಶಿವನ ಸಂದೇಶವನು ನಿಮಗರುಹುತಿಹೆವೇಳಿ
ಏಳಿ ಓ ಎದ್ದೇಳಿ, ಓ ವಿಶ್ವ ಚೇತನಗಳೇ ॥
ಜಗದ ಗುರು ರೇಣುಕರು ಜಗದಾದಿ ವಂದಿತರು
ಇಳೆಗಿಳಿದು ಬರುತಿಹರು ಕಲ್ಯಾಣವೆಸಗುವರು
ವೀರಶೈವದ ವಿಶ್ವ ಧರ್ಮವನು ನೆಲೆಗೊಳಿಸಿ
ವಿಶ್ವಾತ್ಮರಾಗುವರು ವಿಶ್ವಪೂಜಕರು
ಏಳಿ ಓ ಎದ್ದೇಳಿ ಓ ವಿಶ್ವ ಚೇತನಗಳೇ ॥

(ಸೂರ್ಯ – ಉಷೆಯರೆಡೆಗೆ ಬಂದು)
ಆದಿತ್ಯ, ದಿನದೇವ, ಓಂಜ್ಞಾನ ನಿಧಿಯೆ
ಛಾಯೆಯೊಡನಿದ್ದರೂ ಮಾಯೆಗೊಳಗಾಗದಿಹೆ
ಹೊಂದೇರನೇರಿ ನೀಂ ಅರುಣನೊಡಬರುವೆ
ಓ ಜಗಚ್ಚಕ್ಷು !
ಶಿವನ ಸಂದೇಶವನು ಸಾರುವೆವು ಕೇಳು,
ಕೋಟಿ ಸೂರ್ಯರ ತೇಜ, ರೇಣುಕ ಪರಂಜ್ಯೋತಿ
ಉದಯಿಪುದು ಧರೆಗಿಂದು ವಿಶ್ವ ಕಲ್ಯಾಣಕೆ ॥
(ತಾಳ ಮೇಳಗಳೊಡನೆ ಚಣಕಾಲ ನರ್ತನ)
– ಅನಂತರ ಉಷೆಯನ್ನುದ್ದೇಶಿಸಿ –
ದಿವಾ ಪುತ್ರಿ, ಭದ್ರ ಕನ್ನೆ
ಸ್ನಾತ ಶುಭ್ರಗಾತ್ರಾನ್ವಿತೆ

ಅಮಿತ ತೇಜೆ, ಆಗ್ನಿ ಸ್ನಾತೆ
ಓ ಉಷೆ, ಓ ಬೆಳಕಿನಂಗೆನೆಯೆ
ದಿವ್ಯ ಜ್ಯೋತಿಮಯಳೆ, ಓ ಆಶ್ಚರ್ಯರೂಪಿಣಿಯೆ
ಸತ್ಯ ಸಂವರ್ಧನೆಯೆ, ಸ್ಫೂರ್ತಿದಾಯಕಿಯೇ !
ಮತ್ತೆ ಮತ್ತುದಯಿಸುವ ಓ ಚಿರಂತನ ಕನ್ಯೆ
ಸಮ ವರ್ಣದಲಿ ಎಂದೂ ಶೋಭಿಸುವಳೆ
ದ್ಯೂತ ಚತುರನು ಜನರ ಧನವ ಸೆಳೆವಂದದಲಿ
ಮರ್ತ್ಯರಾಯುಸ್ಸನ್ನು ಸವೆಸುವವಳೆ !
ನಲ್‌ನಿಶೆಯ ಗರ್ಭದಿಂದೊಡಮೂಡಿ ಬರುವವಳೆ
ಹೊಸ ಹಸೆಯ ಮಣಿ ಏರಿ ನಗುವ ನವ ವಧುವೆ
ಓ ಉಷಾದೇವಿಯೇ ನೀನು ಧನ್ಯೆ, ನೀನಮರ ಮಾನ್ಯೆ
ಅಮಿತ ಕಾಂತಿಯ ಬೀದಿ ಆಗಮಿಸು ತಾಯೆ !
ತಿರೆಗಿಳಿವ ತೇಜಸ್ಸು ಜಗದ ಗುರು ರೇಣುಕರು
ಅವರನೋಲಗಿಸಲಿಕೆ ಇಳಿದು ಬಾ ದೇವಿ
ನಿತ್ಯನೂತ್ನತೆಯಿತ್ತು ಓಲಗಿಸು ಬಾರಾ !
ಚಿತ್ರಾಂಬರಾಧಾರಿ ಓ ದಿವ್ಯ ನರ್ತಕಿಯೆ
ನಿತ್ಯ ನೃತ್ಯ ವಿಲಾಸದಲ್ಲಿ ಮೈಮರೆಸು
ಜ್ಯೋತಿ ವರ್ಷವ ಬರಿಸು
ರೇಣುಕರ ಮೆರೆಸು !
ಹರಿಕಾರಳಾಗು ಉಷೆ ಜಗಕೆಲ್ಲ ಸಾರಿಬಿಡು
ಜಗದಾತ್ಮ ತೇಜಸ್ಸು ಅವತರಿಪುದೆಂದು
ಹೊಡೆ ಭೇರಿ ತುತ್ತೂರಿ ತೂರ್ಯ ಭೇರಿ
ರೇಣುಕಾರ್ಯರು ಬರುವರೆಂದು ಸಾರಿ !
(ನರ್ತಿಸುತ್ತಲೇ ನಿಶೆ–ಚಂದ್ರರ ಬಳಿ ಸಾರುವರು Spot – Light ಅವರನ್ನೇ ಹಿಂಬಾಲಿಸುವುದು)
ಓ ನಿಶೇ.....ಗಂಭೀರೆ, ಓ ತ್ರಿಯಾಮೇ
ಕದ್ದಿಂಗಳಾದರೂ ಕರಿದೆರೆಯ ಬೀಸಿದರು
ಶಾಂತಿ ತುಂಬಿದ ತವರು ನಿನ್ನ ಮಡಿಲು !
(ಚಂದ್ರನ ಕಡೆ ತಿರುಗಿ)
ಷೋಡಶ ಕಳಾಪೂರ್ಣನಾದ ಓ ಚಂದ್ರ ಮನೆ
ನಿನ್ನೆಲ್ಲ ಕಲೆಗಳನು ರೇಣುಕಗೆ ನೀಡು
ಹಾಲ್ದಿಂಗಳಲಿ ಅದು ತಂಗದಿರ ಸೂಡು
ರೇಣುಕಗೆ ಜಯವಾಗಲೆಂದು ಹಾಡು
ದಾರುಕಗೆ ಜಯವಾಗಲೆಂದು ಹಾಡು ॥
(ಇಂದ್ರನೋಲಗಕ್ಕೆ ಆಗಮನ, ಅಲ್ಲಿ ರಂಭೆ ಊರ್ವಶಿಯರೊಡನೆ ಸತ್ಯಂ ಶಿವಂ ಸುಂದರಂ ನರ್ತನ – ಬೀಜಿಮ್‌ನಲ್ಲಿ – ಅನಂತರ.....)
ಓ ಇಂದ್ರ,
ಇಂದ್ರಾಣಿ ಜೊತೆ ಮೆರೆವ ಹೇ ದಿವ್ಯಮೂರ್ತೇ
ಸಗ್ಗದಿಂ ಬುವಿಗೆ ಬಹ ಜ್ಯೋತಿಗಳ ಕರೆತರುವ
ದಿವ್ಯ ಸಾಧ್ಯನು ನೀನು, ಸಂವಹನ ಬಿಂದು !
ಜ್ವಲಿಸುವಶ್ವವಗಳೇರಿ ಬುವಿಗೆ ಬರುವವನೇ
ಮಿಂಚಿನಲೆಗಳ ಮಾಲೆ ಸೂಡಿ ನಲಿವವನೇ
ಶಕ್ತಿ ಚಲನಗಳಿಂದ ಪೂರ್ಣ ವಿಕಸನದಿಂದ

ತುಂಬು ರೇಣುಕರನ್ನು ತುಂಬು ತಿರೆಯರಳನ್ನು
ತುಂಬು ಬಾರ್ೈ ಇಂದ್ರ ಜಯಸತ್ವಶಾಲಿ !
(ನರ್ತಿಸುತ್ತ ಸುತ್ತುವರಿದು ಭೂದೇವಿಯೆಡೆ ಸಾರಿ)
ಓ ದೇವಿ ಭೂ ತಾಯಿ ಓ ರತ್ನ ಗರ್ಭೇ
ಎನಿತೊ ರತ್ನಗಳನ್ನು ಪಡೆದ ಸೌಭಾಗ್ಯ
ಇಂದು ಬರುತಿದೆ ಹೊಸತು ಮಾದರಿಯ ರನ್ನ
ದೇವತೇಜದ ಪುಂಜ ರೇವಣಜ್ಯೋತಿ !
ಓ ಪೃಥ್ವಿ, ನೆಲದಾಯಿ
ಮೃದು ವಕ್ಷಸ್ಥಲವಡೆದ ಇಕ್ಷುಕನ್ಯೆ
ಮಡಿಲು ತೆರೆ ಪವಡಿಪನು ಜಗದಾದಿ ರೇಣುಕನು
ಜಯದ ಜೋಗುಳವಾಡಿ ನಿದ್ದೆ ತರಿಸು !
ಹಿಗ್ಗು ಹಿರಿ ಹಿರಿ ಹಿಗ್ಗು ಸುಗ್ಗಿ ಬರುತಿದೆ ಇಂದು
ಕೋಟಿ ಸೂರ್ಯರ ತೇಜ ಇಳಿದಿತ್ತಲ್ಲೈ ತಂದು
ನಿನ್ನ ತೊಡೆತಲ್ಪದಲಿ ಪವಡಿಸುವುದು !
ಜಗದ ಗುರು ರೇಣುಕರ ಪಡೆದ ಭಾಗ್ಯಳು ನೀನು
ನೀನಿಂದು ಧನ್ಯೆ, ನೀ ಲೋಕಮಾನ್ಯೆ, ನೀನೆ ಪೂಜ್ಯೆ
(ಚಂಡೆಯೊಡನೆ ರುದ್ರ – ಭದ್ರೆಯರ ನರ್ತನ ಅಟ್ಟಣೆಯ ಮೇಲೆ. ಕೆಳಗೆ ನಿಂತ ಸತ್ಯ ಶಿವಂ ಸುಂದರಂರ ನರ್ತನವೂ ಉಂಟು)
–ಅನಂತರ ಶ್ರೀ ರುದ್ರ ಉದ್ಘೋಷ (ಹಿನ್ನೆಲೆಯಲ್ಲಿ)
ಓಂ
ನಮೋ ಭವಾಯ ಚ ರುದ್ರಾಯ ಚ
ನಮಃ ಶರ್ವಾಯ ಚ ಪಶುಪತಯೇ ಚ ನಮೋ ನೀಲಗ್ರೀವಾಯ ಚ
ವ್ಯೋಮಕೇಶಾಯ ಚ ನಮಸ್ಸಹಸ್ರಾಕ್ಷಾಯ ಚ
ಶತ ಧನ್ವನೇ ಚ ನಮೋ ಗಿರೀಶಾಯ ಚ ಶಿಪಿವಿಷ್ಟಾಯ ಚ
ನಮೋ ಮೀಢುಷ್ಟಮಾಯ ಚೇಷ್ಟುಮತೇ ಚ
ನಮೋ ಹ್ರಸ್ವಾಯ ಚ ವಾಮನಾಯ ಚ ನಮೋ ಬೃಹತೇಚ
ವರ್ಷಿಯಸೇ ಚ ನಮೋ ವೃದ್ಧಾಯ ಚ ಸಂವೃಧ್ವನೇಚ
ನಮೋ ಅಗ್ನಿಯಾಯ ಚ ಪ್ರಥಮಾಯ ಚ ಆಶಮೇವ ಚ
ಚಾಜಿರಾಯ ಚ ನಮಶ್ಯೀಘ್ರಿಯಾಯ ಚ ಶೀಭ್ಯಾಯ ಚ
ನಮ ಉರ್ಮ್ಯಾಯ ಚ ಜಾವಸ್ವನ್ಯಾಯ ಚ
ನಮಸ್ರೋತಸ್ಯಾಯ ಚ ದೀಪ್ಯಾಯ ಚ ।
ನಮೋ ಜ್ಯೇಷ್ಠಾಯ ಚ ಕನಿಷ್ಠಾಯ ಚ ನಮಃ
(ಶ್ರೀರುದ್ರ ಪಠನದ ವೇಳೆಯಲ್ಲಿ ಚಂಡೆ ಇತ್ಯಾದಿ ವಾದ್ಯ ಘೋಷಗಳಿಲ್ಲ. ಆದರೆ ರುದ್ರ – ಭದ್ರೆಯರ ಅಭಿನಯ ಸಾಗುತ್ತಲೇ ಇರುತ್ತದೆ.)
ಮೂವರೂ : ಭದ್ರ ಕಾಳಿಯ ಕೂಡೆ ನರ್ತಿಸುವ ಓ ರುದ್ರ
ಲೋಕ ಲೋಕಂಗಳನು ಮೂಡಿಸುವ ನಟರಾಜ
ಭೈರವನೆ, ಕಾಪಾಲಿ, ಏ ಕಪರ್ದಿಯೆ, ಕವಿಯೆ
ದೈತ್ಯತೆಯ ಮುಡಿ ಮೆಟ್ಟಿ ದಿವ್ಯತೆಯ ಮೆರೆಯುವೊಲು
ಜಗದ ಗುರು ರೇಣುಕಗೆ ನೀ ನೀಡು ಕಸುವು !
ಓ ದೇವಿ, ಶ್ರೀ ಲಲಿತೆ,
ಗಾಳಿಗಿಂತಲು ತೆಳುವು ಬೆಳಕಿಗಿಂತಲು ಬಿಳುಪು
ನಿನ್ನ ಸೂಕ್ಷ್ಮದ ದೇಹ ಭಾವಗಮ್ಯ
ಅಸುರೀ ಶಕ್ತಿಯನು ಎದುರಿಸುವ ಶಿವಶಕ್ತೆ

ರೇಣುಕಾಚಾರ್ಯರಿಗೆ ಧೀಃ ಶಕ್ತಿಯಾಗು !
ಸೌಂದರ್ಯ ನಿಧಿಯೇ, ಚಿರ ಯುವತಿ ಕನ್ಯೆ,
ನಕ್ಷತ್ರನಾಚಿಸುವಲಂಕಾರ ಭೂಷಿತೇ
ಚೈತನ್ಯ ಕುಸುಮ ಪ್ರಿಯೇ
ಕಾವ್ಯ ಸಂಗೀತಾದಿ ನರ್ತನದಧಿದೇವತೆಯೆ
ನೀನಾಗು ಚಿದ್ ಏಕ ರಸರೂಪಿಣೀ ॥

(ಮನಮೋಹಕ ಭಂಗಿಯಲ್ಲಿ ಅಗ್ನಿಯೆಡೆಗೆ ಬರುವರು)

ಓ ಅಗ್ನಿ, ಹುತವಹನೆ
ಮೊದಲ ಪೂಜೆಯ ಕೊಳುವೆ ಸಗ್ಗ ದೇವತೆಯೆ
ಜ್ವಾಲೆಯುಜ್ವಲ ತೇಜದೋಜೆಯಲಿ ನಲಿವೆನೆ
ಸೂರ್ಯ ಮಂಡಲದಂತೆ ಪ್ರಜ್ವಲಿಪನೇ,
ಮನುಜರಾತ್ಮರ್ಪಣೆಯ ದಿವ್ಯ ಹವಿಯಾಗಿರಲು
ಎಮ್ಮಲ್ಲೆ ನೆಲಸಿರುವೆ ಅತಿಥಿಯಾಗಿ !
ಏಳು ಎಳ್ಳೈ ಅಗ್ನಿ, ಏಳು ಯಜ್ಞ – ಜ್ಯೋತಿ !
ಜ್ವಾಲೆ ನಾಲಗೆಗಳಲಿ ಗೀತೆಯುಲಿದು
ನಮ್ಮ ನುಡಿ ಗೀತೆಗಳ ಉಸಿರುವಾತನೆ ಏಳೊ
ಬೆಳಕಿನಶ್ವಗಳೆಲ್ಲ ಮೇಲೇರಿ ಬಹವು !
ಜಗದ ಗುರು ರೇಣುಕರ ಸ್ವಾಗತಿಸಲೇಳು
ದಿವ್ಯ ದ್ರಷ್ಟಾರನವ ವೀರಪೀಠದ ಪಿತೃ
ವಿಶ್ವಧರ್ಮವನೀವ ದಾರ್ಶನಿಕನವನು
ಅವನಿಗಾ ತೇಜವನು
ನೀಡಲೇಳೋsssss.....!

(ಬೆಳಕಿನ ದೀಪ ಕಣ್ಣು ಮುಚ್ಚಿ ತೆರೆಯುವುದು ಅದು ಪುರುಷನ ಬಳಿ ಸಾರಿದಾಗ) ಹಿನ್ನೆಲೆಯಲ್ಲಿ ವಾಣಿ :

ಹರಂ ಓಂ
ಸಹಸ್ರ ಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾ । ಅತ್ಯತಿಷ್ಠದ್ದಶಾಂಗುಲಂ ।
ಪುರುಷ ಏ ವೇದಗ್ಂ ಸರ್ವಂ । ಯದ್ಭೂತ ಯಚ್ಚ ಭವ್ಯಂ ।
ಉತಾಮೃತತ್ವಸ್ಯೇಶಾನಃ । ಯದನ್ನೇನಾ ತಿರೋಹತಿ ।
ಏತಾ ವಾನಸ್ಯ ಮಹಿಮಾ । ಅತೋ ಜ್ಯಾಯಾಗ್‌ಶ್ಚಪೂರುಷಃ ॥

**ಪುರುಷ** : ಸಹಸ್ರ ಶೀರ್ಷ ಪುರುಷ ನಾನು
ಸಹಸ್ರ ನೇತ್ರವಾಂತವನು
ವಿಶ್ವವೆಲ್ಲವನು ತುಂಬಿ
ಮೀರಿ ಬೆಳೆದು ನಿಂತವನು !
ನಾನೆ ಭೂತ ನಾ ಭವಿಷ್ಯ
ನಾನೆ ವರ್ತಮಾನವು
ಅಮೃತಕೊಡೆಯ ನಾನೆ ನಾನೆ
ಸಗ್ಗದಾಚೆ ತೋರ್ದವನ್
ವ್ಯಕ್ತ ವಿಶ್ವವೆನ್ನ ಮಹಿಮೆ
ಆದರಿದೂ ಅಲ್ಪವೆ
ನನ್ನ ಜೊನ್ನದಮೃತದಲ್ಲಿ
ಕಳಾಪೂರ್ಣ, ನಾದಬಿಂದು
ಹಾಸಕೀರ್ಣ ಹಾಸಪೂರ್ಣ

ಆಗಿರುವನಂತ ಸಿಂಧು
ವಿಶ್ವವ್ಯಾಪ್ತಿ ನಾನನಂತ ರೂಪಿ ನಾ
ಋತವು ನಾನು ಕ್ರತುವು ನಾನು
ಯಜ್ಞದ ಯಜಮಾನ ನಾನು
ಧಾತೃ ಹೋತೃ ಉದ್ಗಾತೃ ಅದ್ಗಾತೃ ಅಧ್ವರ್ಯುವು ನಾನೇ
ಅಖಂಡ ಬ್ರಹ್ಮವೆಲ್ಲ ಮೆರೆವ
ಪುರುಷ ನಾನೇ ॥

ಮೂವರೂ : ಕಂಡೆ ನಾ ಪೂರುಷನ ಪರಮ ಮಾಹಾಂತನಾ
ಕತ್ತಲಿಂದಾಚೆಗಿಹ ಆ ದಿವ್ಯ ವರ್ಣನನು ॥
ಸೃಷ್ಟಿ ಸಕಲಕೆ ಜನನ, ನಾಮಗಳ ಇತ್ತವನ
ರೂಪಗಳ ಶೀಲಗಳ ಸವಿ ತುಂಬಿದವನ ॥
ಲಕ್ಷ್ಮಿ ಲಜ್ಜೆಯರು
ಅವಗೆ ಪತ್ನಿಯರು
ಅಹೋ ರಾತ್ರಿಗಳು
ಅವನ ಪಕ್ಷಗಳು
ವಿಶ್ವ ವಿಭು ತಾನಾದ
ವಿಶ್ವವೇ ತಾನಾದ ಪೂರುಷನ ಕಂಡೇ
ಪರಮ ಪುರುಷನ ಕಂಡ ಧನ್ಯರಾವು !
ಧನ್ಯರಾವು !!

(ಸಹಸ್ರ ದೀಪಗಳಿಂದ ರಂಗ ಬೆಳಗುತ್ತದೆ. ವೈಭವದ ದೃಶ್ಯ – ವೈಭವದ ವಾದ್ಯ ದೇವಾನುದೇವತೆಗಳ ಸಾಮೂಹಿಕ ನೃತ್ಯ)

ಮೇಳಗೀತೆ : ನಲಿಯಿರಿ ನರ್ತಿಸಿ ಓ ಚೇತನಗಳೆ
ಜಗದಾಚಾರ್ಯನ ಆಗಮನ
ಆದಿ ಜಗದ್ಗುರು ರೇಣುಕ ಬರುವನು
ವಿಶ್ವಕೆ ಶಾಂತಿಯ ನೀಡುವನು ॥ 1 ॥
ವಿಶ್ವಧರ್ಮವದು ಶಿವಧರ್ಮವದು
ವೀರಶೈವವೆಂದೆನಿಸಿಹುದು
ಶಿವನದ್ವೈತವ ಸಾರಿ ತೋರುವುದು
ಜೀವನ ಶಿವನನ್ನಾಗಿವುದು ॥2॥

(ನರ್ತನಾದಿಗಳು ನಿಂತಕೂಡಲೇ ರಂಗಭೂಮಿ ನೀರವವಾಗುತ್ತದೆ. ಆಗ ಇದ್ದಕ್ಕಿದ್ದಂತೆಯೇ ಗಗನದೆಡೆಯಿಂದ ದಿವ್ಯ ಜ್ಯೋತಿಯೊಂದು ಇಳಿದಿಳಿದು ಬರುತ್ತಿರುತ್ತದೆ, ಆಗ ಹಿನ್ನೆಲೆಯಲ್ಲಿ)

ಬಾ ಬೆಳಕೆ, ಬಾ !
ಸ್ವರ್ಣ ವರ್ಣೋದಯದ
ಅರುಣ ಜೀರ್ಕೊಳವಿಯಲಿ
ಬೆಳ್ಪನ್ನೆ ಮುಕ್ಕುಳಿಸಿ ಬೆಳ ಬೆಳಗಿ ಬಾ !
ಸಪ್ತ ಸಾಗರದೆದೆಯ ಕುದಿ ಕುದಿಯ ತಾಂಡವದಿ
ಲಾಸ್ಯಗೈಯುತ ಬಾ !
ಬತ್ತಲೆಯ ಬಯಲಿಂಗೆ ಶಕ್ತಿ ಸಂಕ್ರಮಿಸುತ್ತ
ಮಾನವನ ಎದೆಯಲ್ಲಿ ಸೊದೆ ತುಂಬು ಬಾ !
ಬಾ ಬೆಳಕೇ, ಬಾ !
ಬೆಳಗಿನೊಳಗಣ ಬೆಳಕೆ
ಜಗದಾದಿ ಮುಂಬೆಳಕೆ
ಇಳೆಯೊಳವತರೀಸಿದೀ ಬೆಳಗುಗಳ ಒಳ ಬೆಳಕೆ

ಪುಟವಾಗು, ದಿಟವಾಗು
ಪ್ರಜ್ವಲಿತ ಪ್ರಸ್ಫುಟಿತ
ದಿವ್ಯ ತೇಜೋರಾಶಿ ವಾರಾಶಿಯಾಗು !
ಓ ವಿಶ್ವ ಚೇತನವೆ,
ಆದಿತ್ಯ ಲೋಕದಿಂದವತರಿಸಿ
ಗರ್ಭದಿಂದಬ್ಬರಿಸಿ ಹೊಳೆ ಹರಿಸಿ ಬಾ
ಬಾ ಬೆಳಕೇ, ಬಾ !
(ಕತ್ತಲು – ಬೆಳಕು ಜಾಲ ! ಇಡೀ ರಂಗಭೂಮಿಯೇ ಸುತ್ತುತ್ತಿರುವಂತೆ
ಭಾಸವಾಗುವ ಮಟ್ಟಿಗೆ ದೀಪದ ಮೋಡಿ)
–ಎಲ್ಲ ದೇವತೆಗಳೂ ನರ್ತನದಲ್ಲಿ ಲೀನರು –
ಮೇಳ : ಬನ್ನಿ ಬನ್ನಿರಿ ಏಳಿ ವಿಶ್ವ ಚೈತನ್ಯಗಳೆ
ವಿಶ್ವಾತ್ಮ ರೇಣುಕಗೆ ಜಯವೆನ್ನಿರೇಳಿ ॥
ಪೃಥ್ವಿ ಆಶ್ರಯ ನೀಡು, ಆಗಸವೆ ರಕ್ಷೆ ಇರು
ವಾಯು ಘೋಷಿಸು, ರುದ್ರ ನೀನು ಶಿವವಾಗು
ಆದಿತ್ಯ ಜ್ಯೋತಿ ಕೊಡು, ಉಷೆ ನೀಡು ಸೌಂದರ್ಯ
ಮಿತ್ರ ಮೈತ್ರಿಯ ತಾರೊ ಪೂಷನನೆ ಪೋಷಿಸೋ
ದೇವಿ, ಶಂಕರಿ, ಶಿವೆ, ಪಾರ್ವತೀ ಪರಮೇಶ್ವರೀ
ಸರ್ವ ಶುಭಕರೆ ಮಾತೆ ಮಾತಂಗಿ ಮಂಗಲೇ
ಬನಶಂಕರೀ ಭದ್ರೆ ರಣಭಯಂಕರಿ ರುದ್ರೆ
ನಿಮ್ಮ ಶಕ್ತಿಗಳೆಲ್ಲ ಸಾಕಾರಗೊಳಲಿ
ಶ್ರೀಮತು ಶ್ರೀಗುರು ಜಗದೇಕ ಸದ್ಗುರು
ಮಹಮಹಿಮ ಹ್ರೀ ಗುರು ಶ್ರೀ ರೇಣುಕಾ ಗುರು
ಜಯಮಕ್ಕೆ ಶುಭಮಕ್ಕೆ ಜಯ ಶಂಕರನೇ
ಜಯರಾಜ್ಞಿ ರಾಜೇಶ್ವರೀ !
ಜಯ ಜಯ ಜಯ ಜಯ ಜಯ ರೇಣುಕಾ !
ಜಯ ಜಯ ಜಯ ಜಯ ಜಯ ದಾರುಕಾ !
ಜಯ ಜಯ ರೇಣುಕ
ಜಯ ಜಯ ಗುರವರ
ಜಯ ಜಯ ರೇಣುಕ
ಜಯ ಜಯ ಗುರುವರ
ಜಯ ಜಯ ರೇಣುಕ ಜಯ ಜಯ ರೇಣುಕ
ರೇಣುಕ ರೇಣುಕ ರೇಣುಕ ರೇಣುಕ !
(ಘೋಷಣೆ ಮುಗಿಲು ಮುಟ್ಟುತ್ತದೆ. ದೇವತೆಗಳೊಡನೆ ಇಡೀ ರಂಗಭೂಮಿಯೇ ನರ್ತಿಸುತ್ತದೆ)

## ದೃಶ್ಯ 4
## ಆಶ್ರಮ

(ದೃಶ್ಯ ಬದಲಾವಣೆಯ ವೇಳೆಯಲ್ಲಿ ರಂಗಭೂಮಿಯು ಕಪ್ಪಿದ್ದಾಗ ಕೆಳಗಿನ ಶ್ಲೋಕ ಗಂಭೀರವಾಗಿ, ನಿಧಾನವಾಗಿ ಉದ್ಘೋಷಿತವಾಗುತ್ತದೆ)
ಶ್ಲೋಕ : ಸದ್ಯೋಜಾತ ಮುಖೋದ್ಭೂತಂ । ಸದ್ಯೋ ವೈಭವದಾಯಕಂ ।
ಸಿದ್ಧಿದಂ ಸಿದ್ಧ ವೃಂದಸ್ಯ । ವಂದೇ ಶ್ರೀ ರೇಣುಕಂ ಗುರುಂ ॥
(ರಂಗ ಬೆಳಗಿದಾಗ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ದೃಶ್ಯ ಗೋಚರವಾಗುತ್ತದೆ. ಅವರ ಹಿಂಬದಿಯಲ್ಲಿ ಒಂದು ತೇಜಃಪುಂಜ ಪ್ರಭಾಮಂಡಲ ಶೋಭಿಸುತ್ತಿರುತ್ತದೆ. ಅವರ ಪಾದಮೂಲದಲ್ಲಿ ಮುಗಿದ ಕೈಯವನಾಗಿ ಮಂಡಿಸಿದ್ದಾನೆ ಅಗಸ್ತ್ಯ)
ರೇಣುಕ : ಓ ಅಗಸ್ತ್ಯನೆ ಯತಿಯೆ, ದ್ರಾವಿಡರ ದೇವತೆಯೆ

ಕುರುಡನಿಗೆ ಕಣ್ಣಾದೆ, ಕಿವುಡನಿಗೆ ಕಿವಿಯಾದೆ
ದೀನನಿಗೆ ದಯೆಯಾಗಿ, ದಲಿತನಿಗೆ ತಾಯಾದೆ !
ಕೋಟಿ ಜೀವರುಗಳಿಗೆ ಬದುಕು ಕೊಟ್ಟೆ
ನೀನು ಬೆಳಕು ಕೊಟ್ಟೆ !

ಅಗಸ್ತ್ಯ : ಎಲ್ಲಕ್ಕು ಕಾರಣನು ನೀನಲ್ತೆ ಗುರುದೇವ,
ನನ್ನ ಹೃನ್ಮಂದಿರದ ಪರಮೇಷ್ಠಿ ರೇಣುಕನೆ
ಅಸ್ಪೃಶ್ಯತೇ ಎಂಬ ಜಾಡ್ಯವನು ನೀಗಿಸಿದೆ.
ಅಂದು ನೀನೈತಂದೆ, ಶಿವದೀಕ್ಷೆ ಎನಗಿತ್ತೆ
ನರಕಾಯ ನೀಗುತ್ತೆ ಹರಕಾಯವಿತ್ತೆ
ನನ್ನ ಮಾಂಸದ ಪಿಂಡ ಮಂತ್ರ ಪಿಂಡವದಾಯ್ತು !
ಅಸ್ಪೃಶ್ಯನೆನಿಸಿದಾ ಈ ಅಗಸ್ತ್ಯನು ಅಂದು
ನಿನ್ನಿಂದಲಾದನೈ ಸ್ನಾತ, ಪೂಜಿತನು !
ಓ ಜಗದ್ಗುರು ಪೂಜ್ಯ
ಶಿವತತ್ತ್ವ ತಿಳಿಯಲಿಕೆ ತವಕಿಸುತ್ತಿಹೆನಿಂದು
ದಿವ್ಯೋಪದೇಶವನು ದಯೆಗೈಯಬೇಕು, ಕೃಪೆ ಮಾಡಬೇಕು.

ರೇಣುಕ : ಆಯ್ತಾಯ್ತು ಮುನಿಮುಖ್ಯ, ಕೇಳು ಓ ಅಗಸ್ತ್ಯ
ವೀರಶೈವದ ತತ್ತ್ವ ವಿಶ್ವತತ್ತ್ವ
ಸಂಕುಚಿತಕೆಡೆಯಿಲ್ಲ, ಸಂಕೋಲೆ ಅಲ್ಲಿಲ್ಲ
ವಿಶ್ವಮಾನವ ಧರ್ಮ ವಿಶ್ವಾತ್ಮವಡೆದಿಹುದು
ದೇವನಾಗಲು ಬೇಕು ಕಡೆಯಲ್ಲಿ ಜೀವ
ಷಟ್‌ಸ್ಥಲದ ಸೋಪಾನ ಸಮೆದು, ನಿಂತಿದೆ ನೋಡು
ಮಾನವನು ಮಹದೇವನಾಗಲಿಕೆ ಇದುವೇಕ ಸಾಧನವು !
ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ
ಪಂಚಸ್ಥಲವ ದಾಟಿ ಸಾರಿದರಾಗ ನಿಜದ ನೆಲೆ ದೊರಕುವುದು
ಅದುವೆ ಐಕ್ಯಸ್ಥಲವು, ಅದುವೆ ಶೂನ್ಯದ ನೆಲೆಯು.
ಬೆಳಗಿನೊಳಗಣ ಬೆಳಗು ಜಗದಾದಿ ಮುಂಬೆಳಗು
ಸೃಷ್ಟಿಮೂಲದ ಬೆಳಗು ಚೆಂಬೆಳಗು ಶಿವನ ಹೆಬ್ಬೆಳಗು
ಆ ಮಹಾಜ್ಯೋತಿಯೊಳು ಜ್ಯೋತಿ ಬೆರೆಯಲು ಬೇಕು
ಸಾಗರ ಸಮಷ್ಟಿಯಲಿ ವ್ಯಷ್ಟಿ ಹನಿ ತಾ ಬೆರೆಯೆ
ಆಗಲೇ ಮುಕ್ತಿ, ಆಗಲೇ ಕೈವಲ್ಯ ! ಅಗಲೇ ಕೈಲಾಸ
ಗಣ ಪದವಿ ಪ್ರಾಪ್ತಿ !

ಅಗಸ್ತ್ಯ : ಇಷ್ಟಲಿಂಗದ ಮಹಿಮೆ ಎಂತಿಹುದು ಗುರವರ್ಯ ?

ರೇಣುಕ : ಇಷ್ಟಲಿಂಗವೆ ಸೃಷ್ಟಿ ಸಾಮಷ್ಟಿ ಸಂಗ್ರಹವು
ದೇಹದಲಿ ಧರಿಸಿದರೆ ದಾರಿದ್ರ್ಯ ಹರಿಯುವುದು
ದುರ್ಬುದ್ಧಿ ತೊಲಗುವುದು, ದೌಷ್ಟ್ಯ ದೌರ್ಜನ್ಯಗಳು ದೂರವಹವು. .
ಲಿಂಗಕ್ಕೆ ಶರಣಾಗು, ಸಂಗನಿಗೆ ಶರಣಾಗು
ಸರ್ವ ಲೋಕೇಶ್ವರನ ಸನಿಹಕಾಗು !

ಆಗಸ್ತ್ಯ : ಭಕ್ತಿ ಮಾಹತ್ಮ್ಯವನು ತಿಳಿಸುವಿರ ಗುರುದೇವ !

ರೇಣುಕ : ಸಂದೇಹವಿಲ್ಲದೆಲೆ ಕೇಳು ಓ ಆಗಸ್ತ್ಯಮುನಿ
ಎಲ್ಲ ಸಾಧನಗಳಿಗು ಭಕ್ತಿ ಮೂಲದ್ರವ್ಯ
ಆತ್ಮ ಬಲದುನ್ನತಿಯ ಆಗ್ನಿ ಗೋಪುರ ಶಕ್ತಿ !
ನರ – ಹರರ ಬೆಸುಗೆಯಾ ಐಕ್ಯಾನುಸಂಧಾನ !
ಜೀವ ಶಿವನಾಗಲಿಕೆ ಭಕ್ತಿಯದು ಸೋಪಾನ !

ಆಗಸ್ತ್ಯ : ಧನ್ಯನಾದೆನು ಗುರುವೆ, ಧನ್ಯನೈತಂದೆ;
ಗುರುವಿಗಿಂತಲು ಧರೆಯ ಹಿರಿಯ ದೇವತೆ ಇಲ್ಲ
ನೀನೆ ಗತಿ ನೀನೆ ಮತಿ ನೀನೆ ನನಗೆಲ್ಲ !

ರೇಣುಕ : ಆಗಸ್ತ್ಯ ಲಾಲಿಸಿಗೊ
ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾಕ್ಷಮಾ
ದಾನಂ ಪೂಜಾ ಜಪೋಧ್ಯಾನಮಿತಿ ಧರ್ಮಸ್ಯ ಸಂಗ್ರಹ ಃ ॥
ಅಂದರೆ
ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ,
ದಯೆ, ಕ್ಷಮೆ, ದಾನ, ಶಿವಪೂಜೆ ಪಂಚಾಕ್ಷರ ಮಹಾಮಂತ್ರ
ಜಪ, ಶಿವಧ್ಯಾನ – ಇದೇ ಧರ್ಮ ಸಂಗ್ರಹ.

ಅಗಸ್ತ್ಯ : ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾಕ್ಷಮಾ
ದಾನಂ ಪೂಜಾಜಪೋಧ್ಯಾನಮಿತಿ ಧರ್ಮಸ್ಯ ಸಂಗ್ರಹಃ ॥
– ಆಹಾ ! ಎಂತಹ ದಶಸೂತ್ರಗಳು ತಂದೆ,
ಇವುಗಳನು ಪಾಲಿಸುವೆ ; ಇವುಗಳು ಬೋಧಿಸುವೆ.

ರೇಣುಕ : ಅಂತೆಗೈವುದು ಒಳಿತು, ಪೋಗಿ ಬಾ ಅಗಸ್ತ್ಯಮುನಿ !
ಧರ್ಮಕ್ಕೆ ಜಯಮಕ್ಕೆ, ಮನುಕುಲಕೆ ಜಯಮಕ್ಕೆ
ಮಂಗಳವು ನಿಮಗೆಲ್ಲ.

## ದೃಶ್ಯ 5
## ತಪೋಭೂಮಿ

(ಸತ್ಯಂ ಶಿವಂ ಸುಂದರಂ ನೃತ್ಯಗೈಯುತ್ತಾ ಪ್ರವೇಶಿಸುವರು)

ಹಾಡು : ನಮೋ ನಮೋ ಶ್ರೀ ಪರಮ ಜಗದ್ಗುರು ರೇಣುಕ ಗುರುವರನೆ
ನಮೋ ನಮೋ ಜಗವಂದಿತ ಪೂಜಿತ ಮಂಗಳ ಶುಭಕರನೆ ॥ ಪ ॥
ಪರಶಿವ ಸದ್ಯೋಜಾತ ಮುಖೋದ್ಭವ ಚಿನ್ಮಯ ಚಿದ್ಘನನೆ
ಧರೆಗವತರಿಸಿದ ಶಕ್ತಿ ವಿರಶಕ್ತಿಯೆ ಜಗದೋದ್ಧಾರಕನೆ
ಪರತರ ತೇಜವೆ ಪರಮೋದಾರನೆ ಭಾಸುರ ಭಸ್ಮೋದ್ದೀಪಿತನೆ
ಕೋಟಿ ಕೋಟಿ ಶತ ಸೂರ್ಯ ಪ್ರಭೆಯಲಿ ವಿಶ್ವವ ಬೆಳಗಿದನೆ ॥ 1 ॥
ಕೊಲ್ಲೀಪಾಕಿಯ ಶಿವಲಿಂಗದೊಳು ಜನಿಯಿಸಿ ಬಂದವನೆ
ಎಲ್ಲೆಡೆಯಲ್ಲೂ ಶಿವ ಪಂಚಾಕ್ಷರಿ ಮಂತ್ರವ ಬಿತ್ತಿದನೆ
ರೇಣುಕ ದೇಶಿಕ ಪರಿವ್ರಾಜಕನೇ ಪರಮ ತಪೋನಿಧಿ ಪಾವನನೆ
ವೀರಶೈವ ಮತ ಸಂಸ್ಥಾಪಕನೆ ವಿಶ್ವಧರ್ಮವದ ಸಾರಿದನೆ ॥ 2 ॥
(ಹಾಡುತ್ತಾ ನರ್ತಿಸುತ್ತಾ ನಿರ್ಗಮನ)

## ದೃಶ್ಯ 6
## ರಂಭಾಪುರೀ ಕ್ಷೇತ್ರ

(ಹೊಸದೃಶ್ಯ ತೆರೆದುಕೊಂಡರೂ ಹಿಂದಿನ ಹಾಡೇ ಮುಂದುವರಿಯುತ್ತಿರುತ್ತದೆ. ಜಗದ್ಗುರು ರೇಣುಕರ ಸನಿಹಕ್ಕೆ ಲಂಕಾಧಿಪತಿ ವಿಭೀಷಣನು ಹಾಡಿಕೊಂಡು ಬರುತ್ತಾನೆ.)

ಹಿನ್ನೆಲೆ : ಆದಿ ಜಗದ್ಗುರು ರೇಣುಕ ಭಗವತ್ಪಾದಕರಿಗೆ ಜಯವಾಗಲಿ !
ಲಂಕಾಧಿಪತಿ ವಿಭೀಷಣ ಮಹಾರಾಜರಿಗೆ ಜಯವಾಗಲಿ

ವಿಭೀ : ದಲಿತ ಮುನೀಶ್ವರ ಆಗಸ್ತ್ಯನಿಗೆ ಷಟ್‌ಸ್ಥಲ ತತ್ತ್ವವ ತಿಳಿಸಿದನೆ
ಶತಾನಂದ ಸತ್ಯೇಂದ್ರ ಭದ್ರರನು ಉದ್ಧರಿಸಿದ ಶ್ರೀ ಸದ್ಗುರುವೆ
ಬಾಳೇಹಳ್ಳಿಯ ಶ್ರೀ ಕ್ಷೇತ್ರದಲಿ ಕದಳಿಯ ಪೆಂಪಿನ ಕೈದೋಟದಲಿ
ಪಂಚಪೀಠದೊಳಗೊಂದತಿ ಶ್ರೇಷ್ಠದ ವೀರಪೀಠವನು ನಿಲಿಸಿದನೆ॥ 3 ॥
(ನಮಿಸುತ್ತಾನೆ.)

ರೇಣುಕ : ಮೇಲೇಳು ಲಂಕೇಶ, ಏಳು ವಿಭೀಷಣ ರಾಜ

ಏಳು ಮಂಗಲವದನ ಸದನ ಸಮ್ಮೋಹಕನೆ
ನಿನಗಕ್ಕೆ ಮಂಗಲವು, ಶುಭಮಕ್ಕೆ ಗೆಲಮಕ್ಕೆ, ಸಿದ್ಧಿಯಕ್ಕೆ

ವಿಭೀ : ಧನ್ಯನಾದೆನು ದೇವ ಧನ್ಯನಾದೆನು ತಂದೆ
ನಿನ್ನ ತೇಜೋರೂಪು ಕಂಡ ಕಂಗಳು ಧನ್ಯ
ಪಾವನವು ಈ ಜನ್ಮ ಪಾವನವು ದೇಹ !

ರೇಣುಕ : ಶ್ರೇಯೋಸ್ತು ರಾಜಋಷಿ ಇಷ್ಟಾರ್ಥ ಸಿದ್ಧಿಸಲಿ
ಬಂದ ಕತವೇನೆಂದು ತಿಳಿಯಲಿಚ್ಛಿಪೆವು

ವಿಭೀ : ವಿಶ್ವವಂದಿತ ಪೂಜ್ಯ ಓ ತಪೋಧನನೆ
ನನ್ನಣ್ಣ ರಾವಣನ ಇಚ್ಛೆಯೊಂದಿದೆ ದೇವ
ತನ್ನ ಜೀವಿತದಲ್ಲಿ ಶಿವಲಿಂಗವರುಕೋಟಿ
ಲಂಕೆಯೆಡೆಯೆಡೆಯಲ್ಲಿ ಸಂಸ್ಥಾಪಿಸಿದನಲ್ತೆ
ಮತ್ತೆ ಮುಕ್ಕೋಟಿಗಳ ಪ್ರಾತಿಷ್ಠೆಗಿಲವಾಯ್ತು
ಶ್ರೀರಾಮಚಂದ್ರನಿಂ ಹತನಾಗಿ ಮರಣವಪ್ಪಿದನು
ಮರಣ ಮುಖದಲ್ಲಿದ್ದ ಆತನಿಚ್ಛೆಯ ನಾನು ಪೂರೈಸಲೆಳಸಿಹೆನು
ಲೋಕ ಗುರು, ಜಗದ ಗುರು, ವಿಶ್ವ ಗುರು ನೀವಿರಲು
ನಿಮ್ಮ ಸಮ್ಮುಖದಲ್ಲಿ ನೆರವೇರಬೇಕೆಂಬ ಹಿರಿಯ ಬಯಕೆ.

ರೇಣುಕ : ಪೂರ್ಣವಾಗಲಿ ಬಯಕೆ ಲಂಕಾಧಿನಾಯಕನೆ
ಶಿವಭಕ್ತ, ಶಿವಶಕ್ತ – ರಾವಣೇಶ್ವರನಾತ್ಮ
ನಿನ್ನ ಮಣಿಹವ ಕಂಡು ಸಂತುಷ್ಟಿಗೊಳಲಿ
ಬಾಳೆಹಳ್ಳಿಯ ದಾಟಿ, ಪಂಪೆಯನು ಬಲಗೊಂಡು
ಶ್ರೀ ಶೈಲ ಗಿರಿ ಸಾರಿ, ಲಂಕೆಗೈತಹೆವು
ಶ್ರಾವಣದ ಶುಭದಿನದಿ ನೆರವೇರಲಾ ಕಾರ್ಯ
ಭಕ್ತಿ ಭಾಗೀರಥಿಯು ಅನವರತ ಪಸರಿಸಲಿ
ಲೋಕಕಲ್ಯಾಣಕ್ಕೆ ಆಸ್ತಿಕ್ಯ ವರ್ಧನೆಗೆ
ಮುಕ್ಕೋಟಿ ಲಿಂಗಗಳ ಸಂಸ್ಥಾಪಿಸುವೆವು.

ವಿಭೀ : ಧನ್ಯನಾದೆನು ತಂದೆ ಸಾರ್ಥಕವು ಮಮ ಜನ್ಮ
ಹಿರಿಯಣ್ಣನಿಚ್ಛೆಯನು ಸಲಿಸಿದಾ ಪುಣ್ಯ
ಜಗದ ಗುರು ಶ್ರೀ ಚರಣ ಸಂಸ್ಪರ್ಶ ಕಾರುಣ್ಯ
ಮೇಳವಿಸಿದಾ ಭಾಗ್ಯ ನನ್ನ ಲಂಕೆಯ ಸೈಪು
ನನ್ನ ರಾಜ್ಯದ ಪುಣ್ಯ, ನನ್ನ ವರು ಧನ್ಯ !

## ದೃಶ್ಯ 7
## (ಬಾಳೆ ಹಳ್ಳಿಯ ಬಯಲು)

(ಸತ್ಯಂ ಶಿವಂ ಸುಂದರಂ ನೃತ್ಯಗೈಯುತ್ತಾ ಪ್ರವೇಶಿಸುವರು)

ಹಾಡು : ಲಂಕೆಯ ನಾಯಕ ವೀರ ವಿಭೀಷಣನಿಚ್ಛೆಯ ಸಲಿಸಿದನೆ
ಶಿಂಶುಮಾರ ವರ ಡಿಂಡಿಮಾರರಿಗೆ ದಾಸೋಹತ್ವವ ತೋರಿದನೆ
ವಜ್ರಶೀಲೆ, ಸುತ ಧರ್ಮಗುಪ್ತರಿಗೆ ಶಿವಸೇವೆಯ ಸಿರಿಕೊಟ್ಟವನೆ
ಸತಿ ದಮಯಂತಿಗೆ ಮಣಿ ಭದ್ರರಿಗೆ ಕಾಯಕ ದೀಕ್ಷೆಯನಿತ್ತವನೆ॥ 4 ॥
ಕಾವಿ ಕಮಂಡಲು ದಂಡವ ಹಿಡಿದು ಮಂಡಲ ತಿರುಗಿದನೆ
ದಿವ ಘನ ರುದ್ರರ ಬುವಿಗೈತರಿಸುತೆ ಸಾಮರಸ್ಯವನು ತಿಳಿಸಿದನೆ
ವೀರಶೈವದಾ ತತ್ತ್ವವ ಬೋಧಿಸಿ ಶಿವ ಪಾರಮ್ಯವ ಮೆರೆದವನೆ ॥ 5 ॥
ಶಿವಾದ್ವೈತವನು ದಯೆಗೈದವನೇ ಧರ್ಮೋದ್ಧಾರಕನೆ

**ದೃಶ್ಯ 8**

**ದಟ್ಟ ಅಡವಿ, ಬೆಟ್ಟ, ಬಂಡೆ**

(ಭಯಂಕರ ಸ್ಫೋಟದೊಂದಿಗೆ ದೃಶ್ಯ ಆರಂಭವಾಗುವುದು. ತೆರೆ ಸರಿದಾಗ ಹೆಬ್ಬಂಡೆಯ ಮೇಲೆ ಅತಿ ಎತ್ತರದಲ್ಲಿ ರೂಕ್ಷ ರೂಹಿ ಮಾತಂಗನು ನಿಂತು ಅಬ್ಬರಿಸುತ್ತಿರುತ್ತಾನೆ; ಗಹಗಹಿಸಿ ನಗುತ್ತಿರುತ್ತಾನೆ. ಅವನು ನಿಂತಿದ್ದ ಬಂಡೆಯ ಬದಿಯಲ್ಲಿ, ಅವನ ಹಿಂಬದಿಯಲ್ಲಿ ಸಣ್ಣ ಬೆಳಕು ಮಿನುಗುತ್ತಿದ್ದು, ಅವನ ದೀರ್ಘ ದೇಹ ನಸುಕಾಗಿ ಕಾಣಿಸುವಂತಿರುತ್ತದೆ)

ಮಾತಂಗ : ಹಹಹ್ಹಹ್ಹಹ್ಹಹ್ಹಾ !
ಓಹೊ ಹೊ ಹ್ಹೊ ಹ್ಹೊ ಹ್ಹೊ ಹ್ಹೊ ಹ್ಹೊ !

(ನಗೆಯ ಸ್ಫೋಟನಕ್ಕೆ ಪೋಷಕವಾಗಿ ರಂಗದ ಮೇಲೆ ಮಿಂಚು, ಗುಡುಗು, ಸಿಡಿಲುಗಳು ಚಣಕಾಲ ಮೆರೆಯುವುವು. ಮಾತಂಗನ ನರ್ತನ ಆರಂಭವಾಗುವುದು)

ನಿತ್ಯ ಹತ್ತು ಎತ್ತು ತಿಂದೆ
ಕತ್ತೆ ತಿಂದೆ ಕೊತ್ತಿ ತಿಂದೆ
ತತ್ತಿಗಳನು ತುತ್ತಿ ತಿಂದೆ
ತಿಂದುದಕ್ಕೆ ಲೆಕ್ಕವಿಲ್ಲ – ಹಹ್ಹಹ್ಹಹ್ಹಹ್ಹಾ !
ಮನುಜಕೋಟಿ ತರಿದುದಕ್ಕೆ
ಹರಿದು ಹರಿದು ತಿಂದುದಕ್ಕೆ
ಲೆಕ್ಕವಿಲ್ಲ ಪತ್ರವಿಲ್ಲ – ಹಹ್ಹಹ್ಹಹ್ಹಾ !!
ಕೋಟಿಯಲ್ಲಿ ರತ್ನ ರಾಸಿ
ಮಜ್ಜೆ ಮಾಂಸ ಕಳ್ಳು ಸರಸಿ
ತಿನ್ನಲುಂಟು ಕುಡಿಯಲುಂಟು
ಮೋಜಿಗೊಂದು ಹೆಣ್ಣು ಉಂಟು
ನಾನೆ ರಾಜ ಅವಳೆ ಮಂತ್ರಿ
ನಮ್ಮದೆ ಸಾಮ್ರಾಜ್ಯ ! ನಮ್ಮದೆ ಈ ಭೋಜ್ಯ !
ಹಹ್ಹಹ್ಹಹ್ಹಹ್ಹಾ !
ಓ ಹ್ಹೊ ಹ್ಹೊ ಹ್ಹೊ ಹ್ಹೊ ಹ್ಹೋ !

(ಭೀಕರ ನರ್ತನ ನಡೆಯುತ್ತಿರುವಾಗಲೆ ಜಗದಾಚಾರ್ಯರ ಆಗಮನ, ಬೆಳಕಿನ ದೀಪ ಅವರ ಮುಖಮಂಡಲದ ಮೇಲಷ್ಟೆ ಬೆಳಕು ಚೆಲ್ಲುತ್ತಿರುತ್ತದೆ)

ರೇಣು : ಏನಿದೀ ಪರಿಹಾಸ, ರುದ್ರಾಟ್ಟಹಾಸ !
ನೆಲವೆಲ್ಲ ನಡುಗುತಿದೆ, ಗಿರಿಯುಡಿದು ಕೆಡೆಯುತಿದೆ
ನದಿ ನದಗಳೆಲ್ಲವೂ ಎಡೆಮುರಿದು ಓಡುತಿವೆ
ನಕ್ಷತ್ರ ದಕ್ಷತೆಗಳೆಲ್ಲೆಲು ಉದುರುತಿವೆ
ದಿಗ್‌ಭಿತ್ತಿ ಬಿರಿವಂತೆ ಶಶಿ ಸೂರ್ಯರೊಡೆವಂತೆ
ಏನಿದಾರ್ಭಟವೇನು ? ಯಾವ ಮಾಯೆಯ ಮೊಳಗು !
(ಅಷ್ಟರಲ್ಲಿ 'ಹ ಹ್ಹ ಹ್ಹ ಹ್ಹಾ' ನಗೆ ಆಸ್ಫೋಟನಗೊಳ್ಳುವುದು)
ಅಬ್ಬಬ್ಬ ! ಕಿವಿಯು ಗಡಚಿಕ್ಕುತಿದೆ !
ಯಾರದೀ ನಗೆ ತೋಷ ?

ಮಾತಂ : ನಿಲ್ಲು ಓ ಸನ್ಯಾಸಿ, ನೀನಲ್ಲೆ ನಿಲ್ಲು
ಅಡಿಯಿಟ್ಟರಾಯ್ತುದಿಗೊ ಮುಗಿಯಿತ್ತು ಸೊಲ್ಲು !
ಹರಿದು ಚಿಂದಿಯಗೈವೆ, ನೆತ್ತರನು ಕುಡಿವೆ !

ರೇಣುಕ : ಹಾಗಾದರೆ ನೀನು ರಾಕ್ಷಸನೇನು ?

ಮಾತಂ : ಹಾಗಾಂದೆ ಭಾವಿಸಿಕೊ..ಬೇಡವೆಂದವರಾರು ?

ರೇಣುಕ : ರಾಕ್ಷಸನ ಕೆಲಸಗಳ ಆವಾವಗೈದಿರುವೆ ?
ಹೇಳು ಕೇಳಿ ಸಂತಸಪಡುವೆ; ನಿನ್ನ ಸಾಹಸ ಗಾಥೆ ನನಗೆ ಸಂಪ್ರೀತೆ !

ಮಾತಂ : ಹ್ಹ ಹ್ಹ ಹ್ಹ ಹ್ಹಾ ! ಕಟುಕನಿಗೂ ಕರುಳು ಮುಟ್ಟುವ ನುಡಿಯೊ !
ಸನ್ಯಾಸಿ.....ನಾನೊರ್ವ ನರಹಂತಕ, ಕಾಡುಗಳ್ಳ,
ಕೊಳ್ಳೆ ಕಳ್ಳಂತಿಹುದು ನನ್ನ ಬಾಳುವೆಗೆ.

ರೇಣುಕ : ಹೆಸರು ?

ಮಾತಂ : ಯಾರ ಹೆಸರು ? ನಾ ಕುಡಿವ ಕಳ್ಳಿನದೆ ? ತುಂಬಿರುವ ಬುಂಡೆಯದೆ !

ರೇಣುಕ : ನಿನ್ನ ಹೆಸರಣ್ಣಾ....ಹೆತ್ತವರು ನಿನಗಿತ್ತ ಪುಣ್ಯನಾಮ !

ಮಾತಂ : ಲೋ ಸನ್ಯಾಸಿ, ಅಪ್ಪ ಅಮ್ಮರ ನೆನಪು ಮಾಡಿ
ನನ್ನ ತಲೆ ಕೆಡಿಸಬೇಡ, ನನ್ನ ಕರೀತಾರೆ, ಮಾತಾಂಗ ಅಂತಾ ; ಅಷ್ಟೆ

ರೇಣುಕ : ಮಾತಂಗ, ನಾ ನಿನ್ನ ಅಂಗ ! ನೋಡು.....

ಮಾತಂ : ಅದೆಂಗೋ ಬೇರಾಗಿ.....ನೀನು ಜೋಗಿ, ನಾನು ಚೋರ ! ಕತ್ತೆಗೂ
ಕುದುರೆಗೊ ಒಂದೇಯಾ ?

ರೇಣುಕ : ಹೊರವೇಷ ಬೇರೆ, ಆದರೆ ಒಳಗಿನಾತ್ಮ....ಅದು ಒಂದೇ ಅಲ್ಲವೇ?
ಅಣ್ಣಾ ನಾ ಬೇರೆ ನೀ ಬೇರೆ ಯಾವುದೂ ಬೇರಲ್ಲ.
ನಾವಿಬ್ಬರೂ ಒಂದೇ, ಒಂದೆ ಸತ್ವದಿನಾದ ಎರಡು ಬೊಂಬೆ !

ಮಾತಂ : ಎಂಥ ಮಾಯೆಯ ಬಲೆಯ ಬೀಸಿದೆಯೊ ಸನ್ಯಾಸಿ !
ತುಕ್ಕು ಹಿಡಿದಿದೆ ಬುದ್ಧಿ, ಏನೊಂದು ತೋಚದಿದೆ
ನಿನ್ನ ಮಾತಿನಲೇನೊ ಗಾರುಡಿಯ ಮಂತ್ರವಿದೆ
ಕೇಳಿದೊಡನೆಯೆ ತನ್ನ ಹೆಡೆ ಮುದುಡಿ ಮಲಗಿತೋ
ನನ್ನ ಕ್ರೌರ್ಯದ ಸರ್ಪ !

ರೇಣುಕ : ಈ ಭಾವನೆಯೆ ಹೊಂಬೆಳಕು ! ಮಾನವೀಯತೆ ಕಾಂತಿ !
ನೀನೀಗ ನಿಜ ಮಾನವ !

ಮಾತಂ : ಇಲ್ಲ ಇಲ್ಲ.....ನಾನೀ ಮಾತನ್ನು ಒಪ್ಪುವುದಿಲ್ಲ ನಾ ಮನುಜನಲ್ಲ
ರಾಕ್ಷಸ. ಗೈದಿರುವೆ ರಾಜ್ಯ ಸಾಮ್ರಾಜ್ಯಗಳ ವೈಭವದ ಕೊಳ್ಳೆ
ಲಕ್ಷ ನರ ಪಿಳ್ಳೆಗಳ ದಾಕ್ಷಿಣ್ಯ ರಹಿತ ಕೊಲೆ !

ರೇಣುಕ : ಸಂಪತ್ತದೇನಾಯ್ತು....ಎಲ್ಲಿಹುದು? ಏಕಿಹುದು?
ಕೊಳ್ಳೆಯಾ ಹಣದಿಂದ ಸುಖವು ಸಿಕ್ಕಿತೆ ನಿನಗೆ ? ಶಾಂತಿ ದಕ್ಕಿತೆ ಮನಕೆ. ಹೇಳು ಮಾತಂಗ
ಹೇಳೆನ್ನ ಶತಶೃಂಗ !

ಮಾತಂ : ಶಾಂತಿ...? ಸುಖ....? ತೃಪ್ತಿ.....! ?
ನಾ ಕಾಣೆ......ನಾ ಕಾಣೆ !

ರೇಣುಕ : ಮತ್ತೇತಕೀ ಮೋಹ ! ಮತ್ತೇತಕೀ ಕೊಲೆಯು ?
ಸೂರ್ಯ ಚಂದ್ರರು ಇರುವವರೆಗೆ ನೀ ಬದುಕುವೆಯಾ ?
ಇರುವೆರಡು ದಿನಗಳಿಗೆ ಇನಿತು ಆರ್ಭಟವೇಕೆ ?
ಬರುವಾಗ ಬತ್ತಲೆ ಹೋಹಾಗ ಕತ್ತಲೆ
ನಡುವಿನೀ ಹಗಲಿರುಳ ಚೆಲ್ಲಾಟದೆಡೆಯಲ್ಲಿ
ಭೂಮಿ ಆಕಾಶಗಳ ಅಳೆಯಲೆಳಸುವುದೇಕೆ ।
ಬಣ್ಣದೀ ಬದುಕಿಂಗೆ ನೆತ್ತರಿನ ಲೇಪವೇ ?
ಹೇಳಣ್ಣ, ಹೇಳೊ ಕಂದ ?

ಮಾತಂ : ಅರ್ಥವಾಗುತ್ತಿಲ್ಲ ಏನೊಂದು ಸನ್ಯಾಸಿ !
ಎಲ್ಲವನು ನನ್ನವಳ ಒಲುಮೆಗಾಗಿಯೆ ಗೈದೆ
ನನ್ನವಳ ಹಿತಕಾಗಿ ನನ್ನವಳ ನಗೆಗಾಗಿ ಏನೆಲ್ಲ ಗೈದೆ !

ರೇಣುಕ : ಹೌದೇನು ? ಒಳ್ಳಿತಾಯಿತು ತಮ್ಮ
ನಿನ್ನ ಹೆಂಡತಿಗಾಗಿ ಇನಿತೆಲ್ಲ ಪಾಪ ?

ಮಾತಂ : ಪಾಪವೊ, ಪುಣ್ಯವೊ ನಾನರಿಯೆ ಬೈರಾಗಿ

ಅವಳ ಆನಂದಕ್ಕಾಗಿ ಇನಿತೆಲ್ಲ ಗೈದೆ, ಇನ್ನೂ ಗೈವೆ !
ರೇಣುಕ : ಸಂತೋಷ ! ಮಾತಂಗ
ಮಂಡೆ ಬೇಡಿತು ಎಂದು ಕೆಂಡವನು ಮುಡಿಸುತಿಹೆ !
ಭ್ರಮೆ ಸಾಕು.....ಇಂದೆ ಈಗಲೆ ಅವಳ ಬಳಿಗೋಡು ಸೋದರನೆ,
ಪ್ರಶ್ನೆಯೊಂದನು ಕೇಳು, ಉತ್ತರವ ಕೊಂಡು ತಾ !
ನಿನ್ನ ಕೊಳ್ಳೆಗಳಲ್ಲಿ, ಈ ದರೋಡೆ ದ್ರವ್ಯಗಳಲ್ಲಿ
ಒಡೆತನವ ಬೇಡುವ ಆ ನಿನ್ನ ಮಡದಿ, ನಿನ್ನ ಮೋಹದ ಮದಿರೆ
ನೀಗೈದ ಪಾತಕಕೆ ಹಕ್ಕುದಾರಳೆ ಕೇಳು
ನಡೆ ಬೇಗ ಮಾತಂಗ !
ಮಾತಂ : ಹೋಗಿ ಬರುವೆ !... ನಾನು ಬೇಗ ತರುವೆ !
ಅವಳಿತ್ತ ಉತ್ತರವ ನಿನಗೆ ಕೊಡುವೆ !
(ಹೋಗುವನು)
ರೇಣುಕ : ಬೇಗ ಬಾ ನನ್ನ ದೊರೆ, ಉತ್ತರವ ತೆಗೆದು ತಾ !!
.....ಹು ಹ್ಹು ಹ್ಹು (ನಗು)
ಏನು ಮೋಹದ ಕೂಟ ! ಎಂಥ ಮಾಯೆಯ ಹೂಟ !!
ಜಗದಾಟ......ಎಳೆಮಕ್ಕಳಾಡುವಾ ಕಣ್ಣುಮುಚ್ಚಾಲೆ !
ಹೂ..ಬರಲಿ ಮಾತಂಗ ಬೇಗನೈತರಲಿ !
ಮಾತಂ : ಬಂದಿನಿದೊ ಗುರುದೇವಾ ಇದೊ ಬಂದೆ !
(ಪನಪನ ಪನಿಯುತ್ತಿರುವ ರಕ್ತಸಿಕ್ತವಾದ ಖಡ್ಗ ಹಿಡಿದು, ಅದನ್ನೇ ನೋಡಿಕೊಂಡು, ಕೈಯ ನೆತ್ತರ ಕೊಡವಿ ಚೆಲ್ಲುತ್ತಾ ಬರುವನು)
ರೇಣುಕ : (ಭೀತರಾದಂತೆ)
ಏನಿದೀ ಕೆನ್ನೀರು ! ಮಾತಂಗ,
ನಿನ್ನ ರಕ್ತದ ದಾಹ ಹಿಂಗಲಿಲ್ಲವೆ ಇನ್ನೂ ?
ಯಾರ ನೊರೆ ನೆತ್ತರನು ಹೊಳೆ ಹರಿಸಿ ಬಂದಿರುವೆ !
ಏನಗೈದೆಯೊ ತಮ್ಮ ? ಯಾರ ಕೊಲೆ ? ಯಾರ ಬಲಿ ?
ಮಾತಂ : ಪಾಪವೆನ್ನುವ ಬೂತು ! ಅದರ ಕೊಲೆ !
ಇನಿತು ದಿನಗಳವರೆಗೆ ನನ್ನ ತಿನ್ನುತಲಿದ್ದ ಪಾಪವೆನ್ನುವ ಭೂತ !
ಅದರ ಕಗ್ಗೊಲೆಗೈದು ಕೈ ತೊಳೆದು ಬಂದಿರುವೆ !
ರೇಣುಕ : ಅರ್ಥವಾಗುತ್ತಿಲ್ಲ ಮಾತಂಗ..... ಚಾಂಡಾಲ !
ಮಾತಂ : ಗುರುದೇವ, ನಿನ್ನೊಲುಮೆ ಹಗಲಿಂಗೆ ಕತ್ತಲೆಯ ಕೊಳೆ ಅರಿದು !
ಹಾಲಿನಂತಹ ಮನಕೆ ಹೊಲೆಯ ಕಲ್ಪನೆ ಇಲ್ಲ !
ಕೇಳು ಓ ಗುರುವರ್ಯ,
ನನ್ನಾಸ್ತಿ ಪಾಸ್ತಿಯಲಿ ಒಡೆತನವ ಬೇಡುವಾ,
ನನ್ನ ಗಳಿಕೆಯಲೆಲ್ಲ ಪಾಲುಪಾಲೆಂದೆನುವ
ನನ್ನ ಮೋಹದ ಮಡದಿ, ನನ್ನವಳು ನನ್ನಾಕೆ,
ನನ್ನ ಜೀವದ ಉಸಿರು, ನನ್ನ ಕಣ್ಣಿನ ಕಣ್ಣು,
ನನ್ನ ಬಾಳಿನ ಬೆಳಕು, ನನ್ನೊಲುಮೆ ಹೆಣ್ಣು,
ನನ್ನ ಮನದನ್ನೆ ರನ್ನೆಯನು ಹೋಗಿ ಕೇಳಿದೆ ತಂದೆ,
ರೇಣುಕ : ಏನೆಂದು ಹೇಳಿದಳು ? ....ಒಪ್ಪಿದಳೆ ?
ಮಾತಂ : ಒಪ್ಪಿದಳು !.....ಹೊನ್ನಿನಲಿ ಹಿರಿಪಾಲು ಕೇಳಿದಳು !
ಪಾಪದೊಳಗಲ್ಲ !
ನಡೆದ ಕತೆ ಬಿತ್ತರಿಪೆ ಅಲಿಸಾಲಿಸು ತಂದೆ,
ದಾರಿ ತೋರಿಸು ನನಗೆ ಇನ್ನು ಮುಂದೆ.

ರೇಣುಕ : ಶಾಂತನಾಗೆಲೊ ತಮ್ಮ, ನಿಃಭ್ರಾಂತಿಯಿಂದುಸುರು.
ಮಾತಂ : ನೀನೆಲ್ಲಿ ಕೈಕೊಟ್ಟು ಓಡುವೆಯೊ ಎಂದೆನಿಸಿ
ಹಿಂದು ಹಿಂದಕೆ ನೋಟ, ಮುಂದು ಮುಂದಕೆ ಓಟ
ಹೀಗೆ ಸಾಗಿತ್ತಯ್ಯ ನನ್ನಂದಿನಾಟ !
ನಮ್ಮ ಹಟ್ಟಿಗೆ ಹೋಗಿ, ಗುಡಿಸಲಿನ ಬಳಿಸಾರಿ
ಕೂಗಿದೆನು ನನ್ನವಳ......
– ಸಶಬ್ದ ಪೂರ್ವಕ –

**ದೃಶ್ಯ ಬದಲಾವಣೆ**

(ರಂಗ ಬೆಳಗಿದಾಗ ಚಾಂಡಾಲರ ಹಟ್ಟಿ ಕಾಣಿಸುವುದು. ಗುಡಿಸಲು ಅದರ ಮುಂದೆ ಮೇಕೆ, ಕೋಳಿ ಇತ್ಯಾದಿಗಳ ಅಲೆದಾಟ ನೈಜತೆ ತುಂಬಿರುತ್ತದೆ ದೃಶ್ಯದಲ್ಲಿ)

ಮಾತಂಗ : ಮಾತಂಗೀ....! ಮಾತಂಗೀ !
ಮಾತಂಗಿ : (ಗುಡಿಸಲಿಂದ ಹೊರಬರುತ್ತಾ)
ಏನ ಗಂಡ್ಸೆ ಕರ್ದೆ....? ತಿನ್ನಾಕ ಬೇಕೇನು ?
ಕರುಳು ಕರಿದಿದ್ದೀನಿ, ಬೆರಳು ಬೇಯ್ಸಿದ್ದೀನಿ
ಮೆದುಳು ಬೆಣ್ಣೀ ತೆಗೆದು ಮುದ್ದೆ ಮಾಡಿಟ್ಟಿದ್ದೀನಿ
ತಿನ್ನೂವೇ ಬಾ ! ಮೆಲ್ಲೋಣು ಬಾ !
ಬುಂಡೇ ತುಂಬಾ ಕಳ್ಳು, ಅಂಡೇ ತುಂಬಾ ಕಳ್ಳು !
ಕುಡಿಯೋವಾ ಬಾರ್ಲಾ !
ಕುಣಿಯೋವಾ ಬಾರ್ಲಾ !
(ಕೈ ಹಿಡಿದೆಳೆಯುವಳು)
ಮಾತಂಗ : (ತಲೆಕೊಡವಿ) ನಾನೊಲ್ಲೆ !
ಮಾತಂಗಿ : ಅಯ್ ! ಯಾವ ಸೀಮೆ ಗಂಡಸ್ಲಾ ನೀನು !
ಬಾರ್ಲಾ ನನಗಡವಾ!
ದಿಪ್ ಅಂತಾ ತಿಂದು
ಗಪ್ ಅಂತಾ ಬಿದ್‌ಕಳಾನಾ !
ಮಾತಂಗ : ಮಾತಂಗೀ.....ನಾನೀಗ ವ್ರತಧಾರಿ !
ಮಾತಂಗಿ : ಅಂದ್ರೇನ್ಲಾ ?
ಮಾತಂಗ : ಜಂಗಮಯ್ಯಗೆ ನಾನು ಕೊಟ್ಟು ಬಂದೆಹೆ ಮಾತ !
ಮಾತಂಗಿ : ಕೈ ಮ್ಯಾಗೆ ಕೈ ಹಾಕ್ಯಾ ?
ಮಾತಂಗ : ಅಹುದಹುದು, ಭಾಷೆಯನು ಕೊಟ್ಟಿರುವೆ, ಆಶೆ ತಂದಿರುವೆ ?
ಮಾತಂಗಿ : ಅಯ್ಯಾ ನನ್ ಗಿಡ್ಡ ಗಂಡ್ಸೇ.....
ನಮಗೆಂತಾದ್ಲಾ ರೊತ ಗಿತಾ !
ದನ ತಿನ್ನೋನ್ಗೆ ಗೊಬ್ಬರದಾಣೆ ಅಂತೆ ? ಹೆಹ್ಹೆಹ್ಹೆಹ್ಹೆ !
ಬಾ ತಿಂಬಾನ ! (ಎಳೆಯುವಳು)
ಮಾತಂಗ : ಸ್ವಾಮೇರ್ಗೆ ಸುದ್ದಿ ಮುಟ್ಟಿಸೋ ಗಂಟಾ
ನಾ ಉಣ್ಣೆ, ನಾ ತಿನ್ನೆ, ನಾ ಕುಡಿಯೆ ಹೆಣ್ಣೇ
ಮಾತಂಗಿ : ಅಯ್ಯೋ ನನ್ನ ಹಳಸಲ ಮುದ್ದೆ !
ಯೋಳು ಯೋನು ಸುದ್ದಿ ?
ಮಾತಂಗ : ಮಾತಂಗಿ, ದಿನನಿತ್ಯ ನಾ ತರುವ ಹೊನ್ನೆಲ್ಲ ಎಲ್ಲಿ ?
ಮಾತಂಗಿ : ಅಲ್ಲೈತೇ....ನಿಂಗ್ಯಾಕ್ಲಾ ಅದರ ಸುದ್ದೀ...ನನಗ್ ಬುಡು !
ಅದಿರ್ಲೀ ಇವತ್ತೇನ್ ತಂದ್ಲಾ ? ಅದೇಟು ತಂದೆ ?....
ಏಸು ಜನ ಕೊಂದೆ ? ಏಸು ಮಕ್ಕಳು ತಿಂದೆ ?
ಏಟು ಕೊಳ್ಳೆ ಸಿಕ್ತು ! ತೋರಸ್ಲಾ ನನ್ ಸವತೀ ಮಗನೇ ?

ಮಾತಂಗ : ಜಂಗಮರ ಬಳಿಯಿಂದ ವ್ರತವೊಂದ ತಂದಿರುವೆ
ಬೇರೇನು ತರಲಿಲ್ಲ ? ಯಾರ ತಲೆಯನು ನಾನು ಹೊಡೆಯಲಿಲ್ಲ !
ಮಾತಂಗ : (ದೂರಕ್ಕೆ ಅವನನ್ನು ತಳ್ಳಿ)
ಥೂ ನಿನ್ನ ಮೀಸೆ ಮಣ್ಣಾಗ ! ನಿನ್ನ ಮಕಕ್ಕೆ
ಬಿರುಸೊಚ್ಚಿ ಹಿಡಿಯಾ !
ನೀನೂ ಒಬ್ಬ ಗಂಡ್ಸು ಹಂಗಾರೆ !......
ಮಾತಂಗ : ಮಾತಂಗಿ, ಹುಡುಗಾಟ ಸಾಕು, ಕೇಳಿಲ್ಲಿ
ನಾ ನಿತ್ಯ ತರುತಿರುವ ಕೊಳ್ಳೆ ಹಣದಲ್ಲಿ
ನಿನಗೆಷ್ಟು ? ನನಗೆಷ್ಟು ? ಹೇಳು.
ಮಾತಂಗಿ : ಅಯ್ಯೋ ನನ್ನ ಕಟ್ನೇ!...ಕೇಳೋ ಗಂಡ್ಸೇ
ಬೇಡಿದ ಗಂಡ ಕೂಡಿದ ಹೆಂಡ್ತಿ ! ಪಾಲೆಂತಾದೋ !
(ತಿವಿಯುವಳು)
ಮಾತಂಗ : ಹಾಗಲ್ಲ....ಆ ಅರ್ಥದಲ್ಲಲ್ಲ ನಾ ನಿನ್ನ ಕೇಳಿದ್ದು.....
ನನ್ನ ದಿನ ದುಡಿಮೆಯಲಿ ನಿನ್ನದೆಷ್ಟಿದೆ ಪಾಲು ?
ಮಾತಂಗಿ : ಏನು ದೊಡ್ಡರೋಗ ಬಂತಪ್ಪಾ ಇವತ್ತು ಇದ್ಕೇ
ಯೋನೇನೋ ಮಾತಾಡ್ತೈತೆ !
ಏ ಗಂಡ್ಸೇ, ಕೇಳು –
ತಿದದ್ದು, ಕುಡಿದದ್ದು, ಮೋಜು ಮಾಡಿದ್ದು
ಇಷ್ಟು ಬಿಟ್ಟು ಉಳಿದದ್ದು ನನ್ನದಲ್ವೇನೋ ನನ್ನತ್ತೆ ಮಗನೇ !
ಮಾತಂಗ : ಹಾಗಾದರೆ ಉಳಿಸಿದ್ದರಲ್ಲಿ ನನಗೇನೂ ಪಾಲಿಲ್ಲ ?
ಮಾತಂಗಿ : ಉಂಡೂಟ ತುಂಡ್‌ಗಂಬ್ಳಿ ಸಾಲ್ದಾ?
ಮೈ ಮಾಂಸಾ ಹಾಸ್ತೀನಲ್ಲ ನಾನು, ಸಾಲ್ದಾ ?
ಮಾತಂಗ : ಅಂತಿರಲಿ ಮಾತಂಗಿ
ನನ್ನ ವೈಭವದಲ್ಲಿ ಪಾಲು ಬೇಡುವ ನೀನು
ನನ್ನ ಆಪತ್ತಿನಲಿ ಹೊಣೆಗಾರಳಾಗುವೆಯಾ ?
ನಾ ಗೈದ ಪಾಪದಲಿ ನಿನಗು ಪಾಲುಂಟಷ್ಟೆ?
ಮಾತಂಗಿ : (ಕೋಪ ನಟಿಸಿ)
ಯಾಕ್ಲಾ ? ಯೋನೊನೋ ಕೇಳ್ತಿಯಾ ?
ನಿನ್ ಒಡ್ಡೊಡಿಯಾ ? ನಿನ್ನ ಕಣ್ಣಿಂಗಿ ಕಪಾಳ ಸಿಡಿಯಾ !
ನಿನ್ನ ಮೈ ತೀಟೆ ತೀರ್‍ಸೋದು ಸಾಲ್ದಾ ನಾನು
ಸುಕಕ್ ಸಾನು, ಸುಂಕಕ್ಕಲ್ಲ....ತಿಳೀತಾ ?
ನಿನ್ನ ಪಾಪ ನಿನಗೆ ! ನನ್ನ ಪುಣ್ಯ ನನಗೆ !
ನಿನ್ನ ಪಾಪ ಕಟ್ಟಿಕೊಂಡು ನನಗೇನ್ಲಾ ಆಗ್ಬೇಕು !
ಮಾತಂಗ : ಹಾಗಾದರೆ, ನನ್ನ ದುಡಿಮೆ ಬೇಕು, ನನ್ನ ಪಾಪ ಬೇಡ ?
ನಾಳೆ ನನ್ನ ಹಣ ಬೇಕು, ನನ್ನ ಹೆಣವೂ ಬೇಡ ಅಲ್ವೇ ?
ಮಾತಂಗಿ : ಬ್ಯಾಡಾ....ಬ್ಯಾಡ.....ಬ್ಯಾಡಾ....!
ಯಾವಾಳ್ಲಾ ಬೇಡ್ತಾಳೆ ? ನಾನು ನಿನ್ನ ಜೊತ್ಯಾಗಿ
ಬರ್‍ನಿಲ್ಲಾ, ಜೊತ್ಯಾಗಿ ಓಗಲ್ಲಾ !
ಬಂದದ್ದು ಕಾಣೆ, ಸೇರೋದು ಕಾಣೆ !
ಕಂಡದ್ದು ಈಟೇ – ನಾಕು ಜಿನದ ಜೀವ !
ಮಾತಂಗ : ನೀನು ನನ್ನ ಕಣ್ಣಿನ ಕಣ್ಣು ! ಜೀವದ ಮೋಜು !
ನನ್ನ ಸರ್ವಸ್ವವೂ ನಿನ್ನದು, ನಾನು ನಿನಗಾಗಿ ಅಂತಾ
ಭಾವಿಸಿದೀನಿ ! ನೀನೂ ನನ್ನ ಹಾಗೆ ನನಗಾಗಿ

ಬಾಳ್ತಾ ಇಲ್ವಾ ?

ಮಾತಂಗಿ : ಅಯ್ಯೋ ಹುಚ್ಚು ಗಂಡ್ಸೇ ! ಹುಚ್ಚು ಗಂಡ್ಸೇ !
ನಾನಿರೋದು, ನಾನು ಬದುಕ್ತಿರೋದು ನನಗಾಗಿ
ನಿನಗಾಗೂ ಅಲ್ಲ, ನಿಮ್ಮಪ್ಪಗಾಗೂ ಅಲ್ಲ !
ನನಗೆ ಸುಖ ಬೇಕು. ನಾ ಕೇಳಿದೆ ನೀ ಕೊಟ್ಟೆ !
ಅಷ್ಟೇ ನನ್ನ ಭಾಗಕ್ಕೆ ಸತ್ಯ !
ಮಿಕ್ಕದೆಲ್ಲಾ ಸಪ್ಪಟ್ಟೆ ಸುಳ್ಳು !

ಮಾತಂಗ : (ಬೇಡುವ ಧ್ವನಿಯಲ್ಲಿ) :
ಮಾತಂಗಿ, ಬಾಯಿಮಾತಿಗಾದ್ರೂ ಹೇಳೆ,
ನನ್ನ ಮನಸ್ಸಿನ ಸಮಾಧಾನಕ್ಕಾದ್ರೂ ಹೇಳೆ,
'ನಾನು ನಿನ್ನವಳು ನಿನ್ನ ಪಾಪದಲ್ಲಿ ನನಗೂ ಪಾಲುಂಟು'
ಅಂತಾ !....

ಮಾತಂಗಿ : ಥೂ ! ನಿನ್ ನೆಗೆದು ಬೀಳಾ,
ಯೋಟು ಪಟಾ ಯೋಳೋದು, ನೀನು ಮಾಡಿದ
ಪಾಪಕ್ಕೆ ನೀನು ಜವಾಬ್ದಾರಳಲ್ಲ, ನೀನು ಕೊಟ್ಟ ಸುಖಕ್ಕಷ್ಟೇ
ನಾನು ಬಾದ್ಯಳು !....ಹೋಗೋಗ್ !
ನೀ ಗಂಡ, ನಾನು ಹೆಂಡ್ರು ನೀನು ದುಡಿದು ಹಾಕೋ ತನಕ !
ಆಮೇಲೆ ನಾಯಿ ಯಾರೊ ಸನ್ಯಾಸಿ ಯಾರೋ ! ಅನ್ನೋ ಹಾಗೆ,
ನಾನೂ ಇಲ್ಲಾ ನೀನೂ ಇಲ್ಲಾ ! ಯಾರಿಗೆ ಯಾರೂ ಇಲ್ಲಾ !

ಮಾತಂಗ : (ಕುಪಿತನಾಗಿ) ಮಾತಂಗಿ, ನನ್ನ ಕೆರಳಿಸಬೇಡಾ,
ಕಡೇ ಸರ್ತಿ ಕೇಳ್ತಿದೀನೀ, ಹೇಳಿಬಿಡು
ನನ್ನ ದುಡಿಮೇಲಿ ಪಾಲಿದ್ದಂಗೆ ನನ್ನ ಕೊಲೇಲೂ ಪಾಲೈತೆ
ನಾನು ಮಾಡಿದ ಪಾಪದಲ್ಲೂ ಪಾಲೈತೇ....

ಮಾತಂಗಿ : ಇಲ್ಲಾ...ಯೋಳಾಕಿಲ್ಲಾ......

ಮಾತಂಗ : ಹೇಳು.........ಹೂಂ ಹೇಳು !

ಮಾತಂಗಿ : ಯೋಳಾಕಿಲ್ಲಾ......ಯೋಳಾಕಿಲ್ಲಾ....!

ಮಾತಂಗ : ಹೇಳು....ಹೇಳದೇ ಹೋದರೆ....

ಮಾತಂಗಿ : ಏನ್ಮಾಡ್‌ತೀಯ್ಲಾ ?

ಮಾತಂಗ : ಏನ್ಮಾಡ್ತೀನಾ....ನೋಡ್ಕೋ !

(ಕತ್ತಿಯಿಂದ ಅವಳ ಪಕ್ಕೆಗೆ ಇರಿಯುವನು)

– ಮಾತಂಗಿ "ಅಯ್ಯೋ" ಎಂದು ಚೀರಿ ಬೀಳುವಳು –

**ದೃಶ್ಯ ಬದಲಾವಣೆ**

(ಕತ್ತಲಾಗಿದ್ದ ರಂಗಭೂಮಿ ಮತ್ತೆ ಬೆಳಕಾದಾಗ ರೇಣುಕರ ಬದಿಯಲ್ಲಿ ಮೊದಲಿನಂತೆಯೇ ನಿಂತಿರುತ್ತಾನೆ. ಮಾತಂಗ ತನ್ನ ರಕ್ತ ಸಿಕ್ತ ಖಡ್ಗವನ್ನು ತೋರಿಸುತ್ತಾ)

ಮಾತಂಗ : (ತಮ್ಮ ಕಿವಿಗಳೆರಡನ್ನೂ ಮುಚ್ಚಿ)
ಅವಳ ಮೈ ನೆತ್ತರಿದು । ಕಲುಷಿತಾತ್ಮಗಳ ರಕ್ತ ।

ರೇಣುಕ : (ತಮ್ಮ ಕಿವಿಗಳೆರಡನ್ನೂ ಮುಚ್ಚಿ)
ಶಿವಾ ಶಿವಾ ! ಶಾಂತಂ ಪಾಪಂ !
ಶಾಂತಂ ಪಾಪಂ !
ಎಂಥ ಘೋರವ ಗೈದೆ, ಪಾತಕವೊ ಮಾತಂಗ
ಘೋರ ಪಾತಕ ಗೈದೆ ! ಅವಳು ಬದುಕಲು ಬೇಕು
ನಡೆ ಬೇಗ ನಡೆ ಬೇಗ ನಿನ್ನ ಹಟ್ಟಿಯ ಗುಡಿಗೆ !

ಮಾತಂಗ : ಬೇಡ ನನ್ನಪ್ಪಾ !....ಅದು ಕೊಳಚೆ ತುಂಬಿದ ಜಾಗ

ಕೊಚ್ಚೆ ಹರಿಯುವ ಜಾಗ ! ಬೇಡ ತಂದೆ !

ರೇಣುಕ : ನೀನು ಬರದಿರೆ ನಾನೆ ಹೋಗುವೆನು ಮಾತಂಗ
ನೀನೀಗ ಪತ್ನಿಯನು ಕೊಲೆಗೈದೆ:
ಆ ಕೊಲೆಗೆ ಕಾರಣನು ನಾನು !
ನನ್ನ ಪ್ರೇರಣೆಯಿಂದ ಮುಗ್ಧೆಯನು ಮುಗಿಸಿರುವೆ
ಆ ನಿನ್ನ ಪಾಪದಲಿ ನನಗಿಹುದು ಹಿರಿಪಾಲು !
ನನಗು ಪಾತಕವಿತ್ತೆ ! ಪಾತಕದ ಕೊಳೆ ಬಳಿದೆ !

ಮಾತಂಗ : (ದಿಕ್ಕು ತೋರದಂತವನಾಗಿ ತಲೆ ಚಚ್ಚಿಕೊಳ್ಳುತ್ತಾ ರೇಣುಕರ ಪಾದಗಳ ಮೇಲೆ ಬಿದ್ದು)
ಅಯ್ಯಯ್ಯೋ ನನ್ನಪ್ಪಾ...ಏನ್ ಮಾಡಿಬುಟ್ನೋ
ನನ್ ತಂದೆ ! ನಿನ್ನನ್ನೇ ಕೊಂದೆನಲ್ಲಪ್ಪಾ !

ರೇಣುಕ : ಮೇಲೇಳು ಮಾತಂಗ, ತ್ವರೆ ಮಾಡು !
ನಿನ್ನ ಗುಡಿಸಲು ತೋರು.
ಓಡು, ನಡೆ ಬೇಗ ಹುಂ ಬೇಗ !....

(ಇಬ್ಬರೂ ಓಡುವರು, ರಂಗಭೂಮಿ ತುಸು ಕಾಲ ನೀರವ – ಆನಂತರದಲ್ಲೊ ಮಾತಂಗಿ ಜೊತೆಗೂಡಿ ಬರುವರು)

ರೇಣುಕ : ಮಾತಂಗ, ಮಾತಂಗಿ
ಕತ್ತಲೋಡಿತು ಇಂದು ನಿಮ್ಮ ಬಾಳ್ ಬಾನಿನಲಿ
ದೇವ ದೊಡ್ಡವನು ! ಶಿವನ ಕರುಣೆ ಅಪಾರ !
ಮಾತಂಗ, ನೀನಿರಿದ ಖಡ್ಗ, ಪುಣ್ಯವಶಾತ್
ಮಾತಂಗಿಯುದರವನು ಬಲಿಗೊಳ್ಳಲಿಲ್ಲ
ಗಾಯಗೊಳಿಸಿತು ಅಷ್ಟೆ !
ಗಾಯಕ್ಕೆ ಬೇಕಾ ವನೌಷಧವ ಹಚ್ಚಿರುವೆ,
ಬಹುಬೇಗ ಗುಣವಹುದು ! ಅಂತಿರಲಿ ಮಾತಂಗ, ಮಾತಂಗಿ
ನೀವಿಬ್ಬರೂ ಕೂಡಿ....

ಮಾತಂಗ : ಬೇಡ ತಂದೆ.....

ರೇಣುಕ : ವೈರಾಗ್ಯ ಉದಯಿಸಿತೆ ?

ಮಾತಂಗ : ಉರಿವ ದೀಪದ ಕುಡಿಗೆ ಹೂವೆಂದು ಮುತ್ತಿಡುವ
ಚಿಟ್ಟೆಯಂತಾಗಿದ್ದೆ ! ಕಣ್ಣ ತೆರೆಸಿದೆ ನೀನು
ನಾನಿನ್ನ ಪದವ ಬಿಡೆ, ಸಂಸಾರ ಕೂಪಕ್ಕೆ ನನ್ನ ನೀ ತಳ್ಳದಿರು
ನನಗೆ ಮಾರ್ಗವ ತೋರು,
ಈ ದುಷ್ಟ ಜಂತುವನು ಮನುಜನಾಗಿಸು ತಂದೆ !
ಮನುಜನಾಗೆಂದು ನೀ ಹರಸು ಇಂದೆ !

ಮಾತಂಗಿ : ಅಪ್ಪಪ್ಪಾ, ನೀನು ಹಚ್ಚಿದ ಮದ್ದು ಮೈಗಾಯ ಕಳೆವಂತೆ.
ನಿನ್ನ ಹಿತಬೋಧನೆಯು ಮನಕೆ ಆಗಲಿ ಮದ್ದು,
ಮತ್ತೆ ಸಂಜೀವಿನಿ ! ನಮ್ಮಿಬ್ಬರಿಗು ನೀನೆ ತಂದೆ !

ರೇಣುಕ : ಕಲ್ಯಾಣ ಕಾರ್ಯದಲ್ಲಿ ನೀವಿಬ್ಬರೂ ತೊಡಗಿ
ಕಳ್ಳದಿರಿ, ಕೊಲ್ಲದಿರಿ, ಪುಸಿಯನ್ನು ನುಡಿಯದಿರಿ
ಮುನಿಯದಿರಿ, ಅನ್ಯರಿಗೆ ಅಸಹ್ಯವೆನ್ನದಿರಿ,
ತನ್ನ ಹೊಗಳಿಕೆ ಬೇಡ, ಇದಿರು ಹಳಿವುದು ಬೇಡ !
ನಿತ್ಯ ನಿರ್ಮಲವಾದ ತಿಳಿಮನದ ತೀರ್ಥದಲಿ
ಶಿವನ ರೂಪದ ಸಕಲ ಜೀವಾತ್ಮಗಳಿಗೆಲ್ಲ
ಲೇಸನ್ನೆ ಗೈಯುತಿರಿ
ಸತ್ಯ ಶುದ್ಧಿಯ ತೆದ ಕಾಯಕವ ಕೈಗೊಂಡು

ಜಗಕೆಲ್ಲ ಬೆಳಕಾಗಿ, ಜಗದನ್ನವಾಗಿ !
(ಹರಸುವರು ಇಬ್ಬರೂ ಮಣಿಯುವರು)

ಇಬ್ಬರೂ : ಧನ್ಯರಾದೆವು ತಂದೆ ! ಮಾನ್ಯರಾದೆವು ತಂದೆ !
ಮನುಜರಾವು ! ಇಂದು ಮನುಜರಾವು !

ರೇಣುಕ : ಹೋಗಿ ಬನ್ನಿರಿ ಶಿವನ ಕರುಣೆಯಾ ಕಂದಗಳೇ,
ಅಂದಿನಾ ಚಾಂಡಾಲ ಇಂದಿನಿಂ ಮಾತಂಗ ಋಷಿವರ್ಯ !
ತಂಗೀ, ನೀನವನ ಶಿಷ್ಯೆ ! ಕಡೆವರೆಗು ಕೂಡಿ ಬಾಳಿರಿ ನೀವು.
– ಶಿವಂ ಭೂಯಾತ್ ! –
ನಾವು ಲೋಕದ ಕಡೆಗೆ !!
ಕಾಲ ಕಾಲಕು ಬಂದು ಲೋಕ ಮರ್ಯಾದೆಯನು
ಕಾಪಿಡಲು ದುಡಿಯುವೆವು.
ಗೆಲವಿರಲಿ, ಸೊಗವಿರಲಿ ಧರ್ಮಕ್ಕೆ ಜಯವಿರಲಿ
ವಿಶ್ವಶಾಂತಿಯು ನಿಲಲಿ, ಮುನುಕುಲಕೆ ಮಂಗಲವು ಕೂಡಿ ಬರಲಿ
ಓಂ ಶಾಂತಿಃ ಓಂ ಶಾಂತಿಃ ಓಂ ಶಾಂತಿಃ !

(ಇಲ್ಲಿ ಮೂರು ಸಾಲುಗಳು ಟೈಪ್ ಆಗಿಲ್ಲ)

ಹಾಡು : ಜಯ ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯಹೇ ಜಯ ಗೀತಾಂಜಲಿ ॥
ಪ್ರಾಂಜಲ ಮನದಾ ಮಕ್ಕಳ ಮೇಳವು
ಆದಿ ಜಗದ್ಗುರು ರೇಣುಕರೊಲವನು
ಜಗದೊಳು ಸಾರುವ ಕೈಂಕರ್ಯದೊಳು
ನಿರುತವು ಸೂಸಿದ ಈ ಪುಷ್ಪಾಂಜಲಿ ॥ ಜಯ ॥
ಮಂಗಳವಾಗಲಿ ಮಹಿಮೋನ್ನತರಿಗೆ
ಮಂಗಳವಾಗಲಿ ಸೋಮೇಶ್ವರಗೆ
ಮಂಗಳ ಸಾಸಲ ಬನಶಂಕರಿಗೆ
ಬಸವಗೆ ಎಡಯೂರ ಸಿದ್ಧಲಿಂಗೇಶಗೆ ॥ ಜಯ ॥
ಕುಪ್ಪೂರು ಗದ್ದಿಗೆ ಮರುಳುಸಿದ್ದೇಶಗೆ
ಶ್ರೀ ಚಂದ್ರಶೇಖರ ಗುರುವರ್ಯನಿಗೇ
ಆ ಯತೀಶಗೆ ಶಿವಾಚಾರ್ಯರಿಗೆ
ಮರುಳನ ಮಾತನು ಆಲಿಸಿದವರಿಗೆ ॥ ಜಯ ॥

**ಶಿವಧವಳ ಹಾಡು : ಅರದಿರು ಹಣತೆ**
ಆರದಿರು ಅರದಿರು ಅರದಿರು ಹಣತೆ
ಆರದಿರು ಓ ವಿಶ್ವ ವೀರಶೈವದ ಬೆಳಕೆ ॥ ಪ ॥
ಈಶಾನ ತತ್ಪುರುಷ ಪರಮ ಸದ್ಯೋಜಾತ
ವಾಮದೇವಾಘೋರ ಪಂಚಮುಖದಿಂದೆ
ಜನಿಯಿಸಿದ ಜಗದಾದಿ ಚಿಜ್ಯೋತಿ ಚೇತನವೆ
ಪ್ರಜ್ವಲಿಸು, ಪ್ರಸ್ಫುರಿಸು ದಿವ್ಯ ದೀಧಿತಿಯಾಗು ॥ 1 ॥
ಅಕ್ಕ ಮುಕ್ತಾಯಿಯರು ಬಸವೇಶ ಸಕಲೇಶ
ಪ್ರಭುದೇವ ಸೊನ್ನಲಿಗೆ ಸಿದ್ಧರಾಮ
ಚಿನ್ನ ಬಸವಾದಿಗಳು ಶರಣ ಶರಣೆಯರೆರೆದ
ಕರುಣೆಯೊಲವಿನ ತೈಲ ತುಂಬಿರುವ ಹಣತೆ ॥ 2 ॥
ಎಡೆಯೂರ ಜಡೆಮುಡಿಯ ವರಸಿದ್ಧಲಿಂಗ ಯತಿ
ಬೋಳ ಬಸವಾದಿಗಳು ನೂರೊಂದು ಅಮರಗಣ
ಅನವರತ ಪೋಷಿಸಿದ ಪುಣ್ಯ ಪುಂಜದ ಬೆಳಸೆ

ದಿಟವಾಗು ಸ್ಫುಟವಾಗು ದಿವ್ಯ ತೇಜೋರಾಶಿ
ವಾರಾಶಿಯಾಗು ॥ 3 ॥

ಆರದಿರು ವಿಶ್ವದಾ ವೀರಶೈವದ ಕೆಚ್ಚೆ !
ಆರದಿರು ಜನಮನದ ಸ್ವಾತಂತ್ರ್ಯ ದಿಚ್ಚೆ !
ಆರದಿರು ಲಿಂಗಾಂಗಿ ಸತ್ಸಂಗ ತೇಜವೇ !
ಆರದಿರು ಆತ್ಮರತ ಪರತರದ ಜ್ಯೋತಿಯೆ ॥ 4 ॥

ಆರದಿರು ಆರದಿರು ಆರದಿರು ಹಣತೆ
ಆರದಿರು ಓ ವಿಶ್ವ ವೀರಶೈವದ ಬೆಳಕೆ ।

– ಶುಭಂ –

# ಯೇಸು ಬಂದ ಧರೆಗೆ

## ಪಾತ್ರಗಳು

ಯೇಸುಕ್ರಿಸ್ತ

ಯೋಹಾನ (John, the Boptist)

ಜುಡಾಸ್

ಮಗ್ದಲದ ಮೇರಿ

ಫರಿಸಾಯಿಗಳು

ರಾಜಭಟರು

ಯುವ, ಯುವತಿಯರ ಮೇಳ

ತಾಯಿಮೇರಿ

ಮತ್ತಿತರ ಹೆಂಗಸರು

ನಿರ್ಮಾಪಕರು ಮತ್ತು ನಿರ್ದೇಶಕರು :

ಶ್ರೀಮತಿ ರಾಧಾ ಶ್ರೀಧರ್

# ದೃಶ್ಯ: 1
# ಉದ್ಯಾನ

ತೆರೆ ಸರಿವ ಮೊದಲು ಚರ್ಚಿನ ಘಂಟಾನಾದ ಧ್ವನಿಸುತ್ತದೆ; ಪ್ರತಿಧ್ವನಿಸುತ್ತದೆ ಕೂಡ. ರಂಗ ಮಧ್ಯದಲ್ಲೊಂದು ಜಗಲಿ, ಅದರ ಮೇಲೆ ಯೇಸು ಮೊಣಕಾಲೂರಿ, ತನ್ನ ತೋಳುಗಳೆರಡನ್ನೂ ಮುಗಿಲತ್ತ ಚಾಚಿ ಗಗನವನ್ನೀಕ್ಷಿಸುತ್ತ ಕುಳಿತಿದ್ದಾನೆ. ಅವನ ಸುತ್ತಲೂ ಪೀಠದ ಬುಡದಲ್ಲಿ ಬಿಳಿ ಉಡುಪು ಧರಿಸಿರುವ ಹತ್ತಾರು ಜನ ಯುವಕ ಯುವತಿಯರು ಪ್ರಾರ್ಥನಾ ಭಂಗಿಯಲ್ಲಿ ಕುಳಿತಿದ್ದಾರೆ ಅವರೇ ಮೇಳದವರು, ತೆರೆ ಸರಿದಾಗ ಒಂದೇ ಒಂದು Spot - light ಪ್ರಖರವಾಗಿ ಯೇಸುನಾಥನ ಮುಖದ ಮೇಲೆ ಬಿದ್ದಿರುತ್ತದೆ.

ಮೇಳ : (ಹಾಡು, ನರ್ತನ)
ಬುವಿ ಬಾನ ತುಂಬಿರುವ ಓ ಸರ್ವವ್ಯಾಪಿಯೆ
ನಿನ್ನ ನಾಮಾಮೃತವು ಪಾವನದ ಸರಸಿ
ವಿಶ್ವದಣು ಘನದಂತೆ ಸಿದ್ಧಿ ಸೊಗವೈತರಲಿ
ನಮ್ಮ ನಡೆ ನುಡಿಯಲ್ಲಿ ಮಡಿಯ ಕಲಿಸಿ !

ದಿನದ ದಾಹವ ತವಿಸೆ ದಯೆದೋರು ಓ ಧೇನು
ನಿನ್ನೆದೆಯ ಸೊದೆಯನ್ನು ಅನವರತನಾಗಿ !
ನಿನ್ನ ಕರುಣಾಗಂಗೆ ನಮ್ಮ ಮನ ಮಲಿನತೆಯ
ತೊಳೆದು ಶುದ್ಧವಗೈಯೆ ಬರಲಿ ಸಾಗಿ ॥

– ಹಾಡು ಹರಿದಂತೆ ನರ್ತಕ ನರ್ತಕಿಯರು ನಿಧಾನವಾಗಿ ಮೇಲೆದ್ದು ನರ್ತಿಸುತ್ತಾರೆ.

ಯೇಸು : ಸಗ್ಗದುಪವನದಲ್ಲಿ ವಿಹರಿಸುವ ಓ ತಂದೆ
ದಯೆದೋರು, ದಯೆದೋರು !
ನಿನ್ನ ಸೃಷ್ಟಿಯಲೆನಿತೊ ಸೌಂದರ್ಯ ತುಂಬಿಹುದು.
ಆಗಸಕೆ ನೀಲಿಯನು ಬಳಿದಿರುವೆ
ಮರಗಿಡಗಳೆಲ್ಲವಕು ಹಸಿರನ್ನು ಹರಿಸಿರುವೆ
ಹೂವ ಹೊಂಬಟ್ಟಲಲಿ ಮಧುವನ್ನು ತುಂಬಿರುವೆ
ಏಳು ಬಣ್ಣದ ನವಿಲು, ಅದುವೆ ಕಾಮನಬಿಲ್ಲು !
ಎಲ್ಲೆಲ್ಲೂ ಚೆಲುವೆ ಚೆಲುವು !

ಭೂಮಿಗಿತ್ತಿಹೆ ನೀನು ಹೊರುವ ಶಕ್ತಿ
ಗಾಳಿಗೋ ಅನವರತ ಸುಳಿವ ಯುಕ್ತಿ
ಹರಿವೊನಲ ಸಲಿಲಕ್ಕೆ ಎಣೆಯಿಲ್ಲದನುರಕ್ತಿ !
ಮಣ್ಣಿಗೂ ಬೆಳೆ ಬೆಳೆವ ಕಣ್ಣುಕೊಟ್ಟೆ
ಆದರೇಕೋ ತಂದೆ, ಮಾನವನ ಮತಿಯಲ್ಲಿ
ಮಂಗಳವ ತುಂಬದಿಹೆ ?
ಮೇಲು ಕೀಳಿನ ಭಾವ, ಹೆಣ್ಣು ಗಂಡಿನ ಭೇದ
ಅಳರಸರೆಂದೆಂಬ ತಾರತಮ್ಯ !
ಸದ್ಬುದ್ಧಿಯನ್ನು ಕೊಡು
ಸಮತೆಯನು ನೀನೆಮಗೆ ದಯಪಾಲಿಸೊ,
ಬೇರೇನು ಬೇಡ ತಂದೆ
ಮನುಷ್ಯ ಮನುಷ್ಯನಾಗಿ ಬಾಳುವುದ ಕಲಿಸು

(ಅಷ್ಟರಲ್ಲಿ ಯೋಹಾನ (John the Baptist) ರಂಗಭೂಮಿಯ ಒಂದು ಕಡೆಯಿಂದ ಆಗಮಿಸುತ್ತಾನೆ. ಅವನದು ಅರೆಬತ್ತಲೆಯ ದೇಹ, ಕೆದರಿದ ತಲೆ, ಹೆಗಲಮೇಲೊಂದು ಕರಿಕಂಬಳಿ, ಕೈಯಲ್ಲಿ ತನ್ನಷ್ಟೇ ಎತ್ತರದ ಒಂದು ಕೋಲು, ಯೋಹಾನನನ್ನು ನೋಡಿದ ಕೂಡಲೇ ಯೇಸು ಮೇಲೆದ್ದು ಭಾವಪರವಶನಾಗಿ ಅತ್ತ ಧಾವಿಸುತ್ತಾನೆ. ಅವನಿಗೆ ನಮಸ್ಕರಿಸಲು ತೊಡಗುತ್ತಾನೆ, ಆದರೆ ಅವನಷ್ಟೇ ಭಾವ ತುಂಬಿದ ಯೋಹಾನ ಧಾವಿಸಿ ಬಂದು, ಯೇಸುವನ್ನಪ್ಪುತ್ತಾನೆ, ಆಗ......)

ಯೇಸು : ಸೋದರ ಸೋದರಿಯರೆ, ಇದೋ ನೋಡಿ,
ಇವನು ಮಂಗಲದ ಸ್ನಾನಗೈಸುವ ಸ್ವಾಮಿ
ಹೆಸರು ಯೋಹಾನ !

ಮೇಳ : (ಅಚ್ಚರಿಯಿಂದ) ಓಹ್ ! John, the Boptist ಇವರು ಏನು ?

ಯೇಸು : ಈ ಸ್ನಾತಕ ಮಹಾಶಯಗೆ ನಾವೆಲ್ಲ ಮಣಿಯೋಣ, ಬನ್ನಿ !

ಯೋಹಾನ : ಬೇಡಿ, ಬೇಡಿ ಬಂಧುಗಳೇ,
ನಾ ದೇವ ದೂತನಲ್ಲ, ನಾನೊರ್ವ ಸನ್ಯಾಸಿ !
ನೆಲದಲ್ಲಿ ಅಲೆಯುತಿಹ ಬಡಜೋಗಿ !
ದೇವದೂತನವನೊಬ್ಬ, ಅವನೇ ಗೇಬ್ರಿಯಲ್ !
ಅವನ ಸಂದೇಶವನು ಜನಕೆ ಮುಟ್ಟಿಸ ಬಂದೆ
ಇವನು ಈ ಯೇಸು ಜಗದ ಮಂಗಲ ಮೂರ್ತಿ !
ಯುಗ ಯುಗದ ಸತ್ಕೀರ್ತಿ !
ಈ ಇವನೆ ಮಾನವೀಯತೆಯನ್ನು
ಬಿತ್ತಿ ಬೆಳೆಯಲು ಬಂದ ಮಾನವತಾವಾದಿ !

ಮೇಳ : ಯೇಸು ಬಂದ ಧರೆಗೆ ! ನೆನೆವರ
ಈಶ ಬಂದ ತಿರೆಗೆ ॥ ಪ ॥
ಯೇಸು ಸ್ವಾಮಿ ಬಂದ
ಜಗದೀಶ ಸುಖವ ತಂದ ॥ ಅನು. ಪ ॥
ಮನುಜರುಗಳೊಂದೆ ಎಂದ
ಮನುಷ್ಯತ್ವ ಉಳಿಸಿ ಎಂದ
ದೈತ್ಯತೆಯ ದೂರಮಾಡಿ
ಸತ್ಯವನು ಸಾರಿರೆಂದ ॥ 1 ॥
ವಿಶ್ವಾತ್ಮ ವಿಶ್ವ ಜ್ಯೋತಿ
ಈ ನಮ್ಮ ಯೇಸು ಸ್ವಾಮಿ

ನಿನ್ನ ನೀ ಪ್ರೀತಿಪಂತೆ
ನೆರೆಯವರ ಪ್ರೀತಿಸೆಂದ ॥ 2 ॥

ಯೇಸು : ಆತ್ಮೀಯರೆ,
ಈ ಸ್ನಾತಕ ಮಹಾಶಯರಾದ ಯೋಹಾನರು
ನನ್ನ ಮೇಲಿನ ಅಭಿಮಾನದಿಂದ
ನನ್ನನ್ನು ದೈವತ್ವಕ್ಕೇರಿಸಿದ್ದಾರೆ !
ದಯಮಾಡಿ ಹಾಗೆ ಭಾವಿಸದಿರಿ ; ಹಾಗೆ ಭಾವಿಸಿ,
ನನ್ನನ್ನು ನಿಮ್ಮಿಂದ ಬಹು ದೂರ ಇರಿಸದಿರಿ
ನಾನು ನಿಮ್ಮವ, ನಾನು ನಿಮ್ಮವ ನಿಮ್ಮಲ್ಲಿ ಒಬ್ಬ ಕೂಡ
ನಾವೆಲ್ಲರೂ ಒಬ್ಬ ದೇವನ ಮಕ್ಕಳು.

ಹಾಡು : (ಮೇಳ ಹಾಡಿಕೊಂಡು ನರ್ತಿಸುವರು)
ನಾವು ಮಕ್ಕಳು ! ನಾವು ॥ ಪ ॥
ದೇವರೊಕ್ಕಲು !
ನಮ್ಮ ಲೋಕದಲ್ಲಿ ಇಲ್ಲ
ಯಾವ ಕತ್ತಲು ॥ ಅನು. ಪ ॥

ಬೆಳಕು ಬೆಳಕು ಬೆಳಕೆ ಎಲ್ಲ
ಥಳುಕು ಪಳುಕು ಎಂಥದಿಲ್ಲ
ಕೊಳೆಯ ಮನಸು ನಮ್ಮದಲ್ಲ
ಗಂಗೆಯಂತೆ ಪಾವನ
ಹಾಲಿನಂಥ ಚೇತನ ॥ 1 ॥

ಹಳ್ಳ ದಿಣ್ಣೆ ಮೇಲು ಕೀಳು
ಸುಳಿಯದಿಹುದು ಯಾವ ನೆರಳು
ಎಲ್ಲರೊಂದೆ ಒಂದೇ ಕರುಳು
ಎಂಬ ಭಾವ ನಮ್ಮದು, ಸೋದರತ್ವ ತಪ್ಪದು ॥ 2 ॥

ಯೋಹಾನ : ಮಹಾತ್ಮಾ, ನಮಗೆ ದಾರಿ ತೋರು
ನಿನ್ನ ದಿವ್ಯ ಸಂದೇಶದ ಬೆಳಕ ಬೀರು.

ಯೇಸು : ಸ್ನಾಪಕ ಮಹಾಶಯರಾದ ಯೋಹಾನರೆ,
ದಿವ್ಯ ಸಂದೇಶವದು ಆಗಲೇ ಸಿದ್ಧವಿದೆ.
ನಮ್ಮ ಪೂರ್ವಜರಾದ ಅಬ್ರಹಾಮರ ಬರೆಹ,
ಪ್ರವಾದಿ ಮೋಸೆಸ್‌ರಿಂಗೆ ಸಿನೈ ಬೆಟ್ಟದ ಮೇಲೆ
ಭಗವಂತನಿತ್ತಂಥ ಹತ್ತು ದೈವಾಜ್ಞೆಗಳು
ಕಟ್ಟಳೆಗಳೆಲ್ಲವೂ ಬಿತ್ತರಂಗೊಂಡಿಹವು
ಆದರೆ........

ಯೇಹಾನ : ಆದರೆ?.......ಆದರೇನದು ತಂದೆ ?

ಯೇಸು : ಯಾವುದೇ ಸಿದ್ಧಾಂತ ಎಲ್ಲಾ ಕಾಲಕು ತಾನೆ ಸತ್ಯವಲ್ಲ
ಕಾಲ ಕಾಲಕು ಆದುವೆ ತಿದ್ದುಪಡಿ ಬಯಸುವುದು.
ಕೇಳಿ–
ಮೋಸೆಸ್ ತಮ್ಮ ಹಳೆಯ ಒಡಂಬಡಿಕೆಯಲಿ ಹೇಳಿದರು.
ಅಪರಾಧಗೈದವನ ಕಲ್ಲಿಟ್ಟು ಕೊಲಿರೆಂದು.
ನಾನು ಹೇಳುತ್ತೇನೆ ;
ಕೊಲ್ಲುವುದಕಿಂತಲೂ ಕ್ಷಮಿಸುವುದು ಹಿರಿಯ ಗುಣ !
ನನ್ನ ಜೀವಿತದಲ್ಲಿ ಕಂಡಂಥ ದೃಷ್ಟಾಂತ ಕೇಳಿ –

ಆದುವೆ ಮಗ್ದಲ ಮೇರಿ ಎಂಬವಳ ಬಾಳಕತೆ.
ಅಂದೊಂದು ದಿನ :

**ದೃಶ್ಯ ಬದಲಾವಣೆ**

ಯೇಸು ಸಮುದ್ರ ತೀರದ ಮರಳರಾಶಿಯ ಮೇಲೆ ಕುಳಿತಿದ್ದಾನೆ. ಮುಂದುಗಡೆ ಅಲೆಗಳ ಏರಿಳಿತ. ಅವನು ಏನನ್ನೋ ಧೇನಿಸುತ್ತಾ ಭಾವಸಮಾಧಿಯಲ್ಲಿದ್ದಾಗ ನೇಪಥ್ಯದಲ್ಲಿ ಗದ್ದಲ, ಬೊಬ್ಬೆ !

"ಹೊಡೆಯಿರಿ, ಬಡಿಯಿರಿ, ಕಲ್ಲುಗಳ ತೂರಿ
ಮೈ ಚಿಂದಿ ಮಾಡಿರಿ, ಪಾತಕಿಗೆ ಆದೆ ತಕ್ಕಶಿಕ್ಷೆ !"

– ಎಂದೆಂಬ ಹತ್ತಾರು ಜನರ ಅಬ್ಬರದ ವಿಕಟಾಟ್ಟಹಾಸ !

ದೈತ್ಯ ನರ್ತನಗೈಯುತ್ತಾ ಓರ್ವ ಅಬಲೆಯನ್ನು ದರದರ ಎಳೆದು ತರುತ್ತಾರೆ, ಯೇಸುವಿನ ಮುಂದೆ ಅವಳನ್ನು ಚೆಲ್ಲುತ್ತಾರೆ .–

– ಬೀಜಿಮ್ಸ್‌ನಲ್ಲಿ ಪ್ರೇತ ನರ್ತನ –

ಫರಿಸಾಯಿ 1 : ಯೇಸು, ನೀನು ಯಹೂದ್ಯರರಸಂತೆ !
ಅಪರಾಧಗೈದರಿಗೆ ಶಿಕ್ಷೆಯನ್ನೀವ ದಂಡಾಧೀಶನಂತೆ !
ದಾಕ್ಷಿಣ್ಯವಿಲ್ಲದಲೆ ನಿಷ್ಠೆಯಲಿ ಸರ್ವರಿಗೂ
ನ್ಯಾಯದೊರಕಿಸಿಕೊಡುವ ನ್ಯಾಯದೇವತೆಯಂತೆ !
ಈ ಎಲ್ಲ ಅಂತೆ ಕಂತೆಗಳು ಈ ಸತ್ಯವಾಗಲಿ,
ಹೇಳು, ತೀರ್ಪುಕೊಡು !

ಯೇಸು : ಸೋದರರೆ, ಯಾರಿವಳು ?

ಫರಿಸಾಯಿ 2 : ಇವಳು ಮಗ್ದಲದ ಮೇರಿ

ಯೇಸು : ಇವಳನ್ನೇಕೆ ಈ ದುರವಸ್ಥೆಯಲಿ
ಇಲ್ಲಿಗೆಳೆತಂದಿಹಿರಿ ?

ಫರಿಸಾಯಿ 3 : ಗೈದ ಅಪರಾಧಕ್ಕೆ !

ಯೇಸು : ಅಪರಾಧ ಮಹಾಪಾಪ ! ಹೇಳಿ
ಇವಳಾವ ಅಪರಾಧಗೈದಾಕೆ, ಹೇಳಿ.

ಫರಿಸಾಯಿ 4 : ವ್ಯಭಿಚಾರ !
ಇವಳು ಹಲವರಿಗೆ ಸೆರಗು ಹಾಸಿದ ಪತಿತೆ !
ಆದಕೆ ಶಿಕ್ಷೆಯದೇನು ಬೇಗ ತಿಳಿಸು.

ಯೇಸು : ಇವಳು ಮಗ್ದಲವೆಂಬ ನಾಡಲ್ಲಿ ಹುಟ್ಟಿ ಬೆಳೆದವಳು ;
ಹೆಸರು ಮೇರಿ ! ಗೈದ ಅಪರಾಧ ವ್ಯಭಿಚಾರ !
ಅಪರಾಧಕ್ಕೆ ಶಿಕ್ಷೆ ಆಗಲೇಬೇಕು. ಅದು ಅನಿವಾರ್ಯ !
ಸೋದರರೆ,
ಇವಳ ವ್ಯಭಿಚಾರಕ್ಕೆ ಬೇರೊಬ್ಬ ಪುರುಷನಿರಬೇಕಲ್ಲ ?
ಅವನಾರು ? ಅವನಿಗಾವ ಶಿಕ್ಷೆಯ ನೀವು ವಿಧಿಸುವಿರಿ ?
(ಎಲ್ಲರೂ ಬೆಪ್ಪಾಗಿ ನಿಲ್ಲುವರು, ಚಣಕಾಲ ಮೌನ)
ಇರಲಿ ಬಿಡಿ.
ಇವಳಿಗೆ ವ್ಯಭಿಚಾರ ದೀಕ್ಷೆಯನ್ನಿತ್ತವನು
ಎಷ್ಟೇ ಆಗಲಿ ಪುರುಷನಲ್ಲವೆ ?
ಪುರುಷ ಏಗೈದರೂ ಕ್ಷಮೆಗವನು ಪಾತ್ರ !
ಆದರೆ ಹೆಣ್ಣು ವಂಚಿತಳು
ಅವಳಿಗೆ ಶಿಕ್ಷೆ ಆಗಲೇಬೇಕು ?

ಫರಿಸಾಯಿ 5 : ಹೌದು.......ಹೌದು !

ಯೇಸು : ವ್ಯಭಿಚಾರಗೈದುದಕೆ ಯಾವ ಶಿಕ್ಷೆಯ

ವಿಧಿಸುವುದು ನಿಮ್ಮ ಧರ್ಮಶಾಸ್ತ್ರ ?

ಫರಿಸಾರಿ 2 : ನಡುರಸ್ತೆಯಲಿ ನಿಲಿಸಿ, ಜನರ ಸಮ್ಮುಖದಲ್ಲಿ
ಕಲ್ಲಿಟ್ಟು ಕೊಲ್ಲುವುದು !

ಯೇಸು : ಯೋಗ್ಯ ಶಿಕ್ಷೆ ! ಎಲ್ಲಿ ಕಲ್ಲುಗಳ ತಂದಿಹಿರೆ ?

ಎಲ್ಲರೂ : ಓಹೋ ! ಜೋಳಿಗೆಗಳೆಲ್ಲವೂ ತುಂಬಿಹವು !

ಯೇಸು : ಭೇಷ್ ಕರ್ತವ್ಯ ನಿಷ್ಠೆ ಎಂದರೆ ಹೀಗಿರಬೇಕು !
ನಿಮ್ಮ ಮುಂದಾಲೋಚನೆಗೆ ಧನ್ಯವಾದಗಳು !

ಫರಿಸಾಯಿ 1 : ಬಣ್ಣ ಬೇಳುವೆ ಮಾತು ಬೇಡ ಯೇಸು,
ಮೊದಲು ತೀರ್ಪುಕೊಡು

ಯೇಸು : ಆಗಲಿ ಮಿತ್ರರೆ,
ಈ ಮರಳ ಹಾಸಿನ ಮೇಲೆ ನಾನಿವಳ –
ಈ ಮಗ್ದಲದ ಮೇರಿಯ ಹೆಸರ ಬರೆಯುವೆನು ಮೊದಲು
ಆ ಹೆಸರ ಮುಂದೆ ಇವಳು ಗೈದಪರಾಧ,
ಅಪರಾಧಕ್ಕೆ ತಕ್ಕ ಶಿಕ್ಷೆ – ಅದೇ –
ಕಲ್ಲುಗಳಿಂದ ಹೊಡೆದು ಕೊಲ್ಲುವುದು ;
ಎಲ್ಲವನು ಬರೆಯುವೆನು
ಆದರಂತೆ ನಿಮ್ಮೆಲ್ಲರಾ ಹೆಸರುಗಳ
ಈ ಮರಳರಾಶಿಯ ಮೇಲೆ ಬರೆಯುವೆನು
ಯಾರು ತಮ್ಮ ಜೀವಿತದಲ್ಲಿ ಒಂದೂ ತಪ್ಪು ಮಾಡಿಲ್ಲವೊ
ಅಂಥವರು ಇವಳ ಮೇಲೆ ಮೊದಲ ಕಲ್ಲೆಸೆಯಲಿ !.......!..............!
ಹೂಂ, ಕಾರ್ಯತತ್ಪರರಾಗಿ !

– ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡು, ತಾವು ಅಪರಾಧಿಗಳೆಂಬುದನ್ನು ಸಂಜ್ಞೆಯ ಮೂಲಕ ಅಭಿನಯಿಸುತ್ತಾ. ತಂದ ಕಲ್ಲುಗಳನ್ನು ನಿಂತಲ್ಲೆ ಸುರಿದು ಮೆಲ್ಲಗೆ ಜಾರುವರು.

– ಚಣಕಾಲ ಮೌನ ಮೇರಿ ಯೇಸುವಿನ ಪಾದಗಳನ್ನು ಕಣ್ಣೀರಿನಿಂದೊರೆಸುತ್ತ –

ಮೇರಿ : ತಂದೆ, ಓ ತಂದೆ ! ನಾನು ಪಾಪಿ ! ನಾನು ಪಾಪಿ !

ಯೇಸು : ತಾಳಿಕೋ ಮಗಳೇ ತಾಳಿಕೊಳ್ಳಮ್ಮ.
ತಪ್ಪು ಮಾಡದ ಅಪ್ಪಗಳು ಯಾರಿಹರು ಹೇಳು
ಈ ಜಗದಲ್ಲಿ ? ತಪ್ಪು ಮಾಡುವುದು ಮಾನವನ ಸಹಜ ಗುಣ !
ಮನ್ನಿಸುವುದು ದೇವಗುಣ
ಅದು ಕಾರಣ ಹೇಳುವೆನು ಕೇಳು ಮಗು
ಅನ್ಯರನು ಅಪರಾಧಿ ಎಂದು ತೀರ್ಪಿಪ ಮುನ್ನ
ತಾನೆಷ್ಟು ನಿರಪರಾಧೀ ಎಂದು
ತನ್ನತಾ ಪ್ರಶ್ನಿಪುದು ಶ್ರೇಷ್ಠವೆಂಬೆ.
ಜಗವ ತಿದ್ದುವುದಿರಲಿ, ನಿನ್ನ ನೀ ತಿದ್ದಿಕೊ !

ಹಿನ್ನೆಲೆಯಲ್ಲಿ : (Judge not that ye not Judged ಎಂಬ ಘೋಷಣೆ ಮೊಳಗುವುದು)
ನಿನ್ನನು ನೀನು ವಿಮರ್ಶಿಸಿಕೊಳ್ಳದೆ
ಅನ್ಯರ ವಿಮರ್ಶೆಗೆ ಕೈ ಹಾಕಬೇಡ !
ಜಗವ ತಿದ್ದುವುದಿರಲಿ, ನಿನ್ನ ನೀ ತಿದ್ದಿಕೊಳು !

ಮೇರಿ : ಧನ್ಯಳಾದೆನು ತಂದೆ ! ನಾ ನಿನ್ನ ಮಗಳು,
ನಾ ನಿನ್ನ ಮಗಳು !

ಯೇಸು : ಮೇಲೇಳು ತಾಯಿ, ಸ್ವಚ್ಛ ಬದುಕನು ಬದುಕು

ಹಿತದ ಬಾಳನು ಬಾಳು, ಒಳಿತಕ್ಕೆ ; ಸಕಲವೂ ಶುಭಮಕ್ಕೆ !

ಮೇರಿ : ನಾ ನಿನ್ನ ಪಾದಸೇವಕಿ ತಂದೆ,
ಅವಿಚ್ಛಿನ್ನ ಪದಭಕ್ತೆ

ಯೇಸು : ಸಂತೋಷ ಮಗಳೆ, ಸಂತೋಷ
ಮನುಷ್ಯ ಮನುಷ್ಯನಾಗುವ ಪಾಠ ಕಲಿಯಲಿ !
ಲೋಕಕ್ಕೆ ಶಾಂತಿ ಸಿಗಲಿ !
ಮಂಗಳವು ಎಲ್ಲೆಡೆಯು ಮೈಗೂಡಲಿ !

ಮೇಳ : (ಆಗಮಿಸಿ ಹಾಡಿ ನರ್ತಿಸುವುದು)
ಹಾಡಿರಿ ಹೊಗಳಿರಿ ಗೆಳತಿಯರೆ
ಯೇಸುನಾಥನನು ಧ್ಯಾನಿಸಿರೆ ॥
ಹೊಸತನ ತಳೆಯಿತು ಹಳೆ ಬೈಬಲ್
ದಾನವತೆಗೆ ತಾನೆಸೆದ ಸವಾಲ್ ॥
ಮನುಕುಲ ಮಂದಾರ ಯೇಸುನಾಥ
ಮಾನವೀಯತೆ ಕಲಿಸಿದಾತ ॥
ಜಗಕಿತ್ತ ಸಂದೇಶ ಒಂದಲ್ಲ ಹಲವು
ಅವುಗಳ ಪಾಲಿಸೆ ನಮಗೆಲ್ಲ ಗೆಲವು.

**ದೃಶ್ಯ : 2**

**ಪರ್ವತದ ತುತ್ತ ತುದಿ**

– ಎತ್ತರದ ಬೆಟ್ಟದ ಮೇಲೆ ತೋಳ್ಗಳನು ಚಾಚಿ ನಿಂತಿದ್ದಾನೆ ಯೇಸುನಾಥ ಇದನ್ನು Sermon on the Mount ಎಂದು ಕರೆಯುತ್ತಾರೆ –

ಯೇಸು : ಭಗವಂತನ ಮಕ್ಕಳೆ,
ನೀವು ಪಾಪಿಗಳಲ್ಲ, ಅಮೃತಪುತ್ರರು ನೀವು,
ಜ್ಞಾನವೆಂಬುದು ದೇವನಿತ್ತ ವರ ಮಾನವಗೆ
ಅದನು ರಕ್ಷಿಸಿರಿ.
ನಿತ್ಯ ಜೀವನದಲ್ಲಿ ಆಚರಣೆಯಲ್ಲಿರಲಿ !
ಆದ ನೀವು ಬಂಡೆಗಳ ಬದಿಯಲ್ಲಿ
ಕತ್ತಲೆಯ ಗುಹೆಯಲ್ಲಿ ಬಚ್ಚಿಡಲು ಬೇಡಿ
ಅದುವೆ ಅಖಂಡಜ್ಯೋತಿ, ಎಂದೆಂದೂ ಬೆಳಗುತಿರಲಿ !
ನೀವು ಬಾಳಿ, ಅನ್ಯರಿಗೆ ಬಾಳು ಕೊಡಿ
ನೀವ್ ಬೆಳಗಿ ಅನ್ಯರಿಗೆ ಬೆಳಕು ನೀಡಿ.
ಒಂದು ಮಾತನು ನಾನು ಸ್ಪಷ್ಟ ಹೇಳುವೆ ಕೇಳಿ –
ನೀವು ಈ ನೆಲದ ಉಪ್ಪಾಗಿದ್ದೀರಿ !
ಉಪ್ಪೇ ಸಪ್ಪೆಯಾದರೆ ಉಪ್ಪಿನ ರುಚಿಯನ್ನು
ಮತ್ತಾವ ವಸ್ತುವಿನಿಂದ ಕೊಡಲು ಸಾಧ್ಯ ?

ಆಲೋಚಿಸಿ,
ಷಡ್ರಸಗಳಲ್ಲಿ ಸಿಹಿಯನ್ನು ಹಣ್ಣಿನಿಂ ತರಬಹುದು
ಕಬ್ಬಿನಿಂ ತರಬಹುದು
ಖಾರವನು ಮೆಣಸಿನಕಾಳು, ಮೆಣಸಿನಕಾಯಿ ;
ಹುಳಿಯನ್ನು ಹುಣಸೆ ನಿಂಬೆಗಳಿಂದ ;
ಆದರಂತೆ ಉಳಿದೆಲ್ಲ ರಸಗಳಿಗೆ ಪರ್ಯಾಯ ವಸ್ತುವುಂಟು !

ಆದರೆ,
ಉಪ್ಪಿಗಾವುದು ಇಲ್ಲ ಪರ್ಯಾಯ ವಸ್ತು !

ಉಪ್ಪನ್ನು ಉಪ್ಪಿನಿಂದಲೇ ತರಬೇಕು !
ನೀವು ಈ ನೆಲದ ಉಪ್ಪಾಗಿದ್ದೀರಿ ಅಂದರೆ
ನೀವು ಮನುಷ್ಯರಾಗಿದ್ದೀರಿ,
'ಉಪ್ಪೇ ಸಪ್ಪೆಯಾದರೆ'! ಅಂದರೆ ನಿಮ್ಮಲ್ಲಿರುವ
ಮನುಷ್ಯತ್ವವನ್ನು ನೀಗಿಕೊಂಡರೆ
ಉಪ್ಪಿನ ರುಚಿಯನ್ನು ಮತ್ತಾವ ವಸ್ತುವಿನಿಂದ
ಕೊಡಲು ಸಾಧ್ಯ ? ಅಂದರೆ,
ನಿಮ್ಮಲ್ಲಿಲ್ಲದ ಮನುಷ್ಯತ್ವವನು ಯಾರು ತುಂಬಲು ಸಾಧ್ಯ ?
ಅದರಿಂದೆ,
ಏನಾದರೂ ಆಗಿ ಮೊದಲು ಮಾನವರಾಗಿ !
ಇದೆ ನಾನು ನಿಮಗಿತ್ತ ಸಂದೇಶ ! ನಿತ್ಯದಾದೇಶ !

ಮೇಳ : ಹಾಡಿರಿ ಹೊಗಳಿರಿ ಗೆಳತಿಯರೆ
ಯೇಸು ಸ್ವಾಮಿಯ ಧ್ಯಾನಿಸಿರೆ,
ಸತ್ಯ ಅಹಿಂಸೆ ದಯೆ ಕರುಣಾಂಸೆ
ಮಡಿಲೊಳಗಿಟ್ಟು ಪಾಲಿಸಿದರೆ ॥
ಆತ್ಮಪ್ರಶಂಸೆ ಪರನಿಂದೆಯ ನೀವ್
ದೂರವಿರಿಸಿರಿ ಬಾಳ್ ಬೆಳಗಿಸಿರಿ ॥
– ನರ್ತಿಸುತ್ತಾ ನಿರ್ಗಮಿಸುವರು –

**ದೃಶ್ಯ : 3**
**ಗೊಲ್ಗೊಥದ ಹಾದಿ**

ಜುಡಾಸ್ : (ನರ್ತಿಸುತ್ತಾ)
ನಾನೇ.....ಜೂಡಾಸ್ !
ನನ್ನಯ ಕೃತ್ಯಕೆ ನಾನೆ ಶಹಬ್ಬಾಸ್ !
ನೀವು ಕರೆದುಕೊಳಿ ಬದ್ಮಾಷ್ ! ಬದ್ಮಾಷ್ !
ನಾನಿಲ್ಲದೆ ಜಗ ಸಾಗದೊ ಮಂಕೇಶ್ ॥
ಹಗಲಿನ ಬಳಿಯಲಿ ಇರುಳಿರುವಂತೆ
ಯೇಸುವಿನೆಡೆಯಲಿ ನಾನಿದ್ದೆ
ಜೂಡಾಸ್ ಇರದಿರೆ ಬೆಳಕನು ಕಾಣನೊ
ನಿಮ್ಮಯ ಮೆಚ್ಚಿನ ಆ ಯೇಸು ॥
ನಾನೇ....ಜೂಡಾಸ್
ಯೇಸು ಕ್ರಿಸ್ತನ ಶಿಷ್ಯರುಗಳಲಿ
ಹನ್ನೆರಡನೆಯವ ಈ ಜುಡಾಸ್ !
ಲಂಚಕೆ ಆಶಿಸಿ ಯೇಸುವ ಮಾರಿದೆ
ಸೆರೆಹಿಡಿದಿತ್ತೆನು ಶೂರ, ಗೆತ್ಸೆಮೇನೆಯಾ ತೋಟದಲಿ
ನಾನೇ.....ಜೂಡಾಸ್ !
ಸತ್ಯಸಾರ್ಧಾನಾ ಗತಿಯೇನಾಯ್ತು ?
ನೋಡಿರಿ ಗೊಲ್ಗೊಥ ಶಿಖರದಲಿ
ತಲೆಯನು ತುಂಬಿದೆ ಮುಳ್ಳು ಕಿರೀಟ
ಜಡಿದುಡೆಕಚ್ಚಿದ ಮೊಳೆಗಳ ನೋಟ !
ನೆತ್ತರು ಸುರಿಸುವ ಕಣ್ಣೀರ್ಗರೆವ
ದೇವ ಮಾನವನ ಗತಿಯನು ನೋಡಿ ॥
ಸತ್ಯಕೆ ಸಾವನು ತರುವುದ್ದೇಶ
ಮಿಥ್ಯವ ಮೆರೆವುದೆ ನನ್ನಯ ಕೆಲಸ ॥

ನಾನೇ.........ಜೂಡಾಸ್ !!

– (ಇದ್ದಕ್ಕಿದ್ದಂತೆ ಚಂಡೆ ಮೊದಲಾದ ಭೀಕರ ವಾದ್ಯ ಪರಿಕರಗಳ ಶಬ್ದ ಐದಾರು ಜನ ರಾಜಭಟರು ಭರ್ಜಿಗಳನ್ನು ಹಿಡಿದು ಜುಡಾಸ್‌ನನ್ನು ಸುತ್ತುಗಟ್ಟುವರು. ಭರ್ಜಿಗಳನ್ನು ಹಿಡಿದು ಅವನನ್ನು ತಿವಿಯುವಂತೆ ನಟಿಸಿ ನರ್ತಿಸುವರು. ಜುಡಾಸ್ ಭಯಭೀತನಾಗಿ ನೆಗೆದಾಡುವನು) –

ಭಟರು : ಜೂಡಾಸ್........! ಜೂಡಾಸ್.........! ಜೂಡಾಸ್........!
ಪರಮ ಪಾತಕಿಯೆ, ಗುರುದ್ರೋಹಿಯೇ
ಯೇಸುನಾಥನಾ ಶಿಲುಬೆ ಕಾರಣನೆ
ನಿನಗಿದೊ ಕಾದಿದೆ ಮರಣದ ಶಾಸ್ತ್ರಿ
ಹ್ಹಾ........ಹ್ಹಾ............ಹ್ಹಾ............ಹ್ಹೊ...........

ಜುಡಾಸ್ : ಬೇಡಿರೋ ದಮ್ಮಯ್ಯ ಕೊಲ್ಲಬೇಡಿರೋ
ನಿಮ್ಮ ಮನೆಯ ಮಗನೆಂದು ದಯೆಯ ತೋರಿರೋ॥

ಭಟರು : ತಂದೆಗಿಂತಲು ಮಿಗಿಲು ಪ್ರೀತಿಸಿದ ಯೇಸುವನು
ಗೆತ್ಸೆಮೇನೇ ಎಂಬ ತೋಟದಲಿ ಬಂಧಿಸಿದೆ.
ಪಾಪಿ ಫರಿಸಾಯಿಗಳ ಕೈಯೊಳಗೆ ಇತ್ತೆ,
ಆ ದೇವತಾತ್ಮನನು ಶಿಲುಬೆಗೇರಿಸುವಂಥ
ಪಾತಕಕೆ ನೀನೆ ಕಾರಣನಾದೆ !
ನಮ್ಮ ರೋಮ್ ಸಾಮ್ರಾಜ್ಯದಾ ಪ್ರತಿನಿಧಿಯು
ಜೆರುಸಲೆಮ್ಮಿನ ವಲಯದಾ ರಾಜ್ಯಪಾಲ,
ಆ ಪಿಲಾತನು ಕೂಡ ತೀರ್ಪೀವ ಸಮಯದಲಿ
ಕಣ್ಣೀರ ಕರೆಕರೆದು, ತಿಳಿನೀರ ತರಿಸಿ
ತನ್ನ ಕೈಗಳ ತೊಳೆದು, ಪಾಪ ನನಗಿಲ್ಲ,
ಜನರ ಒತ್ತಾಯಕ್ಕೆ ಮಣಿದು
ಕಳ್ಳರಿಬ್ಬರ ಕೊಡೆ ಯೇಸುನಾಥನ ಇಂದು
ಶಿಲುಬೆಗೇರಿಸಿರೆಂದು ತೀರ್ಪುಕೊಡುತಿಹೆನು
ದೇವಮಾನವ ಯೇಸು ನನ್ನನ್ನು ಮನ್ನಿಸಲಿ !
ಪ್ರಾರ್ಥನೆಯ ಸಲಿಸಿದನು, ಪಾಪಿ ಜುಡಾಸ್,
ನೆಲದಿಂದ ಬಿಡುಗಡೆಗೆ ನೀ ಸಿದ್ದನಾಗು !

ಜುಡಾಸ್ : ಅಯ್ಯಯ್ಯೋ ಕಾಪಡಿ...........ಯಾರಾದರೂ ಕಾಪಾಡಿ !

(ಅಷ್ಟರಲ್ಲಿ ಯೇಸುವಿನ ಹೆಗಲ ಮೇಲೆ ಶಿಲುಬೆಯನ್ನು ಹೊರಿಸಿಕೊಂಡು ಅವನ ತಲೆಯ ಮೇಲೆ ಮುಳ್ಳಿನ ಕಿರೀಟವಿಟ್ಟು, ಚಾಟಿಗಳಿಂದ ಹೊಡೆಯುತ್ತಾ ಕೆಲವರು ಫರಿಸಾಯರು ಎಳೆತರುವರು, ಯೇಸು ಸೊರಗಿದ್ದಾನೆ, ಚಾಟಿಯೇಟಿನ ಗಾಯ ಚೆಲ್ಲೆಂದು ಚಿಮ್ಮುವ ರಕ್ತ, ಆ ಕರುಣಾಜನಕ ಸ್ಥಿತಿ ನೋಡಲಾರದೆ ಹಲವರು ಹೆಂಗೆಳೆಯರು ಹಾದಿಯುದ್ದಕ್ಕೂ ಕಣ್ಣೀರು ಕರೆಯುತ್ತಾ ಬರುತ್ತಾರೆ, ಜುಡಾಸನ ಮೊರೆ ಕೇಳಿ ಯೇಸು, ಫರಿಸಾಯಿಗಳ ಅಪ್ಪಣೆಪಡೆದು, ಭಟರ ಬಳಿ ಬಂದು)

ಯೇಸು : ಸೋದರರೆ, ಬಿಟ್ಟು ಬಿಡಿ, ಬಿಟ್ಟು ಬಿಡಿ ಇವನನ್ನು
ಇವನಾವ ತಪ್ಪನ್ನೂ ಎಸಗಿಲ್ಲವಪ್ಪಾ !
ಎಸಗಿದ್ದರೂ ಅದುವು ಅಕ್ಷಮ್ಯವೇನಲ್ಲ
ಕ್ಷಮಿಸಿವನ ತಂದೆಗಳೆ,
ತಾನೇನನೆಸಗಿದೆನೆಂಬುದನಯನಿವನು
ಅವನ ಪರವಾಗಿ ನಿಮ್ಮಲ್ಲಿ ಸೆರಗೊಡ್ಡಿ ಬೇಡುವೆನು.

ಭಟರು : ಓ ಗುರುವೆ, ಓ ವರವೆ ! ಓ ಜಗದ್ಗುರುವೆ !
ನಿಮಗೆ ದ್ರೋಹವ ಬಗೆದ ಈ ಪಾಪಿ ಪರವಾಗಿ
ಕ್ಷಮೆಯ ಯಾಚಿಪುದೇ ? ಬಿಟ್ಟು ಬಿಡಿ.
ಈ ಕ್ಷಣವೆ ಇವನ ಮೈ ಚಿಂದಿಗೈದೆಪೆವು.

ಯೇಸು : ಸೋದರರೆ, ಪಾಪಿಗೂ ಉದ್ಧಾರಕೆಡೆಯುಂಟು
ಆ ದೇವ ದೇವನಾ ಕರುಣೆಯಾ ಲೋಕದಲಿ
ಅವನನ್ನು ಬಿಟ್ಟುಬಿಡಿ, ನಿಮ್ಮ ಪಾದವ ಹಿಡಿದು ಬೇಡುವೆನು !

ಭಟರು : ಛೇ ಛೇ ಬೇಡ ಮಹಾತ್ಮ ! ಈಗಲೇ ಬಿಟ್ಟಪೆವು !
– ಜುಡಾಸ್ ಓಡಿಬಂದು ಯೇಸುವಿನ ಪಾದ ಹಿಡಿದು ಕ್ಷಮೆಬೇಡುವನು–

ಜುಡಾಸ್ : ಕ್ಷಮಿಸು ತಂದೆ ನನ್ನ ಅಪರಾಧವೆಲ್ಲವನು ಕ್ಷಮಿಸಿ ಕಾಪಾಡು !
ನಿನ್ನಡಿಯ ಬದಿಯಲ್ಲಿ ತಲೆಯಿಡಲು ಸಮ್ಮತಿಸು !

ಯೇಸು : ಸೋದರನೆ, ಕ್ಷಮಿಸಲಕೆ ನಾನಾರು ?
ಎಲ್ಲರನು ಕ್ಷಮಿಸಲಿಕೆ ಅಲ್ಲಿಹನು ಸ್ವಾಮಿ !
ಒಳ್ಳಿತಾಗಲಿ ನಿನಗೆ ! ನಿನಗೆ ಶುಭಮಕ್ಕೆ,

ದೂತರು : ಹೂಂ.......ಉಪದೇಶ ಸಾಕು ! ಬಾ ಶಿಲುಬೆಗೇರು.

– ಎಳೆಯುವರು, ಒದೆಯುವರು, ಹೆಂಗಳೆಯರು ಕಣ್ಣೀರು ಕರೆಯುತ್ತಾ ಪ್ರಾರ್ಥನೆಯ ಸಲ್ಲಿಸುವರು, ಚರ್ಚ್‌ಘಂಟೆಯ ಶಬ್ದ ಮೊಳಗುವುದು –

## ದೃಶ್ಯ : 4

## ಗೊಲ್ಗೊಥದ ಶಿಖರ

– ಯೇಸುವನ್ನು ಶಿಲುಬೆಗೇರಿಸಿ ಎತ್ತರದಲ್ಲಿ ಎತ್ತಿನಿಲ್ಲಿಸಿದ್ದಾರೆ, ಮಗ್ದಲದ ಮೇರಿ, ತಾಯಿ ಮೇರಿ ಮೊದಲಾದ ಹತ್ತಾರು ಹೆಂಗೆಳೆಯರ ರೋದನ –

ಯೇಸು : ತಾಯಂದಿರೆ, ನನಗಾಗಿ ಮರುಗದಿರಿ, ಕಣ್ಣೀರ ಕರೆಯದಿರಿ,
ನೀವು ಕಣ್ಣೀರ್ ಕರೆಯೆ ದಾಹವಾಗುವುದೆನಗೆ !
ಆ ನೀರ ಕುಡಿಯುವೆನೆ ? ಅದು ಮೇಲೇರದಿಹುದು !
ನೀವು ದುಃಖಿಸೆ ನನಗು ದುಃಖ ಇಮ್ಮಡಿಸುವುದು !
ಸಾಯುವಾತಗೆ ಬೇಕು ಸಾಂತ್ವನದ ನುಡಿಜೇನು.
ನೀವು ನಡೆಯಿರಿ ನಿಮ್ಮ ಬಾಳ ತಿರೆಗೆ
ನಾನು ತೆರಳುವೆ ನನ್ನ ತವರು ಮನೆಗೆ !

ಓ ತಂದೆ,
ಎಲೀ ಎಲೀ ಲಮ್ಮಾ ಸಬಖ್ತಾನಿ !
ದೇವರೇ.........ದೇವರೇ ಯಾಕೆನ್ನ ಕೈಬಿಟ್ಟೆ
ನನ್ನ ಕರೆದುಕೊ ತಂದೆ ನಿನ್ನ ಮನೆಗೆ
ನಾನು ಬರುವೆ.......ನಾನು ಬರುವೆ !
ಶಾಂತಿ.........ಶಾಂತಿ........ಶಾಂತಿ.......!

ಮಗ್ದಲದ ಮೇರಿ : ತಣ್ಣಗಾಯಿತು ಜೀವ ಕಣ್ಣೀರೊಳದ್ದು
ಓ, ದೇವರೇ, ಸರ್ವಾಂಗ ಸುಂದರವಾದ ಈ ಜಗತ್ತನ್ನೇನೋ
ನೀನು ಸೃಷ್ಟಿಸಿದೆ, ಆದರೆ ನೀನು ಕಳುಹಿಸಿದ ಸಂತರನ್ನು
ಸ್ವಾಗತಿಸುವ ಚೈತನ್ಯವನ್ನು ಎಂದು ಕೊಡುವೆ, ತಂದೆ ಎಂದು ಕೊಡುವೆ !

ತಾಯಿಮೇರಿ : ಉತ್ತರಕೆ ಯುಗ ಉರುಳಿಯಾವು ! ಬನ್ನಿ ಪ್ರಾರ್ಥನೆಯ ಸಲಿಸೋಣ

ಮೇಳ : – (ಅಭಿನಯ ಹಾಡು)
ಕಗ್ಗತ್ತಲೊಡಲಿನಲಿ ಪರಿವ ಹರಿಗೋಲಂತೆ
ಚುಕ್ಕಾಣಿ ನೀನಾಗಿ ದಾರಿ ತೋರು
ಸರ್ವಶಕ್ತಿಯು ನೀನೆ ಯತ್ನ ಸಿದ್ಧಿಯು ನೀನೆ

ವಿಶ್ವಗಾಯಕ ಹಾಡಿ ಅರಿವ ನೀಡು ॥
ನಮ್ಮೆದೆಯ ಸಮವರಳಿ ಕ್ಷಮೆಯ ಸೌರಭ ಸೂಸಿ
ನಿನ್ನಡಿಗೆ ಮುಡಿಸಲಿಕೆ ತೆರವು ನೀಡು
ನಿನ್ನದೇ ಈ ರಾಜ್ಯ, ನಿನ್ನದೇ ಈ ಭೋಜ್ಯ
ನಿನ್ನದೀ ನಲನಾಡು ನಮ್ಮ ಪಾಡು !

## ಬೆನ್ನುಡಿ

ಡಾ. ಮರುಳಯ್ಯನವರು ತಮ್ಮ ರೂಪಕಗಳಲ್ಲಿ ಹಲವು ಬಗೆಯ ಗೇಯ ಪ್ರಕಾರಗಳನ್ನು ಪ್ರಯೋಗಶೀಲವಾಗಿ ಪ್ರವೇಶಗೊಳಿಸಿದ್ದಾರೆ. ಇದರಿಂದ ಈ ಭಾಗಗಳನ್ನು ನಾಟ್ಯಧರ್ಮಿಯ ಅಭಿನಯದಿಂದಲೂ ತೋರಿಸಬಹುದು. ಈ ರೂಪಕಗಳನ್ನು ರಂಗದ ಮೇಲೆ ಪ್ರಯೋಗಿಸಬಯಸುವವರು ಈ ಸಾಧ್ಯತೆಯನ್ನು ಪರಿಶೀಲಿಸಬಹುದು. ಈಗಿರುವ ರೂಪದಲ್ಲಿ ಈ ರೂಪಕಗಳಲ್ಲಿ ಹಾಡು ಇತ್ಯಾದಿ ಸೂಚನೆಯಿಲ್ಲದಿರುವ ಅಂಶಗಳನ್ನು ಮಾತಾಡುವ ಶೈಲಿಯಲ್ಲೇ ಎಂದರೆ ಲೋಕಧರ್ಮಿಯಲ್ಲಿ ಪ್ರಸ್ತುತಪಡಿಸಬೇಕು ಎನ್ನುವ ಇಂಗಿತವಿದೆ. ತಾಳನಿಬದ್ಧ (ತಾಳದ ಸೂಚನೆಯನ್ನು ಹಾಡುಗಳಿಗೆ ಎಲ್ಲೂ ಕೊಟ್ಟಿಲ್ಲ) ಲಯನಿಬದ್ಧ ಎಂಬ ಅಂಶಗಳು, ವಾಚನದ ಅಂಶಗಳು ಮತ್ತು ಸಾಮಾನ್ಯ ಸಂಭಾಷಣೆಯ ಅಂಶಗಳು – ಇವುಗಳಿಂದ ರೂಪಕಗಳ ಪ್ರಸ್ತುತಿಯಲ್ಲಿ ಹೆಚ್ಚಿನ ವೈವಿಧ್ಯವು ದೊರೆತು ಸತ್ತ್ವಶಾಲಿಗಳಾಗುತ್ತವೆ.

ಪರಿಶೀಲನೆಯಲ್ಲಿರುವ ರೂಪಕಗಳಲ್ಲಿ ನರ್ತನವನ್ನು ಬಿಡಿಪಾತ್ರಗಳೂ ಪಾತ್ರ ದ್ವಂದ್ವಗಳೂ ಸಮೂಹಗಳೂ ಮಾಡುತ್ತವೆ. ತಾಳ–ಲಯ ನಿಬದ್ಧ ಹಾಡುಗಳಿಗೂ ಹಾಗಿಲ್ಲದವುಗಳಿಗೂ ಕುಣಿತವನ್ನು ಹೇಳಿದೆ. ಆದುದರಿಂದ ನೃತ್ಯ ಶೈಲಿಯು ತಜ್ಞತೆಯ ವಿವಿಧ ಸ್ತರಗಳಲ್ಲಿರುತ್ತದೆ. ಕಲಾತ್ಮಕವಾದ ವಾತಾವರಣವನ್ನು ಸೃಷ್ಟಿಸಲೆಂದೂ, ಉತ್ಸಾಹ, ಸಂಭ್ರಮ, ಕೋಲಾಹಲ, ಉದ್ವೇಗ ಮುಂತಾದವುಗಳ ಅಭಿವ್ಯಕ್ತಿಗೆಂದೂ ನರ್ತನವುಂಟು. ಕಥೆಯನ್ನು ಮುಂದುವರೆಸುವ ಸಂಭಾಷಣೆಗಳಿಗೆ ಅಭಿನಯವೂ ಇದೆ. ಹಲವೆಡೆಗಳಲ್ಲಿ (ನರ್ತನವನ್ನು ಹೇಳದಿದ್ದರೂ) ಸಂಭಾಷಣೆಗಳನ್ನು ಸಂವಾದ ಗೀತೆಗಳನ್ನಾಗಿ ಮಾಡಿಕೊಂಡು ವಾಚನ ಕ್ರಮದಲ್ಲಿ (recitative) ಹಾಡಿ ಅದಕ್ಕೆ ನಾಟ್ಯಧರ್ಮಿಯದ ಹಸ್ತಮುದ್ರೆಗಳನ್ನೂ ಪಾದಚಲನೆಗಳನ್ನೂ ಅಳವಡಿಸಲು ಅವಕಾಶವಿದೆ.

ಒಟ್ಟಿನಲ್ಲಿ, ಈ ನೃತ್ಯರೂಪಕಗಳು ಕನ್ನಡ ನಾಟಕ ಕ್ಷೇತ್ರದಲ್ಲಿ ಒಂದು ಒಳ್ಳೆಯ ಪ್ರಯೋಗ. ಶಾಸ್ತ್ರೀಯ ಪರಿಸರದ ಹೊರಗೆ ವೃತ್ತ ನೃತ್ಯಗಳನ್ನು ಅಳವಡಿಸುವುದರ ಬಗೆಗೆ ಚಿಂತನೆಯನ್ನು ಪ್ರೇರಿಸಿ, ರಂಗಾನ್ವಯದಲ್ಲಿ ತೊಡಗಿಸುತ್ತವೆ. ನೃತ್ಯನಾಟಕ ನಿರ್ಮಾಣದ ವಿಷಯದಲ್ಲಿ ಮೇಲೆ ಹೇಳಿರುವ ವಿಷಯಗಳನ್ನು ಮೈಗೂಡಿಸಿಕೊಂಡರೆ ಕನ್ನಡ ರಂಗಭೂಮಿಗೆ ಒಂದು ದೀರ್ಘ ಕಾಲದ ಕೊಡುಗೆಯಾಗುವುದರಲ್ಲಿ ಸಂದೇಹವಿಲ್ಲ.

**– ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ**